ಮೇ 31 ✦ **ನಿನ್ನನ್ನು ರೂಪಿಸಿದವನು!** ✦ ಬೆಳಿಗ್ಗೆ : 2 ಪೂ.ವೃ. 13,14 ಸಂಜೆ : ಯೋಹಾ. 12:1–19

"ಇಸ್ರಾಯೇಲ್ ಸಂತಾನವೇ, ಸೃಷ್ಟಿಸಿ ನಿನ್ನನ್ನು ರೂಪಿಸಿದವನಾದ ಯೆಹೋವನು ಹೀಗನ್ನುತ್ತಾನೆ, ಭಯಪಡಬೇಡ, ನಿನ್ನನ್ನು ವಿಮೋಚಿಸಿದೆನಲ್ಲಾ..." (ಯೆಶಾ. 43:1).

ನಿಮ್ಮನ್ನು ಸೃಷ್ಟಿಸಿದಾತನೇ, ನಿಮ್ಮನ್ನು ರೂಪಿಸುವ ಜವಾಬ್ದಾರಿಯನ್ನು ಹೊತ್ತುಕೊಂಡನು. ರಕ್ಷಣೆ ಹೊಂದಿದ ಪ್ರತಿಯೊಬ್ಬ ವಿಶ್ವಾಸಿಯನ್ನೂ ಕರ್ತನು ನೀತಿವಂತನನ್ನಾಗಿ ಪರಿಶುದ್ಧನನ್ನಾಗಿ ರೂಪಿಸುವನು. ನೀವು ಕ್ರಿಸ್ತನಲ್ಲಿ ಪೂರ್ಣತೆಯನ್ನು ಪಡೆಯಲು ಕರೆಯಲ್ಪಟ್ಟವರು. ನಿಮ್ಮನ್ನು ಕ್ರಿಸ್ತಯೇಸುವಿನಲ್ಲಿ ನೆಲೆಯಾಗಿ ನಿಲ್ಲಿಸಲು ಎಲ್ಲಾ ದೇವಸೇವಕರು ನಿಮಗಾಗಿ ಶ್ರಮಿಸುವರು.

ನಿಮ್ಮನ್ನು ಆತ್ಮೀಕ ಜೀವಿತದಲ್ಲಿ ರೂಪಿಸಲು, ಸಭೆಯಲ್ಲಿ ಐದು ಬಗೆಯ ಸೇವಕರನ್ನು ಕರ್ತನು ಇಟ್ಟಿರುವನು. ಅಪೊಸ್ತಲರು, ಪ್ರವಾದಿಗಳು, ಸೌವಾರ್ತಿಕರು, ಕುರುಬರು, ಬೋಧಕರು ಅವರೆಲ್ಲರೂ ಒಂದು ಗೂಡಿ ನಿಮ್ಮನ್ನು ರೂಪಿಸುವರು. ಸತ್ಯವೇದ ಪುಸ್ತಕ ನಿಮ್ಮನ್ನು ರೂಪಿಸುವದು. ಪವಿತ್ರಾತ್ಮನು ನೀವು ಪರಿಶುದ್ಧವಾದ ಪಾತ್ರೆಗಳಾಗಿ ಕಾಣಲ್ಪಡುವಂತೆ ನಿಮ್ಮನ್ನು ರೂಪಿಸುತ್ತಾನೆ. ನೀವು ಕರ್ತನ ಕೈಯಲ್ಲಿನ ಜೇಡಿ ಮಣ್ಣುಗಳಾಗಿರುವಿರಿ. ಆ ಮಣ್ಣನ್ನು ಯಾವ ಪಾತ್ರೆಯನ್ನಾಗಿ ರೂಪಿಸಬಹುದು ಎಂಬುದನ್ನು ಕುರಿತು ಕರ್ತನಿಗೆ ಒಂದು ನಿರ್ದಿಷ್ಟವಾದ ಧ್ಯೇಯ ಉಂಟು, ಚಿತ್ತ ಉಂಟು. ಒಂದು ಗಟ್ಟಿಯಾದ ಇಟ್ಟಿಗೆಯನ್ನು ರೂಪಿಸಬೇಕಾದರೆ ಅದು ಬೆಂಕಿಯ ಜ್ವಾಲೆಯ ಮೂಲಕ ಹಾದು ಬರಬೇಕಾದದ್ದು ಅವಶ್ಯವಾದದ್ದು. ಹಾಗೆಯೇ ಕರ್ತನು ನಿಮ್ಮನ್ನು ಅಗ್ನಿ ಅಭಿಷೇಕದಿಂದ ತುಂಬುವನು. ಹಾಗೆಯೇ ಕರ್ತನು ಯಾಕೋಬನನ್ನೂ, ಇಸ್ರಾಯೇಲ್ಯನನ್ನೂ ರೂಪಿಸಿದನು. ಯಾಕೋಬು ಎಂಬುದು ಪ್ರಾಕೃತ ಮನುಷ್ಯನನ್ನೂ, ಇಸ್ರಾಯೇಲ್ ಎಂಬುದು ಆಂತರ್ಯದಲ್ಲಿರುವ ಮನುಷ್ಯನನ್ನೂ ಸೂಚಿಸುವದು. ಯಾಕೋಬು ಶರೀರವಾಗಿದ್ದರೆ, ಇಸ್ರಾಯೇಲು ಆತ್ಮವಾಗಿ ಇರುವದು. ಹಳೆ ಒಡಂಬಡಿಕೆಯ ಇಸ್ರಾಯೇಲ್ಯರು ಕರ್ತನೊಂದಿಗೆ ಸುನ್ನತಿಯ ಮೂಲಕ ಒಡಂಬಡಿಕೆ ಮಾಡಿಕೊಂಡರು. ನಾವಾದರೋ ಕ್ರಿಸ್ತನ ರಕ್ತದ ಮೂಲಕ ಒಡಂಬಡಿಕೆ ಮಾಡಿಕೊಂಡಿರುವೆವು. ಅಪೊ. ಪೌಲನು ಹೀಗೆ ಹೇಳುತ್ತಾನೆ "ಒಳಗೆ ಯೆಹೂದ್ಯನಾಗಿರುವವನೇ ಯೆಹೂದ್ಯನು; ಮತ್ತು ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ. ಇದು ಬಾಹ್ಯಾಚಾರಕ್ಕೆ ಸಂಬಂಧ ಪಟ್ಟದ್ದಲ್ಲ. ಆತ್ಮ ಸಂಬಂಧಪಟ್ಟದ್ದೇ. ಇಂಥ ಸುನ್ನತಿಯಿದ್ದವನಿಗೆ ಬರುವ ಹೊಗಳಿಕೆಯು ದೇವರಿಂದಲೇ ಹೊರತು ಮನುಷ್ಯರಿಂದ ಬರುವದಿಲ್ಲ" (ರೋಮಾ. 2:29).

ದೇವಜನರೇ, ನೀವು ಈ ಶರೀರವೆಂಬ ಗುಡಾರದಲ್ಲಿ ಜೀವಿಸಿ ಪರಲೋಕದ ವಾಸಸ್ಥಳವನ್ನು ಬಯಸಿರಿ. ಕರ್ತನು ನಿಮ್ಮ ಬಾಹ್ಯ ಮನುಷ್ಯನನ್ನೂ ಒಳಗಿನ ಆತ್ಮವನ್ನೂ ನೋಡುವನು.

*ನೆನಪಿಗೆ : ಯಾಹುವು ಯಾಕೋಬನ ವಂಶದವರಾದ ಇಸ್ರಾಯೇಲ್ಯರನ್ನು ಸ್ವಕೀಯ ಜನವನ್ನಾಗಿ ಆದುಕೊಂಡನಲ್ಲಾ (ಕೀರ್ತ. 135:4).*




# ಅನುದಿನದ ಆಹಾರ

**ANUDHINADA AHARA - May 2015**

**ಮೇ – 2015**

ಮರ 16 ಹಣ್ಣು 5 Tree 16 Fruit 5


## ರೆಕ್ಕೆಗಳ ಕೆಳಗೆ!

"ಪರಾತ್ಪರನ ಮರೆಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು. ಆತನು ನಿನ್ನನ್ನು ತನ್ನ ರೆಕ್ಕೆಗಳಿಂದ ಹೊದಗಿಸುವನು" (ಕೀರ್ತನೆ. 91:1,4).

ದೇವರ ಆಶ್ರಯ ಎಷ್ಟು ಬಲವಾದದ್ದು, ಆತನನ್ನು ಆಶ್ರಯಿಸುವದರ ಮೂಲಕ ಯಾವ ರೀತಿ ಮಾನವನು ರಕ್ಷಿಸಲ್ಪಡುವನು ಎಂಬುದನ್ನು ಕುರಿತು ಸತ್ಯವೇದದಲ್ಲಿ ಬಹುಸುಂದರವಾಗಿ ವರ್ಣಿಸಲ್ಪಟ್ಟಿರುವದು. ಕೀರ್ತನೆ 91ರಲ್ಲಿ ಕರ್ತನು ಒಂದು ಒಳ್ಳೆಯ ತಾಯಿ ಪಕ್ಷಿಯಂತೆ ತನ್ನ ಜನರನ್ನು ಕಾಪಾಡುವದನ್ನು ಕಾಣುತ್ತೇವೆ. 23ನೇ ಕೀರ್ತನೆಯಲ್ಲಿ ಕರ್ತನು ತನ್ನನ್ನು ಹಿಂಬಾಲಿಸುವ ಕುರಿಗಳನ್ನು ಒಬ್ಬ ಕುರುಬನು ಕಾಯುವಂತೆ ತನ್ನ ಜನರನ್ನು ಹೇಗೆ ಕಾಪಾಡುವನು ಎಂಬುದನ್ನು ಕಾಣುತ್ತೇವೆ. 121ನೇ ಕೀರ್ತನೆಯಲ್ಲಿ ನಿಮಗೆ ಸಹಾಯ ಒದಗುವ ಪರ್ವತವಾದ ಕರ್ತನಿಂದ ಒದಗುವ ಸಹಾಯದ ಕುರಿತಾಗಿ ಓದುತ್ತೇವೆ.

ಯೆಹೂದ್ಯ ಜನಾಂಗದವರು ಇಂದಿಗೂ ರಾತ್ರಿಯಲ್ಲಿ ಹಾಸಿಗೆಗೆ ಹೋಗುವ ಮೊದಲು ಕೀರ್ತನೆ 91ನ್ನು ಕುಟುಂಬವಾಗಿ ಓದಿ ಮಲಗುವರು. ಹೊಸ ಒಡಂಬಡಿಕೆಯ ಕಾಲದಲ್ಲಿರುವ ನಮಗೋ, ಕ್ರಿಸ್ತನ ಹೊರತು ಬೇರೆ ಯಾವ ರಕ್ಷಣೆಯೂ ಇಲ್ಲ. ಆತನ ರಕ್ತದ ಕೋಟೆಯೊಳಗೆ ಇರುವ ಪ್ರತಿಯೊಬ್ಬ ವಿಶ್ವಾಸಿಯನ್ನು ಈ ಲೋಕದ ಯಾವದೇ ಅಂಧಕಾರ ಶಕ್ತಿಗಳು ಅಲುಗಿಸಲು ಸಾಧ್ಯವಿಲ್ಲ. ಒಂದು ಕೋಳಿ ತನ್ನ ರೆಕ್ಕೆಗಳ ಕೆಳಗೆ ಮೊಟ್ಟೆಗಳನ್ನಿಟ್ಟುಕೊಂಡು ಕಾವುಕೊಡುವಾಗ ಮೊಟ್ಟೆಯೊಳಗಿರುವ ಬಿಳಿ ಹಾಗೂ ಹಳದಿಯ ಭಾಗಗಳು ಅದ್ಭುತವಾದ ರೀತಿಯಲ್ಲಿ ಮಾರ್ಪಾಟು ಹೊಂದಿ ಒಂದು ಚಿಕ್ಕ ಕೋಳಿಮರಿಯಾಗಿ ರೂಪುಗೊಂಡು ಹೊರಗೆ ಬರುವದು. ಅದೇ ರೀತಿಯಲ್ಲಿ ಉನ್ನತನಾದ ಪವಿತ್ರಾತ್ಮ ರೆಕ್ಕೆಗಳ ಮರೆಯಲ್ಲಿ ನೀವು ಇರುವಾಗ, ನಿಮ್ಮೊಳಗೆ ಮಹಿಮೆಯಾದ

ಮಾರ್ಪಾಟುಗಳು ಉಂಟಾಗುವವು. ನೀವು ಮಹಿಮೆಯ ಮೇಲೆ ಮಹಿಮೆ ಹೊಂದಿ ರೂಪಾಂತರಗೊಳ್ಳುವಿರಿ. ಕ್ರಿಸ್ತನ ಸ್ವಭಾವಗಳು ಗುಣಾತಿಶಯಗಳು ನಿಮ್ಮೊಳಗೆ ಏರ್ಪಡುವವು. ಅನುದಿನವೂ ಕ್ರಿಸ್ತನ ಸಾರೂಪ್ಯವನ್ನು ಹೊಂದಿ ದೇವರೊಂದಿಗೆ ನಡೆಯುವಿರಿ. ಕರ್ತನು ನಿಮ್ಮನ್ನು ಅಗುಳಿ ಹಾಕಿದ ಉದ್ಯಾನ, ಬೇಲಿಯೊಳಗಿನ ಬುಗ್ಗೆ, ಮುಚ್ಚಿಮುದ್ರಿಸಿದ ಬಾವಿಯಾಗಿ ಇಟ್ಟಿರುವನು (ಪ್ರ.ಗೀ. 4:12) ಎಂಬದನ್ನು ಮರೆಯಬಾರದು.

ನೀವು ಇರಬೇಕಾದ ಬಹುಮುಖ್ಯವಾದ ಐದು ರಕ್ಷಣೆಯ ವಲಯಗಳು (Zones) ಇರುವವು. 1. ದೇವಮಹಿಮೆ, 2. ರಕ್ಷಣೆಯ ನಾವೆ, 3. ಒಡಂಬಡಿಕೆಯೊಳಗೆ, 4. ಮೇಘದೊಳಗೆ, 5. ದೇವಸಭೆ.

**1. ದೇವಮಹಿಮೆ** : ದೇವರು ಏದೇನ್ ತೋಟದಲ್ಲಿ ಆದಾಮ ಹವ್ವಳನ್ನು ಇಟ್ಟಾಗ, ಅಲ್ಲಿ ಕರ್ತನ ಮಹಿಮೆ ಅವರನ್ನು ಮುಚ್ಚಿತ್ತು. ಆದುದರಿಂದ ಅಲ್ಲಿ ವ್ಯಾಧಿ ಇಲ್ಲ, ಕಷ್ಟವಿಲ್ಲ, ಶಾಪವಿಲ್ಲ, ಮರಣವಿಲ್ಲ. ಸಂಜೆಯ ತಂಗಾಳಿಯಲ್ಲಿ ದೇವರು ಬಂದು ಅವರೊಂದಿಗೆ ಸಂಭಾಷಿಸುತ್ತಿದ್ದನು. ಆದಿ ತಂದೆ ತಾಯಿಗಳು, ಪಾಪ ಮಾಡದೇ ಆ ಮಹಿಮೆಯೊಳಗೆ ನೆಲೆಗೊಂಡಿದ್ದಿದ್ದರೆ, ಅವರಿಗೆ ಮರಣವು ಸಂಭವಿಸುತ್ತಲೇ ಇರಲಿಲ್ಲ. ದೇವರು ಅಲ್ಲಿಗೇ ನಿಂತುಬಿಡಲಿಲ್ಲ. ತಾನು ಸೃಷ್ಟಿಸಿದ ಮಾನವನು ಕಳೆದುಕೊಂಡ ದೇವಮಹಿಮೆಯನ್ನು ದೇವರ ಸಂಸರ್ಗವನ್ನು ಮತ್ತೆ ಹಿಂದಕ್ಕೆ ಪಡೆದುಕೊಳ್ಳಲು ಒಂದು ಮಾರ್ಗವನ್ನು ಅಂದೇ ಸಿದ್ಧಪಡಿಸಿದನು. ಅದುವೇ ಶಿಲುಬೆಯ ಮಾರ್ಗ. ಯಾರ್ಯಾರು ಯಜ್ಞಾರ್ಪಿತನಾದ ತನ್ನ ಏಕಕುಮಾರನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಂಬಿಕೆ ಇಟ್ಟು ಆತನನ್ನು ಅಂಗೀಕರಿಸುವರೋ ಅವರಿಗೆ ನಿತ್ಯ ಜೀವದ ಬಾಧ್ಯತೆಯನ್ನು ಅನುಗ್ರಹಿಸಿರುವನು.

**2. ಕ್ರಿಸ್ತನೆಂಬ ರಕ್ಷಣೆಯ ನಾವೆ!** ಹಳೆಯ ಒಡಂಬಡಿಕೆಯ ಕಾಲದಲ್ಲಿ ಭೂಮಿಯಲ್ಲಿ ಮನುಷ್ಯನ ಪಾಪವು ಹೆಚ್ಚಿ ಜಲಪ್ರಳಯವುಂಟಾದಾಗ ನೋಹನು ದೇವರ ಆಜ್ಞೆಯ ಮೇರೆಗೆ ಮರದ ನಾವೆಯನ್ನು ಕಟ್ಟಿದನು. ಆ ನಾವೆಯಲ್ಲಿ ಮೂರು ಅಂತಸ್ತುಗಳಿದ್ದವು. ಅದು ನಮ್ಮ ಆತ್ಮ, ಪ್ರಾಣ, ಶರೀರವನ್ನು ಸೂಚಿಸುವದು. ಆ ನಾವೆಗೆ ಇದ್ದದ್ದು ಒಂದೇ ಬಾಗಿಲು. ಆ ಬಾಗಿಲ ಮೂಲಕ ಒಳಗೆ ಹೋದವರು ನೋಹನ ಕುಟುಂಬದ ಎಂಟು ಜನರು ಮಾತ್ರ. ಹಾಗೂ ಕೆಲವು ಮೃಗಪಕ್ಷಿಗಳು. ಇಂದು ನಮ್ಮ ರಕ್ಷಣೆಗಾಗಿ ಇರುವ ನಾವೆ ಯೇಸುಕ್ರಿಸ್ತನು ಒಬ್ಬನೇ. ಅದರಲ್ಲಿ ಪ್ರವೇಶಿಸುವವರೆಲ್ಲರೂ ರಕ್ಷಿಸಲ್ಪಡುವರು. ಆಶ್ರಯ ಪಡೆದುಕೊಳ್ಳುವರು. ನೋಹನ ನಾವೆಯ ಹೊರಗೆ ಇದ್ದವರು ಜಲಪ್ರಳಯದಲ್ಲಿ ನಾಶವಾದಂತೆ, ಕ್ರಿಸ್ತನ ಎರಡನೇ ಬರೋಣದಲ್ಲಿ ಯಾರ್ಯಾರು ಕ್ರಿಸ್ತನೆಂಬ ರಕ್ಷಣೆಯ



ನಾವೆಯೊಳಗೆ ಆಶ್ರಯ ಹೊಂದಿಲ್ಲವೋ ನಿತ್ಯಜೀವದ ಬಾಧ್ಯತೆಯನ್ನು ಕಳೆದುಕೊಳ್ಳುವರು.

**3. ಒಡಂಬಡಿಕೆಯ ಪೆಟ್ಟಿಗೆಯೊಳಗೆ** : ಒಂದು ಚಿಕ್ಕ ಆಶ್ರಯಸ್ಥಳವಾಗಿ ಒಡಂಬಡಿಕೆ ಪೆಟ್ಟಿಗೆ ಕಾಣಬಹುದು. ಅದು ಎರಡುವರೆ ಮೊಳ ಉದ್ದ, ಒಂದುವರೆ ಮೊಳ ಅಗಲ, ಒಂದುವರೆ ಮೊಳ ಎತ್ತರವಾಗಿತ್ತು. ಆ ಪೆಟ್ಟಿಗೆಯಲ್ಲಿ ಮನ್ನವನ್ನು ಇಟ್ಟ ಪಾತ್ರೆ ಆರೋನನ ಚಿಗುರಿದ ಕೋಲು, ದಶಾಜ್ಞೆಗಳ ಕಲ್ಲಿನ ಹಲಗೆಗಳು ಇದ್ದವು. ಕರ್ತನೊಂದಿಗೆ ನೀವು ಮಾಡಿಕೊಳ್ಳುವ ಒಡಂಬಡಿಕೆಯಲ್ಲಿ ಒಂದು ಆತ್ಮೀಕ ರಹಸ್ಯವಿರುವದು. ನಮ್ಮ ದೇವರು ಒಡಂಬಡಿಕೆಯ ದೇವರಾಗಿರುವನು. ಆತನು ಸತ್ಯವಂತನು.

ಇಸ್ರಾಯೇಲ್ಯರಿಗೆ ಆಹಾರವಾಗಿ ಕೊಟ್ಟ ಮನ್ನ ದೇವದೂತರ ಆಹಾರವಾಗಿದ್ದರೂ, ಜೇನು ತುಪ್ಪದಂತೆ ಸಿಹಿಯಾಗಿದ್ದರೂ ಮಾರನೆಯ ದಿನಕ್ಕೆ ಅದು ಹುಳು ಬಿದ್ದು ನಾರುತ್ತಿತ್ತು. ಇನ್ನು ಅದನ್ನು ಉಪಯೋಗಿಸಲಾಗದು. ಆದರೆ ಅದೇ ಮನ್ನ ಒಡಂಬಡಿಕೆ ಪೆಟ್ಟಿಗೆಯಲ್ಲಿರುವಾಗ ಕೆಟ್ಟುಹೋಗಲಿಲ್ಲ. ಕಾರಣ ಅದು ಒಡಂಬಡಿಕೆಯೆಂಬ ಆತ್ಮೀಕ ಆಶ್ರಯದೊಳಗೆ ಇತ್ತು. ಇಂದು ನೀವು ಶಿಲುಬೆಯ ರಕ್ತದ ಒಡಂಬಡಿಕೆಯೊಳಗೆ ಬಂದಿರುವಿರಿ. "ಈ ಪಾತ್ರೆಯು ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ" (ಮತ್ತಾ. 26:27,28) ಎಂದು ಕ್ರಿಸ್ತನು ಹೇಳಿರುವನಲ್ಲವೇ! ನಮ್ಮ ಈ ಶರೀರ ಮಲಿನವಾದದ್ದು, ವ್ಯಾಧಿಯುಳ್ಳದ್ದು. ಆದರೆ ಕರ್ತನೊಂದಿಗೆ ಶರೀರ ರಕ್ತ ಒಡಂಬಡಿಕೆ ಮಾಡಿಕೊಂಡಿರುವಾಗ, ಕರ್ತನ ಬರೋಣದಲ್ಲಿ ನಾಶವಾಗುವ ಈ ಶರೀರ, ಅಮರತ್ವವನ್ನು ಪಡೆದುಕೊಳ್ಳುವದು. ಆತ್ಮೀಕ ಶರೀರವಾಗಿ ಮಾರ್ಪಡುವದು. ಆದ್ದರಿಂದ ನೀವು ಆತ್ಮೀಕ ಆಶ್ರಯವಾಗಿರುವ ಒಡಂಬಡಿಕೆಯ ಪೆಟ್ಟಿಗೆಯೊಳಗೆ ಇರಬೇಕಾದದ್ದು ಅತ್ಯಂತ ಅಗತ್ಯವಾದದ್ದು.

**4. ಮೇಘದ ನೆರಳಿನಲ್ಲಿ** : ಅಪೊ. ಪೌಲನು ಕೊರಿಂಥ ಸಭೆಗೆ ಬರೆಯುವಾಗ ಹೀಗೆ ಬರೆಯುತ್ತಾನೆ. "ನಮ್ಮ ಪಿತೃಗಳೆಲ್ಲರೂ, ಮೇಘದ ನೆರಳಿನಲ್ಲಿದ್ದರು. ಅವರೆಲ್ಲರೂ ಸಮುದ್ರವನ್ನು ದಾಟಿಹೋದರು. ಅವರೆಲ್ಲರೂ ಮೋಶೆಯ ಶಿಷ್ಯರಾಗುವದಕ್ಕಾಗಿ ಮೇಘದಲ್ಲಿಯೂ, ಸಮುದ್ರದಲ್ಲಿಯೂ ದೀಕ್ಷಾಸ್ನಾನವನ್ನು ಹೊಂದಿದರು" (1ಕೊರಿಂ.10:1,2) ಎಂದೂ. ಪಸ್ಕದ ಕುರಿಯ ರಕ್ತದಿಂದ, ಇಸ್ರಾಯೇಲ್ಯರು ಐಗುಪ್ತದ ದಾಸತ್ವದಿಂದ ಬಿಡುಗಡೆಯಾದರು. ಇದು ಪಾಪಕ್ಷಮಾಪಣೆಗೂ ರಕ್ಷಣೆಗೂ ಗುರುತಾಗಿದೆ. ನಂತರ ಅವರು ಕೆಂಪು ಸಮುದ್ರದಲ್ಲಿ ನಡೆದುಹೋದದ್ದು ದೀಕ್ಷಾಸ್ನಾನಕ್ಕೆ ಗುರುತಾಗಿದೆ. ಆ ಕ್ಷಣದಿಂದ ಅವರನ್ನು ಮಾರ್ಗ ನಡೆಸಲು ಮೇಘಸ್ತಂಭ ಬಂದಿತು. ಇದು ರಕ್ಷಿಸಲ್ಪಟ್ಟು ದೀಕ್ಷಾಸ್ನಾನ ಹೊಂದಿದ ದೇವರ ಮಕ್ಕಳನ್ನು ದೇವರಾತ್ಮನು ಮಾರ್ಗದರ್ಶಿಯಾಗಿ

ನಡೆಸುವದಕ್ಕೆ ಗುರುತಾಗಿದೆ. ಆ ಮೇಘಸ್ತಂಭವು ಹಗಲಿನಲ್ಲಿ ಉಷ್ಣವೂ, ಇರುಳಿನಲ್ಲಿ ಶೀತವು ಬಾಧಿಸದಂತೆ ಇಸ್ರಾಯೇಲ್ಯರನ್ನು ಆವರಿಸಿಕೊಂಡಿತು. ಅದು ಒಂದು ಆತ್ಮೀಕ ಆಶ್ರಯವಾಗಿದೆ. ಆ ಆಶ್ರಯದೊಳಗೆ ಬಂದಾಗ, ಕರ್ತನು ಒಡಂಬಡಿಕೆ ಮಾಡಿಕೊಂಡು ನೀವು ನಿಮ್ಮ ದೇವರಾದ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ ಆತನ ದೃಷ್ಟಿಗೆ ಸರಿಬೀಳುವದನ್ನು ಮಾಡಿ ಆತನ ಆಜ್ಞೆಗಳಿಗೆ ವಿಧೇಯರಾಗಿದ್ದು ಆತನ ಕಟ್ಟಳೆಗಳನ್ನು ಅನುಸರಿಸಿ ನಡೆದರೆ ನಾನು ಐಗುಪ್ತ್ಯರಿಗೆ ಉಂಟುಮಾಡಿದ ವ್ಯಾಧಿಗಳಲ್ಲಿ ಒಂದನ್ನೂ ನಿಮಗೆ ಬರಗೊಡಿಸುವದಿಲ್ಲ. ಯೆಹೋವನೆಂಬ ನಾನೇ ನಿಮಗೆ ಆರೋಗ್ಯದಾಯಕನು (ವಿಮೋ. 15:26) ಎಂದು ವಾಗ್ದಾನ ಮಾಡಿದನು.

ನೀವು ಯಾವಾಗಲೂ ಪವಿತ್ರಾತ್ಮನೆಂಬ ಮೇಘದ ಕೆಳಗೆ ಇರಿ. ಅಭಿಷೇಕದೊಳಗೆ ಇರಿ. ಪವಿತ್ರಾತ್ಮನಿಂದ ತುಂಬಿರಿ. ಪ್ರಪಂಚದೊಂದಿಗೆ ಇಜ್ಜೋಡಾಗದೆ ಕರ್ತನಿಗಾಗಿ ಬೇರ್ಪಡಿಸಿದ ಜನಾಂಗವಾಗಿ ಕಾಣಲ್ಪಡಿರಿ.

**5. ಸಭೆಯೊಳಗೆ :** "ಆಹಾ, ಸಹೋದರರು ಒಂದಾಗಿರುವದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು" (ಕೀರ್ತ. 133:1) ಎಂದು ದಾವೀದನು ಬರೆಯುತ್ತಾನೆ. ಸಭೆ ಎಂಬುದು ಕರ್ತನ ಕುಟುಂಬ. ಇಲ್ಲಿ ಹಿರಿಯ ಅಣ್ಣನಾದ ಯೇಸುಕ್ರಿಸ್ತನು ಇರುವನು. ಆತನು ಸಭೆಯನ್ನು ತನ್ನ ಸ್ವಂತ ರಕ್ತದಿಂದ ಸಂಪಾದಿಸಿಕೊಂಡಿರುವನು. (ಅ.ಕೃ. 20:28).

ಸಭೆ ಎಂಬುದು ವಿಶ್ವಾಸಿಗಳಿಗೆ ಆತ್ಮೀಕ ಆಶ್ರಯ ಸ್ಥಾನವಾಗಿದೆ. ಸಭೆಯ ಐಕ್ಯತೆಯಲ್ಲಿ ಬಲ ಉಂಟು, ಜೀವ ಉಂಟು. "ರಕ್ಷಿಸಲ್ಪಟ್ಟವರನ್ನು ಕರ್ತನು ಅನುದಿನವೂ ಸಭೆಯಲ್ಲಿ ಸೇರಿಸಿದನು" (ಅ.ಕೃ. 2:47). ಸಭೆಯಲ್ಲಿ ವಿಶ್ವಾಸಿಗಳಿಗೆ ರಕ್ಷಣೆ, ಆದರಣೆ ಇರುವಂತೆ, ಕರ್ತನು ಸಭೆಯಲ್ಲಿ ಅಪೊಸ್ತಲರನ್ನೂ, ಕುರುಬರನ್ನೂ, ಸೌವಾರ್ತಿಕರನ್ನೂ, ಪ್ರವಾದಿಗಳನ್ನೂ, ಬೋಧಕರನ್ನೂ ಇಟ್ಟಿರುವನು.

ದೇವಜನರೇ, ದೇವಾಲಯಕ್ಕೆ ಬಂದು ಆರಾಧನೆಯಲ್ಲಿ ಭಾಗವಹಿಸಿರಿ. ಕರ್ತನು ತನ್ನ ರೆಕ್ಕೆಗಳಿಂದ ನಿಮ್ಮನ್ನು ಮರೆಮಾಡಿಕೊಳ್ಳುವನು. ಆತನ ಮರೆಹೊಕ್ಕವರು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತವಾಗಿರುವರು (ಕೀರ್ತ. 91:1).

**ವಾಗ್ದಾನ ವಚನ – ಧರ್ಮೋ. 31:8**

*"ಯೆಹೋವನು ತಾನೇ ನಿನ್ನ ಮುಂದುಗಡೆ ಹೋಗುವನು; ಆತನೇ ನಿನ್ನ ಸಂಗಡ ಇರುವನು; ನಿನ್ನನ್ನು ಅಪಜಯಕ್ಕೆ ಗುರಿಪಡಿಸುವದೇ ಇಲ್ಲ, ಕೈ ಬಿಡುವದಿಲ್ಲ; ಅಂಜಬೇಡ, ಧೈರ್ಯದಿಂದಿರು"*



## ಕರ್ತನ ಆಶ್ರಯ

ಒಂದು ಸಾರಿ ರೊಲಂಡ್ ಎಂಬ ಬೋಧಕರು ದಕ್ಷಿಣ ಆಫ್ರಿಕಾಕ್ಕೆ ಸೇವೆಗಾಗಿ ಹೋಗಿದ್ದರು. ಕರ್ತನು ಅವರನ್ನು ತನ್ನ ಬಲದಿಂದ ನಡಿಸಿದ್ದರಿಂದ ಒಂದು ಕಡೆ ವಿಶ್ವಾಸಿಗಳು ಹೆಚ್ಚಾದರು. ಇನ್ನೊಂದು ಕಡೆ ಹೊಟ್ಟೆಕಿಚ್ಚಿನಿಂದ ಕೂಡಿದ ಜನರು ಎದ್ದರು. ಒಬ್ಬನು ಕೂಟದ ಜೊತೆಗೆ ನಿಂತು ಅವರನ್ನು ಬಂದೂಕದಿಂದ ಸುಡಲು ಪ್ರಯತ್ನಿಸಿದಾಗ ಅನೇಕ ಸಾರಿ ಅವನಿಗೂ ಆ ಸೇವಕರಿಗೂ ಮಧ್ಯದಲ್ಲಿ ಗಂಬೀರವಾಗಿ ಕಾಣಲ್ಪಟ್ಟ ಒಬ್ಬ ದೇವ ಮನುಷ್ಯನು ನಿಂತಿದ್ದನ್ನು ನೋಡಿದನು. ಸೇವಕನ ಮುಖವು ದೇವಕುಮಾರನಂತಿತ್ತು. ಆದ್ದರಿಂದ ಅವನು ಭಯದಿಂದ ನಡುಗುತ್ತ ಆ ದೇವರ ಸೇವಕರ ಪಾದಗಳಿಗೆ ಬಿದ್ದು ತನ್ನನ್ನು ಅರ್ಪಿಸಿದನು.

ಅರಸನಾದ ದಾವೀದನು ಹೇಳುತ್ತಾನೆ, ಕರ್ತನು ನಮಗಿಲ್ಲದಿದ್ದರೆ ನನ್ನ ಗತಿ ಏನಾಗುತ್ತಿತ್ತೆಂದು ಇಸ್ರಾಯೇಲ್ಯರೇ ಹೇಳಲಿ. ನನ್ನವರು ನಮಗೆ ವಿರೋಧವಾಗಿ ಉರಿಗೊಂಡು ನಮ್ಮನ್ನು ಜೀವಸಹಿತ ನುಂಗಿಬಿಡುತ್ತಿದ್ದರು. ಕರ್ತನಿಗೆ ಕೊಂಡಾಟವಾಗಲಿ. ಆತನು ನಮ್ಮನ್ನು ಅವರ ಹಲ್ಲುಗಳಿಗೆ ಕೊಳ್ಳೆಕೊಡಲಿಲ್ಲ. ನಮ್ಮ ಜೀವವು ಬೇಟೆಗಾರನ ಬಲೆಯಿಂದ ತಪ್ಪಿಸಿಕೊಂಡ ಪಕ್ಷಿಯಂತಿದೆ; ಬಲೆಯು ಹರಿದುಹೋಯಿತು, ನಾವು ತಪ್ಪಿಸಿಕೊಂಡೆವು" (ಕೀರ್ತ. 124:3,6,7). ಇಂದು ನಿಮ್ಮ ಸುತ್ತಲೂ ಅನೇಕ ದುಷ್ಟ ಜನರು ಇದ್ದಾರೋ? ನಿಮ್ಮ ಉದ್ಯೋಗ ಸ್ಥಳದಲ್ಲಿ ನಿಮ್ಮ ಶಾಂತಿಯನ್ನು ಕಳೆದುಕೊಳ್ಳುವಂತೆ ಮಾಡುತ್ತಾರೋ? ನಿಮ್ಮ ಹೆಸರನ್ನು ಕೆಡಿಸಿ ನಿಮ್ಮನ್ನು ಪೂರ್ಣವಾಗಿ ನಾಶಪಡಿಸಲು ಮಂತ್ರವಾದಿಗಳನ್ನು ಕರೆದಿದ್ದಾರೆಯೇ? ಭಯಪಡಬೇಡಿರಿ. ಕರ್ತನು ಯಾವಾಗಲೂ ನಿಮ್ಮ ಪಕ್ಷದಲ್ಲಿರುತ್ತಾನೆ.

## ಮೊಣಕಾಲಿನಲ್ಲಿ

ಒಬ್ಬ ಕೆತ್ತನೆಯವನು ಒಂದು ಸುತ್ತಿಗೆ ಮತ್ತು ಉಳಿಯೊಂದಿಗೆ ಒಂದು ಕಲ್ಲನ್ನು ಪ್ರತಿಮೆಯಾಗಿ ಮಾಡಲು ಕೆತ್ತುತ್ತಿದ್ದನು. ಅವನು ತನ್ನ ಮೊಣಕಾಲಿನಲ್ಲಿ ನಿಂತು ಕೆಲಸ ಮಾಡುತ್ತಿದ್ದಾಗ ಅಲ್ಲಿಗೆ ಬಂದಂಥ ಒಬ್ಬ ಪ್ರಸಂಗಿ ಅವನನ್ನು ನೋಡಿ, "ಕಲ್ಲಾಗಿರುವ ಹೃದಯಗಳನ್ನು ಈ ರೀತಿ ಕೆತ್ತಬೇಕು" ಎಂದರು. ಶಿಲ್ಪಿಯು ಅವರಿಗೆ, "ನಾನು ಮಾಡುವಂತೆ ನೀವೂ ಮಾಡಿದರೆ, ಅಂದರೆ ಮೊಣಕಾಲಿನಲ್ಲಿ" ಎಂದು ಹೇಳಿದನು. ಹೌದು, ಆತ್ಮಗಳಿಗಾಗಿ ನಾವು ಮೊಣಕಾಲಿನಲ್ಲಿ ನಿಲ್ಲಬೇಕಾಗಿದೆ. ಆಗ ನಿಶ್ಚಯವಾಗಿ ಕರ್ತನು ನಮಗೆ ಫಲಕೊಡುವನು.

# ದೂತರಿಗೆ ಅಪ್ಪಣೆ ಕೊಡುವನು

ಟಿಬೇಟ್ ದೇಶದ ಒಂದು ಗ್ರಾಮದಲ್ಲಿ ದೇವ ಸೇವಕರಾದ ಸಾಧು ಸುಂದರ್‌ಸಿಂಗ್ ಪ್ರಸಂಗಿಸಿದ್ದರಿಂದ ಅವರನ್ನು ಹೊಡೆದು ಓಡಿಸಿದರು. ಆಗ ಅವರು ರಾತ್ರಿಯ ವೇಳೆ ಮಲಗಲು ಒಂದು ಗುಹೆಯೊಳಗೆ ಹೋದಾಗ ಅಲ್ಲಿ ಅನೇಕರು ದೊಣ್ಣೆಗಳನ್ನು ಹಿಡಿದುಕೊಂಡು, ಕತ್ತಿಗಳನ್ನು ಹಿಡಿದುಕೊಂಡು ಆ ಗುಹೆಯ ಕಡೆಗೆ ಬರುತ್ತಿದ್ದರು.

ಆಗ ಅವರು ಆ ಗುಹೆಯಲ್ಲಿ ಸುಮಾರು ಅರ್ಧಗಂಟೆಯ ಕಾಲ ಮೊಣಕಾಲೂರಿ ಪ್ರಾರ್ಥಿಸಿದರು. ಕಣ್ಣು ತೆರೆದು ನೋಡುವಾಗ ಅವರು ಬಂದ ದಾರಿ ಹಿಡಿದು ಹೋದರು. ಆಗ ಸಾಧು ಸುಂದರ್ ಸಿಂಗ್ ದೇವರನ್ನು ಸಂತೋಷದಿಂದ ಸ್ತುತಿಸಿದರು.

ಆದರೆ ಮರುದಿನ ಬೆಳಿಗ್ಗೆ ಎದ್ದಾಗ ಮುಂಚೆ ಬಂದ ಜನರಿಗಿಂತ ಈಗ ಬರುತ್ತಿರುವವರು ಅನೇಕರು. ಅವರನ್ನು ನೋಡಿದ ತಕ್ಷಣ ದಿಗ್ಭ್ರಮೆಯಾಯಿತು. ಅವರು ಸಾಧು ಸುಂದರ್ ಸಿಂಗ್‌ರನ್ನು ನೋಡಿ, "ಅಯ್ಯಾ ನಾವು ನಿಮ್ಮನ್ನು ಕೊಲ್ಲಲು ಭಯಂಕರ ಆಯುಧಗಳನ್ನು ತಂದೆವು. ಆದರೆ, ನಿಮ್ಮ ಗುಹೆಯ ಸುತ್ತಲೂ ಅನೇಕ ಪುರುಷರು ನಿಂತಿದ್ದರು. ಅವರು ಯಾರು? ಅವರಿಂದ ಬಂದ ಬೆಳಕು ಯಾವುದು? ಆ ಪುರುಷರು ಯಾವ ದೇಶವನ್ನು ಸೇರಿದವರು?" ಎಂದು ಕೇಳಿದರು.

ಸಾಧು ಸುಂದರ್ ಸಿಂಗ್‌ರವರಿಗೆ ಸುವಾರ್ತೆಯನ್ನು ಸಾರಲು ಅದು ಒಂದು ಒಳ್ಳೆಯ ಸಂದರ್ಭವಾಗಿತ್ತು. ನಮ್ಮ ದೇವರು ತನ್ನ ಮಕ್ಕಳನ್ನು ಯಾವ ರೀತಿಯಾಗಿ ಕಾಯುತ್ತಾನೆ ನೋಡಿ. ಕರ್ತನು ಶೋಧನೆಗಳನ್ನು ಸಾಧನೆಗಳಾಗಿ ಮಾರ್ಪಡಿಸುವಾತನು.

## ಅವಶ್ಯವಾಗಿ ನೀವು ತಿಳಿದಿರಬೇಕು

- ಸ್ವಲ್ಪ ಹುಳಿ ಕಲಿಸಿದರೆ ಕಣಕವೆಲ್ಲಾ ಹುಳಿಯಾಗುತ್ತದೆಂದು ನಿಮಗೆ ತಿಳಿಯದೋ? **(1 ಕೊರಿ. 5:6)**
- ನಾವು ದೇವದೂತರಿಗೆ ತೀರ್ಪು ಮಾಡುವೆವೆಂದು ನಿಮಗೆ ತಿಳಿಯದೋ? **(1 ಕೊರಿ. 6:3)**
- ಅನ್ಯಾಯಗಾರರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂಬದು ನಿಮಗೆ ತಿಳಿಯದೋ? **(1 ಕೊರಿ. 6:9)**
- ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆ ಎಂಬುದು ನಿಮಗೆ ತಿಳಿಯದೋ? **(1 ಕೊರಿ. 6:19)**
- ನಿಮ್ಮ ದೇಹಗಳು ಕ್ರಿಸ್ತನ ಅಂಗಗಳಾಗಿವೆ ಎಂಬದು ನಿಮಗೆ ತಿಳಿಯದೋ? **(1 ಕೊರಿ. 6:15)**



# ಬೆಳೆಯುವ ಪೈರು ಮೊಳಕೆಯಲ್ಲಿ

ಜಾನ್‌ವೆಸ್ಲಿಯವರು ಚಿಕ್ಕವರಾಗಿದ್ದಾಗ, ಒಂದು ಕಾರ್ಖಾನೆಯಲ್ಲಿ ಕೆಲಸದಲ್ಲಿದ್ದರು. ಕೆಲಸ ಕಲಿಯುವವರಿಗೆ ಆ ಸಂಸ್ಥೆಯು ವಿದ್ಯಾರ್ಥಿ ವೇತನವಾಗಿ ಮೂವತ್ತು ಪೌಂಡನ್ನು ಕೊಡುತ್ತಿತ್ತು. ಆ ಹಣದಲ್ಲಿ ಅವರು ಎರಡು ಪೌಂಡನ್ನು ಸುವಾರ್ತೆ ಸೇವೆಗಾಗಿ ಕೊಟ್ಟು ಉಳಿದ ಇಪ್ಪತ್ತೆಂಟು ಪೌಂಡ್‌ಗಳನ್ನು ತನ್ನ ವರ್ಷಪೂರ್ತಿಯ ಖರ್ಚಿಗಾಗಿ ವಿನಿಯೋಗಿಸಿದರು. ಮೂರನೆಯ ವರ್ಷ ಸಂಸ್ಥೆಯು ಇವರಿಗೆ ಅರವತ್ತು ಪೌಂಡನ್ನು ವಿದ್ಯಾರ್ಥಿ ವೇತನವಾಗಿ ಕೊಟ್ಟಿತು. ಆಗಲೂ ಸಹ ಅವರು ಇಪ್ಪತ್ತೆಂಟು ಪೌಂಡನ್ನು ತನ್ನ ಖರ್ಚಿಗಾಗಿ ಇಟ್ಟುಕೊಂಡು ಉಳಿದ ಮುವ್ವತ್ತೆರಡು ಪೌಂಡನ್ನು ಕರ್ತನಿಗೆ ಕಾಣಿಕೆಯಾಗಿ ಕೊಟ್ಟರು. ಮೂರನೇ ವರ್ಷದಲ್ಲಿ ಅವರ ಉತ್ತಮ ಪರಿಶ್ರಮಕ್ಕಾಗಿ ನೂರ ಇಪ್ಪತ್ತು ಪೌಂಡ್ ವೇತನ ಸಿಕ್ಕಿತು. ಆಗಲೂ ಸಹ ಇಪ್ಪತ್ತೆಂಟು ಪೌಂಡುಗಳಲ್ಲಿ ತನ್ನ ಕಾರ್ಯಗಳನ್ನು ನಡಿಸಿಕೊಂಡು ಉಳಿದ ಎಲ್ಲವನ್ನೂ ಸೇವೆಗಾಗಿ ಕೊಟ್ಟುಬಿಟ್ಟರು. ಆನಂತರದ ದಿನದಲ್ಲಿ ಅವರು ಒಬ್ಬ ದೇವಸೇವಕನಾಗಿಯೂ ಸುವಾರ್ತಿಕನಾಗಿಯೂ ಸಫಲರಾದರು. ಇಂಗ್ಲೆಂಡ್ ಮತ್ತು ಅಮೆರಿಕಾ ದೇಶಗಳನ್ನು ಸುವಾರ್ತಾ ಸೇವೆಯ ಮೂಲಕ ನಡುಗಿಸಿದರು. ಅವರು ಮಾಡಿದ ಮಹತ್ತಾದ ಸೇವೆಗೆ "ವೆಸ್ಲಿ ಮಿಷಿನ್" ಎಂದು ಹೆಸರಾಯಿತು. "ನಂಬಿಗಸ್ತನು ಆಶೀರ್ವಾದಪೂರ್ಣನಾಗುವನು"(ಜ್ಞಾನೋ. 28:20). ಹೀಗೆ ಕರ್ತನಿಗೆ ಕೊಡುವದರ ಮೂಲಕ ನಾವೂ ಸಹ ಆಶೀರ್ವಾದಕ್ಕೆ ಪಾತ್ರರಾಗೋಣವೇ?

ಇದನ್ನು ಓದುವ ಪ್ರಿಯ ಸಹೋದರ, ಸಹೋದರಿ, ನಿಮ್ಮ ಕೊರತೆಗಳು ನೀಗಲು ಕರ್ತನಿಗೆ ಧಾರಾಳವಾಗಿ ಕೊಡಿರಿ; ಮಲಾ. 3:10ರಲ್ಲಿ ಆತನೇ ಹೇಳಿರುವಂತೆ ಆತನಿಗೆ ಕೊಟ್ಟು ಪರೀಕ್ಷಿಸಿರಿ.

## ನಿಮ್ಮ ಚಿಂತನೆಗೆ

- ಯೇಸುಕ್ರಿಸ್ತನಿಗಾಗಿ ಏನು ಮಾಡುತ್ತೀ? ಎಂಬದು ಮುಖ್ಯವಲ್ಲ, ಹೇಗೆ ಜೀವಿಸಿದ್ದೀ? ಎಂಬದು ಮುಖ್ಯ.
- ನಾಲ್ಕು ತಲೆಮಾರಿಗೆ ಕೂಡಿಸಿಟ್ಟಿರುವವನಿಗಿಂತ ನಾಳೆಯ ದಿನವನ್ನು ಕುರಿತು ಚಿಂತೆ ಇಲ್ಲದವನೇ ಬಹುದೊಡ್ಡ ಶ್ರೀಮಂತನು.
- ಇಗೋ, ದೇವರು ಇಲ್ಲಿದ್ದಾನೆ ಎಂದು ನೀನು ತೋರಿಸಲಾರೆ. ಆದರೆ, ದೇವರನ್ನು ಕೆಲವರಿಗಾದರೂ ನಿನ್ನ ನಡವಳಿಕೆ ಮೂಲಕ ತೋರಿಸಬಲ್ಲೆ.
- ಸತತವಾಗಿ ಸಂಭವಿಸುವ ಸೋಲುಗಳು ಮನುಷ್ಯನನ್ನು ದುಃಖದಲ್ಲಿ ಮುಳುಗಿಸುವದು; ಸತತವಾದ ಗೆಲುವುಗಳು ಹೆಮ್ಮೆಗೆ ಕಾರಣವಾಗುವದು.

# ನಮ್ಮ ದೇಶದ ಸುದ್ದಿಗಳು

## (INDIAN NEWS)

### 1. 2018ರೊಳಗೆ 7 ಲಕ್ಷ ಮಂದಿಗೆ ತರಬೇತಿ :

ಕೇಂದ್ರ ಸರ್ಕಾರ 2022ರೊಳಗಾಗಿ 1.75 ಲಕ್ಷ ಮೆಗಾವಾಟ್‌ಗಳನ್ನು ನವೀಕರಿಸಬಹುದಾದ ಇಂಧನ ಉತ್ಪಾದನೆ ಮಾಡುವ ಯೋಜನೆ ಹೊಂದಿದೆ. ಇದಕ್ಕಾಗಿ ಏಳು ಲಕ್ಷಕ್ಕೂ ಅಧಿಕ ಜನರಿಗೆ 2018ರೊಳಗಾಗಿ ತರಬೇತಿ ನೀಡಲೂ ನಿರ್ಧರಿಸಿದೆ.

### 2. ರಕ್ಷಣೆ : ರೂ. 83,858 ಕೋಟಿ ವೆಚ್ಚ :

ವಾಯುಪಡೆ, ನೌಕಾಪಡೆ ಮತ್ತು ಭೂ ಸೇನೆಗೆ ಅಗತ್ಯವಿರುವ ಹಾರ್ಡ್‌ವೇರ್ ಉಪಕರಣಗಳಿಗಾಗಿ 2011ರಿಂದ ಈಚೆಗೆ ಭಾರತ ರೂ. 83,858 ಕೋಟಿ ವೆಚ್ಚ ಮಾಡಿದೆ ಎಂದು ರಕ್ಷಣಾ ಸಚಿವರು ತಿಳಿಸಿದ್ದಾರೆ. ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ನಮ್ಮಲ್ಲೇ ತಯಾರಾದ ಹಾರ್ಡ್‌ವೇರ್ ಉಪಕರಣಗಳ ರಫ್ತಿನಿಂದ ರಕ್ಷಣಾ ಇಲಾಖೆ ರೂ. 69 ಕೋಟಿ ಆದಾಯ ಗಳಿಸಿದೆ' ಎಂದು.

### 3. ರೈಲುಗಳಲ್ಲಿ ಇನ್ನು ಬಯೊ ಟಾಯ್ಲೆಟ್ಸ್ :

ಮುಂದಿನ ಐದು ವರ್ಷದೊಳಗೆ ರೈಲು ಭೋಗಿಗಳಲ್ಲಿ ಈಗ ಇರುವ ಶೌಚಾಲಯಗಳ ಬದಲಾಗಿ ಪರಿಸರ ಸ್ನೇಹಿ ಜೈವಿಕ ಶೌಚಾಲಯಗಳನ್ನು ಅಳವಡಿಸಲು ರೈಲ್ವೆ ಕ್ರಿಯಾ ಯೋಜನೆ ರೂಪಿಸಿದೆ. ಈಗಿರುವ ಶೌಚಾಲಯಗಳ ಮೂಲಕ ನೇರವಾಗಿ ತ್ಯಾಜ್ಯ ರೈಲು ಹಳಿಗಳ ಮೇಲೆ ಬೀಳುವುದರಿಂದ ಹಳಿ ಸವೆಯುತ್ತಿದ್ದು, ಮರು ಜೋಡಣೆಗಾಗಿ ರೈಲ್ವೆಯು ಕೋಟ್ಯಾಂತರ ರೂ. ವೆಚ್ಚ ಮಾಡುತ್ತಿದೆ.

### 4. ಆಧಾರ್ ಇಲ್ಲದ ಕಾರಣಕ್ಕೆ ಸೌಲಭ್ಯ ವಂಚಿಸುವಂತಿಲ್ಲ :

ಆಧಾರ್ ಕಾರ್ಡ್ ಇಲ್ಲ ಎಂಬ ಕಾರಣಕ್ಕೆ ಯಾವುದೇ ವ್ಯಕ್ತಿ ಸೌಲಭ್ಯಗಳಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಮತ್ತೊಮ್ಮೆ ಸೂಚಿಸಿದೆ.

### 5. ವಿದೇಶಿ ಹೂಡಿಕೆ ಹೆಚ್ಚಳ :

ವಿದೇಶಿ ಹೂಡಿಕೆದಾರರು ದೇಶದ ಷೇರುಪೇಟೆಯಲ್ಲಿ ಮಾ. 13ರವರೆಗೆ ರೂ.14 ಸಾವಿರ ಕೋಟಿ ಹೂಡಿಕೆ ಮಾಡಿದ್ದಾರೆ. ಇದರಿಂದ 2015ರಲ್ಲಿ ಒಟ್ಟು ಹೂಡಿಕೆ ರೂ. 72 ಸಾವಿರ ಕೋಟಿಗಳಿಗೆ ತಲುಪಿದೆ.





# ಹೊರ ದೇಶದ ಸುದ್ದಿಗಳು

## (FOREIGN NEWS)

### 1. ಆಸ್ಟ್ರೇಲಿಯಾ ವಿಶ್ವ ಸಾಮ್ರಾಟ :

ಈ ಬಾರಿಯ 11ನೇ ವಿಶ್ವಕಪ್ ಕ್ರಿಕೆಟ್ ಚಾಂಪಿಯನ್ ಪಟ್ಟವನ್ನು ಬಲಿಷ್ಠ ಆಸ್ಟ್ರೇಲಿಯಾ ಗೆದ್ದುಕೊಂಡಿದೆ. ಫೈನಲ್ ಪಂದ್ಯದಲ್ಲಿ ನಾಯಕ ಮೈಕಲ್ ಕ್ಲಾರ್ಕ್ ಅವರ ಮಿಂಚಿನ ಆಟ ಹಾಗೂ ವೇಗದ ಬೌಲರ್‌ಗಳ ನೆರವಿನಿಂದ ನ್ಯೂಜಿಲೆಂಡ್ ತಂಡದ ವಿರುದ್ಧ 7 ವಿಕೆಟ್ ಅಂತರದಲ್ಲಿ ಆಸ್ಟ್ರೇಲಿಯಾ ಜಯ ಗಳಿಸಿತು.

### 2. ಶಾಂತಿಗಾಗಿ ಮಡಿದವರ ಗೋಡೆ :

ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯಲ್ಲಿ ಸೇವೆ ಸಲ್ಲಿಸುವ ಸಂದರ್ಭದಲ್ಲಿ ಪ್ರಾಣ ತೆತ್ತವರಿಗೆ ಗೌರವ ಸೂಚಿಸುವ ಸಲುವಾಗಿ ವಿಶ್ವಸಂಸ್ಥೆ ಆವರಣದಲ್ಲಿ 'ಸ್ಮರಣಾರ್ಥ ಗೋಡೆ' ನಿರ್ಮಾಣವಾಗುತ್ತಿದೆ. ಈ ಬಗ್ಗೆ ಭಾರತ ಪ್ರಸ್ತಾವ ಮುಂದಿಟ್ಟಿತ್ತು.

### 3. ನ್ಯಾನ್ಸಿ ಅವೆಲ್‌ಗೆ ಜಾಗತಿಕ ಶಿಕ್ಷಕ ಪ್ರಶಸ್ತಿ :

ಅಮೆರಿಕದ ಶಿಕ್ಷಕ ನ್ಯಾನ್ಸಿ ಅವೆಲ್ ಅವರು 'ವರ್ಕಿ' ಪ್ರತಿಷ್ಠಾನ ನೀಡುವ ಜಾಗತಿಕ ಶಿಕ್ಷಕ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಶಿಕ್ಷಣ ಕ್ಷೇತ್ರದ ನೊಬೆಲ್ ಪ್ರಶಸ್ತಿ ಎಂದೇ ಹೆಸರಾದ ಪ್ರಶಸ್ತಿಯು ರೂ. 6.28 ಕೋಟಿ ಮೊತ್ತದ್ದಾಗಿದೆ.

### 4. ವಾಟ್ಸ್ ಆ್ಯಪ್‌ನಲ್ಲಿ ಅವಹೇಳನ : ಮಹಿಳೆಗೆ 70 ಛಡಿಯೇಟು

ಸೌದಿ ಅರೇಬಿಯಾದ ವ್ಯಕ್ತಿಯೊಬ್ಬರ ವಿರುದ್ಧ ವಾಟ್ಸ್‌ಆ್ಯಪ್‌ನಲ್ಲಿ ಅವಹೇಳನಕಾರಿ ಸಂದೇಶ ಕಳುಹಿಸಿದ್ದಕ್ಕಾಗಿ 32 ವರ್ಷದ ಮಹಿಳೆಯೊಬ್ಬರಿಗೆ 70 ಛಡಿಯೇಟು ಮತ್ತು 20 ಸಾವಿರ ಸೌದಿ ರಿಯಾಲ್ (ರೂ.3.25 ಲಕ್ಷ) ದಂಡದ ಶಿಕ್ಷೆವಿಧಿಸಲಾಗಿದೆ. ವಾಟ್ಸ್‌ಆ್ಯಪ್‌ನಲ್ಲಿ ಮಹಿಳೆ ತನ್ನನ್ನು ಅಪಮಾನಿಸಿದ್ದಾಳೆ ಎಂದು ಪೂರ್ವ ಸೌದಿ ಅರೇಬಿಯಾದ ಅಪರಾಧ ನ್ಯಾಯಾಲಯದಲ್ಲಿ ವ್ಯಕ್ತಿ ದೂರು ದಾಖಲಿಸಿದ್ದರು.

### 5. ಮಾಲ್ಡೀವ್ಸ್ ಮಾಜಿ ಅಧ್ಯಕ್ಷರಿಗೆ ಹವಾನಿಯಂತ್ರಿತ ಜೈಲು :

ಭಯೋತ್ಪಾದನ ತಡೆ ಕಾನೂನು ಅಡಿಯಲ್ಲಿ 13 ವರ್ಷ ಜೈಲು ಶಿಕ್ಷೆಗೆ ಗುರಿಯಾಗಿರುವ ಮಾಲ್ಡೀವ್ಸ್‌ನ ಮಾಜಿ ಅಧ್ಯಕ್ಷ ಮೊಹಮ್ಮದ್ ನಶೀದ್ ಅವರಿಗೆ ಹವಾನಿಯಂತ್ರಿತ ಸೆಲ್ ಒದಗಿಸಲಾಗುವುದು. ಅವರನ್ನು ಇರಿಸಲಾಗುವ ಜೈಲಿನಲ್ಲಿ ಸಾಕಷ್ಟು ಪೀಠೋಪಕರಣಗಳು, ಟಿ.ವಿ. ಮತ್ತು ಹೊರ ಭಾಗದಲ್ಲಿ ಉದ್ಯಾನ ಕೂಡ ಇರಲಿದೆ ಎಂದು ಮಾಲ್ಡೀವ್ಸ್‌ನ ಹಿರಿಯ ಸಚಿವರೊಬ್ಬರು ಹೇಳಿದ್ದಾರೆ.

ಮೇ 1

## ವೃದ್ಧಿಯಾಗುವಿರಿ !

ಬೆಳಿಗ್ಗೆ : 1 ಅರಸು 10,11
ಸಂಜೆ : ಲೂಕ. 21:20–38

"ನೀನು ಎಲ್ಲಾ ಕಡೆಗಳಲ್ಲಿಯೂ ಹಬ್ಬಿಕೊಳ್ಳುವಿ." (ಯೆಶಾ. 54:3).

ಕರ್ತನು ನಿಮ್ಮನ್ನು ಆಶೀರ್ವದಿಸಿದರೆ ನಿಶ್ಚಯವಾಗಿ ನೀವು ವೃದ್ಧಿಯಾಗುವಿರಿ. ನೀವು ಲೌಕೀಕವಾಗಿಯೂ, ಆತ್ಮೀಕವಾಗಿಯೂ ವೃದ್ಧಿಯಾಗುವಿರಿ. ಉನ್ನತದ ಆಶೀರ್ವಾದಗಳನ್ನು ಹೊಂದಿಕೊಂಡು ವೃದ್ಧಿಯಾಗುವಿರಿ. ಆತ್ಮಗಳನ್ನು ಕರ್ತನಿಗಾಗಿ ಆದಾಯ ಪಡಿಸಿಕೊಂಡು ವೃದ್ಧಿಯಾಗುವಿರಿ.

ಅದ್ಭುತಗಳಲ್ಲಿ ಒಂದು, ವೃದ್ಧಿಯಾಗುವ ಅದ್ಭುತ. ಚಾರೆಪ್ತ ಊರಿನ ವಿಧವೆಯ ಮನೆಯಲ್ಲಿ, ಹಿಟ್ಟು ಮತ್ತು ಎಣ್ಣೆ ಹೆಚ್ಚುತ್ತಲೇ ಇತ್ತು. ಅದೇ ರೀತಿಯಲ್ಲಿ ಒಬ್ಬ ಪ್ರವಾದಿಯ ಹೆಂಡತಿಯ ಸಾಲ ತೀರುವವರೆಗೆ ಪಾತ್ರೆಯ ಎಣ್ಣೆ ಹೆಚ್ಚುತ್ತಲೇ ಇತ್ತು. ಯೇಸುಕ್ರಿಸ್ತನು ಐದು ರೊಟ್ಟಿ ಎರಡು ಮೀನುಗಳನ್ನು ತೆಗೆದುಕೊಂಡು ಆಶೀರ್ವದಿಸಿ ಐದು ಸಾವಿರ ಜನರಿಗೆ ಹಂಚಿದನು. ಉಳಿದ ರೊಟ್ಟಿಯ ತುಂಡುಗಳು, ಹನ್ನೆರಡು ಪುಟ್ಟಿಗಳು ತುಂಬಿದವು. ಇನ್ನೊಮ್ಮೆ ಏಳು ರೊಟ್ಟಿಗಳು, ಕೆಲವು ಮೀನುಗಳಿಂದ ನಾಲ್ಕು ಸಾವಿರ ಜನರು ಪೋಷಿಸಲ್ಪಟ್ಟರು. ಅಬ್ರಹಾಮನನ್ನು ಕರ್ತನು 1.ನೀನು ಭೂಮಿಯ ಮೇಲಿನ ಧೂಳಿನಂತೆಯೂ, 2.ಸಮುದ್ರ ದಂಡೆಯ ಮರಳಿನಂತೆಯೂ, 3.ಆಕಾಶದ ನಕ್ಷತ್ರಗಳಂತೆಯೂ, ವೃದ್ಧಿಯಾಗುವಿ ಎಂದು ಹೇಳಿದನು. ಇಲ್ಲಿ ಮೂರು ರೀತಿಯ ವೃದ್ಧಿ. ಇವುಗಳಲ್ಲಿ ಎರಡು ಭೂಸಂಬಂಧವಾದವುಗಳು. ಮತ್ತೊಂದು ಉನ್ನತಕ್ಕೆ ಅಂದರೆ ಆತ್ಮೀಕಕ್ಕೆ ಸಂಬಂದಪಟ್ಟದ್ದು. ಅಬ್ರಹಾಮನ ಸಂತತಿಯನ್ನು ವೃದ್ಧಿಪಡಿಸಲು ದೇವರಿಗೆ ಒಂದು ಉದ್ದೇಶವಿತ್ತು. ಯಾಕೋಬನಿಗೆ ನಾಲ್ವರು ಹೆಂಡತಿಯರಿದ್ದರು. ಲೇಯಳು, ರಾಹೇಲಳು, ಜಿಲ್ಪಾ ಮತ್ತು ಬಿಲ್ಹ. ಆ ನಾಲ್ಕು ಮಂದಿ ಹನ್ನೆರಡು ಮಕ್ಕಳನ್ನು ಪಡೆದರು. ಹನ್ನೆರಡು ಎಂಬುದು ಕರ್ತನು ದಯಪಾಲಿಸಿದ ವೃದ್ಧಿಯ ಸಂಖ್ಯೆಯಾಗಿದೆ. ಹಬ್ಬಿ ಹೆಚ್ಚಿದ ಅವರಿಗೆ ಕರ್ತನು ಹಾಲೂ, ಜೇನೂ ಹರಿಯುವ ಕಾನಾನ್ ದೇಶವನ್ನು ನೀಡಿದನು.

ದೇವಮಕ್ಕಳೇ, ಯೇಸುಕ್ರಿಸ್ತನು ಭೂಮಿಗೆ ಬಂದಾಗ, ಹನ್ನೆರಡು ಮಂದಿಯನ್ನು ಕರೆದು ಶಿಷ್ಯರಾಗಿ, ಅಪೊಸ್ತಲರಾಗಿ ಪ್ರಪಂಚದಲ್ಲೆಲ್ಲಾ ಸುವಾರ್ತೆ ಸಾರುವಂತೆ ಆದೇಶಿಸಿದನು. ಯಾಕೋಬನಿಗೆ ನಾಲ್ಕು ಮಡದಿಯರಿದ್ದಂತೆ ಹೊಸ ಒಡಂಬಡಿಕೆಯಲ್ಲಿ ನಾಲ್ಕು ಸುವಾರ್ತೆಗಳ ಮೂಲಕವಾಗಿ ಪ್ರಪಂಚದ ನಾಲ್ಕು ದಿಕ್ಕುಗಳಿಗೂ ಸುವಾರ್ತೆ ಸಾರಲ್ಪಟ್ಟಿತು. ಪ್ರಿಯರೇ, ಕರ್ತನು ನಿಮ್ಮನ್ನು ವೃದ್ಧಿಪಡಿಸುವನು. ನೀವು ಕರ್ತನಿಗಾಗಿ ವೃದ್ಧಿಯಾಗಬೇಕು.

*ನೆನಪಿಗೆ : ನಿಮ್ಮ ಪಿತೃವಾದ ಅಬ್ರಹಾಮನನ್ನೂ, ನಿಮ್ಮನ್ನು ಹೆತ್ತ ಸಾರಳನ್ನೂ ದೃಷ್ಟಿಸಿರಿ. ಅಬ್ರಹಾಮನು ಒಬ್ಬನೇ ಇದ್ದಾಗ ನಾನು ಅವನನ್ನು ಕರೆದು ಆಶೀರ್ವದಿಸಿ ಸಂತಾನದಿಂದ ಹೆಚ್ಚಿಸಿದೆನಲ್ಲವೇ (ಯೆಶಾ.51:2).*



ಮೇ 2

## ಕಳುಹಿಸಿದಾತನ ಕಾರ್ಯ!

ಬೆಳಿಗ್ಗೆ : 1 ಅರಸು 12,13
ಸಂಜೆ : ಲೂಕ. 22:1–23

"ನನ್ನನ್ನು ಕಳುಹಿಸಿದಾತನ ಕಾರ್ಯಗಳನ್ನು ನಾವು ಹಗಲಿರುವಾಗಲೇ ನಡೆಸಬೇಕು. ರಾತ್ರಿ ಬರುತ್ತದೆ. ಅದು ಬಂದ ಮೇಲೆ ಯಾರೂ ಕೆಲಸ ಮಾಡಲಾರರು" (ಯೋಹಾ. 9:4).

ದೇವರು ಕಾಲವನ್ನು ಎರಡಾಗಿ ವಿಭಾಗಿಸಿದನು. 1. ಹಗಲು, 2. ರಾತ್ರಿ. ಹಗಲು ಕಾಲವನ್ನು ಕುರಿತು ಹೇಳುವಾಗ ಅದು ಕಾರ್ಯ ನಡೆಸುವ ಕಾಲವೆಂದು ಹೇಳಿದನು. ಕರ್ತನು ಸುವಾರ್ತೆಯ ಬಾಗಿಲುಗಳನ್ನು ತೆರೆದು ಇಟ್ಟಿರುವಾಗ ಹೆಚ್ಚುವಂತೆ ಆತ್ಮಗಳ ಆದಾಯ ಪಡಿಸಬೇಕು. ಅದೇ ವೇಳೆಯಲ್ಲಿ ಆತನು ಎಚ್ಚರಿಸುತ್ತಾ, ರಾತ್ರಿ ಬರುತ್ತದೆ, ಅದು ಬಂದ ಮೇಲೆ ಯಾರೂ ಕೆಲಸ ಮಾಡಲಾರರು ಎಂದು ಹೇಳುತ್ತಾನೆ.

ಅಂಥಹ ಒಂದು ಇರುಳಿನ ಕಾಲ ಯೇಸುಕ್ರಿಸ್ತನಿಗೆ ಶಿಲುಬೆಯಲ್ಲಿ ಬಂತು. ಅದ್ಭುತಗಳನ್ನು ಮಾಡದಂತೆ ಆತನ ಕರಗಳು ಶಿಲುಬೆಯಲ್ಲಿ ಮೊಳೆಗಳಿಂದ ಜಜ್ಜಲ್ಪಟ್ಟವು. ಆತನ ಪಾದಗಳು ಜನರನ್ನು ಸಂಧಿಸಲಾಗದಂತೆ ಶಿಲುಬೆಯಲ್ಲಿ ಜಡಿಯಲ್ಪಟ್ಟವು. ಆ ಸಮಯದಲ್ಲಿ ಶಿಷ್ಯರೆಲ್ಲರೂ ಭಯಪಟ್ಟು ಯೇಸುವನ್ನು ಬಿಟ್ಟು ಅಡಗಿಕೊಂಡರು. ಕ್ರಿಸ್ತನಿಗೆ ಸೇವೆ ಮಾಡಲು ದೊರೆತ ಹಗಲು ಕಾಲ ಮೂರುವರೆ ವರುಷಗಳು ಮಾತ್ರ. ಆ ಸಮಯವನ್ನು ಉಪಯೋಗಿಸಿಕೊಂಡು ಒಂದು ಕಡೆ ಸುವಾರ್ತೆಯನ್ನು ಸಾರಿ ಬೋಧಿಸಿದನು. ಮತ್ತೊಂದೆಡೆ ಶಿಷ್ಯರನ್ನು ತರಬೇತುಗೊಳಿಸಿದನು. ಹನ್ನೆರಡು ಮಂದಿ ಶಿಷ್ಯರಾಗಿದ್ದವರು ಎಪ್ಪತ್ತು ಮಂದಿಯಾಗಿ ಹೆಚ್ಚಿದರು (ಲೂಕ. 10:1). ಮೇಲುಪ್ಪರಿಗೆಯಲ್ಲಿ ಅವರು ನೂರಿಪತ್ತಾಗಿ ಹೆಚ್ಚಿದರು. ಒಂದೇ ಸಮಯದಲ್ಲಿ ಐನೂರಕ್ಕೂ ಅಧಿಕ ಜನರಿಗೆ ಕರ್ತನು ದರ್ಶನ ನೀಡಿದನು (1 ಕೊರಿಂ. 15:6). ಇಂದು ಪ್ರಪಂಚದಲ್ಲೆಲ್ಲಾ ಕೋಟ್ಯಾನುಕೋಟಿ ಜನರು ಯೇಸುಕ್ರಿಸ್ತನನ್ನು ಪ್ರೀತಿಸುವರು. ಕರ್ತನ ಸೇವೆ ಮಾಡುವರು. ಕ್ರಿಸ್ತನ ಮೂರುವರೆ ವರುಷಗಳ ಅಂದಿನ ಸೇವೆಯ ಫಲವನ್ನು ಪ್ರಪಂಚದಲ್ಲೆಲ್ಲಾ ಕಾಣುತ್ತಿದ್ದೇವೆ.

ದೇವಜನರೇ, ಇನ್ನು ಬರಲಿರುವ ಏಳು ವರ್ಷಗಳು ಕ್ರಿಸ್ತವಿರೋಧಿಯ ಇರುಳಿನ ಕಾಲವಾಗಿದೆ. ಹಿಂದೆ ಎಂದೂ ಕಾಣದ ಉಪದ್ರವ ಕಾಲ ಬರಲಿದೆ. ಇನ್ನು ಇರುವ ಸ್ವಲ್ಪ ಕಾಲದಲ್ಲಿ ನೀವು ಸುವಾರ್ತೆ ಸಾರಿ ಹಬ್ಬಿ ಹೆಚ್ಚಬೇಕು. ಪೂರ್ಣ ಬಲದಿಂದ ಸೇವೆ ಮಾಡಬೇಕಾಗಿದೆ, ಆಲಸ್ಯಬೇಡ.

*ನೆನಪಿಗೆ : ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟ ಪಟ್ಟರೆ ಅವನಿಗೆ ಪ್ರಯೋಜನವೇನು? ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಡಬಹುದು? (ಮಾರ್ಕ. 8:36,37).*

ಮೇ 3

## ಹನ್ನೆರಡು!

ಬೆಳಿಗ್ಗೆ : 1 ಅರಸು 14,15
ಸಂಜೆ : ಲೂಕ. 22:24–46

"ನಾನು ಆ ಐದು ರೊಟ್ಟಿಗಳನ್ನು ಮುರಿದು ಐದು ಸಾವಿರ ಜನರಿಗೆ ಹಂಚಿಸಿದಾಗ ತುಂಡು ತುಂಬಿದ ಎಷ್ಟು ಪುಟ್ಟಿಗಳನ್ನು ತೆಗೆದುಕೊಂಡು ಹೋದಿರಿ ಎಂದು ಕೇಳಿದ್ದಕ್ಕೆ ಅವರು ಹನ್ನೆರಡು ಪುಟ್ಟಿ ಅಂದರು" (ಮಾರ್ಕ.8:19).

ಲೌಕೀಕವಾದ ರೀತಿಯಲ್ಲಿ ಹನ್ನೆರಡು ಎಂಬುದನ್ನು ಆಡಳಿತ ಸಂಖ್ಯೆ ಎಂದು ವೇದ ಪಂಡಿತರು ಹೇಳುವರು. ಆದರೆ ಹನ್ನೆರಡು ಎಂಬುದು ದೈವೀಕ ಸಂಖ್ಯೆಯಾಗಿದೆ. ಯೇಸು ಕ್ರಿಸ್ತನು ಈ ಪ್ರಪಂಚದಲ್ಲಿದ್ದಾಗ ತನಗೆಂದು ಒಂದು ಚಿಕ್ಕ ಸರ್ಕಾರವನ್ನು ಸ್ಥಾಪಿಸಬೇಕೆಂದು ಬಯಸಿದನು. ಆದ್ದರಿಂದ ತನ್ನನ್ನು ಹಿಂಬಾಲಿಸಿದವರೊಳಗಿಂದ ಹನ್ನೆರಡು ಮಂದಿಯನ್ನು ಆರಿಸಿಕೊಂಡು ಅವರಿಗೆ ಅಪೊಸ್ತಲರೆಂದು ಹೆಸರಿಟ್ಟನು; ದೆವ್ವಗಳನ್ನು ಬಿಡಿಸಲು, ವ್ಯಾಧಿಯುಳ್ಳವರನ್ನು ಗುಣಪಡಿಸುವ ಶಕ್ತಿಯನ್ನು ಅಧಿಕಾರವನ್ನು ಅವರಿಗೆ ದಯಪಾಲಿಸಿದನು (ಮಾರ್ಕ. 3:13–19).

ಸೈತಾನನೂ ಹನ್ನೆರಡು ಎಂಬ ಸಂಖ್ಯೆಯನ್ನು ಉಪಯೋಗಿಸುವನು. ಇಸ್ರಾಯೇಲ್ ದೇಶದಲ್ಲಿ ಹನ್ನೆರಡು ವರುಷಗಳಿಂದ ರಕ್ತ ಕುಸುಮ ರೋಗದಿಂದ ನರಳುತ್ತಿದ್ದ ಒಬ್ಬ ಸ್ತ್ರೀ ತನ್ನ ಎಲ್ಲಾ ಆಸ್ತಿಯನ್ನು ತನ್ನ ಸ್ವಸ್ಥತೆಗಾಗಿ ವೈದ್ಯರ ಬಳಿ ವ್ಯಯ ಮಾಡಿದರೂ ಗುಣವಾಗದೇ ಹೋದಳು. ಆಗ ಕ್ರಿಸ್ತನ ಉಡುಪಿನ ಗೊಂಡೆಯನ್ನು ಮುಟ್ಟಿಯಾದರೂ ಗುಣ ಹೊಂದುವೆನೆಂಬ ನಂಬಿಕೆಯಿಂದ ಆತನ ಉಡುಪಿನ ಗೊಂಡೆಯನ್ನು ಮುಟ್ಟಲು ಗುಣಹೊಂದಿದಳು (ಲೂಕ. 8:44). ನೋಡಿ ಸೈತಾನನು ಹನ್ನೆರಡು ವರುಷಗಳು ಭಯಂಕರ ವ್ಯಾಧಿಯನ್ನು ನೀಡಿ ಆ ಸ್ತ್ರೀಯನ್ನು ಹಿಂಸೆ ಪಡಿಸಿದನು. ಅದರಂತೆಯೇ ದೇವಾಲಯದ ಮುಖ್ಯಸ್ಥನಾದ ಯಾಯಿರನೆಂಬುವನು ಯೇಸುವಿನ ಪಾದದಲ್ಲಿ ಬಿದ್ದು ಹನ್ನೆರಡು ವರ್ಷದ ತನ್ನ ಒಬ್ಬಳೇ ಮಗಳು ಮರಣಾವಸ್ಥೆಯಲ್ಲಿದ್ದದನ್ನು ಹೇಳಿದನು. ಯೇಸು ಅವನ ಮನೆಗೆ ಹೋಗಿ ಅವಳು ಮರಣ ಹೊಂದಿರುವದನ್ನು ನೋಡಿ ಅವಳ ಕೈ ಹಿಡಿದು ಜೀವದಿಂದ ಎಬ್ಬಿಸಿದನು (ಲೂಕ. 8:54). ಯೇಸು ಹನ್ನೆರಡು ವರುಷದವನಾಗಿದ್ದಾಗಲೇ ದೇವಾಲಯದಲ್ಲಿ ಶಾಸ್ತ್ರಿಗಳೊಂದಿಗೆ ತರ್ಕ ಮಾಡಿದನೆಂದು ಸತ್ಯವೇದ ಹೇಳುತ್ತದೆ.

ದೇವಜನರೇ, ಹನ್ನೆರಡು ಎಂಬ ಸಂಖ್ಯೆ ಸತ್ಯವೇದದಲ್ಲಿ ಒಂದು ಪ್ರಾಮುಖ್ಯವಾದ ಸ್ಥಾನ ಗಳಿಸಿರುವದು.

*ನೆನಪಿಗೆ : ನನ್ನ ರಾಜ್ಯದಲ್ಲಿ ನೀವು ನನ್ನ ಮೇಜಿನ ಮೇಲೆ ಊಟ ಮಾಡುವಿರಿ, ಕುಡಿಯುವಿರಿ ಮತ್ತು ಸಿಂಹಾಸನಗಳ ಮೇಲೆ ಕೂತುಕೊಂಡು ಇಸ್ರಾಯೇಲಿನ ಹನ್ನೆರಡು ಕುಲಗಳಿಗೆ ನ್ಯಾಯ ತೀರಿಸುವಿರಿ (ಲೂಕ. 22:30).*



ಮೇ 4

## ಹನ್ನೆರಡೂ, ಎಪ್ಪತ್ತೂ!

ಬೆಳಿಗ್ಗೆ : 1 ಅರಸು 16,17,18
ಸಂಜೆ : ಲೂಕ. 22:47–71

"ತರುವಾಯ ಅವರು ಎಲೀಮಿಗೆ ಬಂದರು. ಅಲ್ಲಿ ಹನ್ನೆರಡು ನೀರಿನ ಒರೆತಗಳೂ, ಎಪ್ಪತ್ತು ಖರ್ಜೂರದ ಮರಗಳೂ ಇದ್ದದರಿಂದ ಆ ನೀರಿನ ಬಳಿಯಲ್ಲಿ ಇಳಿದುಕೊಂಡರು. (ವಿಮೋ. 15:27).

ಯಾಕೋಬನ ಹನ್ನೆರಡು ಮಕ್ಕಳೂ, ಅವರ ಕುಟುಂಬವೂ ಐಗುಪ್ತ ದೇಶಕ್ಕೆ ಬರುವಾಗ ಎಪ್ಪತ್ತು ಮಂದಿಯಾಗಿ ಹೆಚ್ಚಿದ್ದರು. (ಆದಿ. 46:27). ಲೂಕ. 9:1ರಲ್ಲಿ "ಯೇಸು ತನ್ನ ಹನ್ನೆರಡು ಶಿಷ್ಯರನ್ನು ಬರಮಾಡಿ" ಎಂದು ಬರೆಯಲ್ಪಟ್ಟಿದೆ. ಲೂಕ. 10:1ರಲ್ಲಿ "ಕರ್ತನು ಬೇರೆ ಎಪ್ಪತ್ತು ಮಂದಿಯನ್ನು ನೇಮಿಸಿದನು" ಎಂದು ಓದುತ್ತೇವೆ. ಹನ್ನೆರಡು, ಈಗ ಎಪ್ಪತ್ತಾಗಿ ಮಾರ್ಪಟ್ಟಿತು. ಪ್ರಿಯರೇ, ನೀವು ಹಬ್ಬಿ ಹೆಚ್ಚುವಂತೆ ಕರೆಯಲ್ಪಟ್ಟಿರುವಿರಿ. ಕರ್ತನ ಬೀಜ ನಿಮ್ಮೊಳಗೆ ಬಿತ್ತಲ್ಪಟ್ಟಿರುವದು. ಎಲೀಮಿನ ಆಶೀರ್ವಾದದಂತೆ ನೀವು ಹನ್ನೆರಡು ನೀರಿನ ಬುಗ್ಗೆಗಳಾಗಿ ಎಪ್ಪತ್ತು ಖರ್ಜೂರದ ಮರಗಳಾಗಿ ಕಾಣಲ್ಪಡಬೇಕು.

ಖರ್ಜೂರ ಹಣ್ಣಿನಂತೆ ರುಚಿಯಾದ, ಸತ್ವವುಳ್ಳ ಹಣ್ಣು ಬೇರೊಂದಿಲ್ಲ. ಬರಗಾಲದಲ್ಲಿಯೂ, ಖರ್ಜೂರದ ಮರ ಜೇನಿನಂತೆ ರುಚಿಯಾದ ಹಣ್ಣುಗಳನ್ನು ಕೊಡುತ್ತಲೇ ಇರುತ್ತದೆ. ಅದರಂತೆಯೇ ನೀವೂ ಎಲ್ಲಾ ಸಂದರ್ಭ ಸನ್ನಿವೇಶಗಳಲ್ಲಿಯೂ ಆತನಿಗಾಗಿ ಫಲಕೊಡುವವರಾಗಬೇಕೆಂದು ಕರ್ತನು ಬಯಸುವನು ಮತ್ತು ಅದಕ್ಕಾಗಿ ನಿಮ್ಮನ್ನು ಕರೆದಿರುವನು. ವರ್ಷದಲ್ಲಿ ಹನ್ನೆರಡು ತಿಂಗಳಿರುತ್ತದೆ. ಹಗಲಿಗೂ ಹನ್ನೆರಡು ತಾಸುಗಳುಂಟು. ಕರ್ತನು ನೀಡಿರುವ ಹನ್ನೆರಡು ತಿಂಗಳು, ಅಂದರೆ ವರ್ಷ ಪೂರ್ತಿ ನೀವು ಕರ್ತನಿಗಾಗಿ ಫಲಕೊಡುವವರಾಗಿರಿ. ಆತ್ಮಗಳ ಆದಾಯ ಪಡಿಸಿರಿ. ಹಗಲು ಕಾಲ ಇರುವವರೆಗೆ ನಾನು ನನ್ನನ್ನು ಕಳುಹಿಸಿದಾತನ ಕೆಲಸವನ್ನು ಮಾಡಬೇಕೆಂಬುದೇ ನಿಮ್ಮ ಹೃದಯದ ತುಡಿತವಾಗಿರಲಿ.

ದೇವಮಕ್ಕಳೇ, ಹನ್ನೆರಡು ತಿಂಗಳೂ ಕರ್ತನು ನಿಮ್ಮ ಮೇಲೆ ಹೊಸ ಹೊಸ ಅಭಿಷೇಕದಿಂದ ಕರ್ತನು ನಿಮ್ಮನ್ನು ತುಂಬಿಸುವನು. ಆತನ ಚಿತ್ತ ಪರಲೋಕದಲ್ಲಿ ನೆರವೇರುವಂತೆ ಭೂಲೋಕದಲ್ಲಿಯೂ ನೆರವೇರಲಿ ಎಂಬ ನಮ್ಮ ಅನುದಿನದ ಪ್ರಾರ್ಥನೆ ನೆರವೇರುವಂತೆ ನಾಶದೆಡೆಗೆ ಓಡುತ್ತಿರುವ ಆತ್ಮಗಳಿಗಾಗಿ ತೀವ್ರವಾಗಿ ಪ್ರಾರ್ಥಿಸಿರಿ.

*ನೆನಪಿಗೆ : ಪರಲೋಕದಲ್ಲಿ ಒಂದು ಮಹಾ ಲಕ್ಷಣವು ಕಾಣಿಸಿತು. ಅದೇನೆಂದರೆ ಸೂರ್ಯನನ್ನು ಧರಿಸಿಕೊಂಡಿದ್ದ ಒಬ್ಬ ಸ್ತ್ರೀಯಿದ್ದಳು. ಆಕೆಯ ಕಾಲುಗಳ ಕೆಳಗೆ ಚಂದ್ರನಿದ್ದನು. ಆಕೆಯ ತಲೆಯ ಮೇಲೆ ಹನ್ನೆರಡು ನಕ್ಷತ್ರಗಳುಳ್ಳ ಒಂದು ಕಿರೀಟವಿತ್ತು (ಪ್ರಕ. 12:1).*

ಮೇ 5

## ಅರಣ್ಯವು ಹರ್ಷಿಸುವದು!

ಬೆಳಿಗ್ಗೆ : 1 ಅರಸು 19,20
ಸಂಜೆ : ಲೂಕ. 23:1–25

"ಅರಣ್ಯವೂ ಮರುಭೂಮಿಯೂ ಆನಂದಿಸುವವು. ಒಣನೆಲವು ಹರ್ಷಿಸಿ ತಾವರೆಯಂತೆ ಕಳಕಳಿಸುವದು. ಅದು ಸಮೃದ್ಧಿಯಾಗಿ ಹೂಬಿಟ್ಟು ಉತ್ಸಾಹಧ್ವನಿ ಮಾಡುವಷ್ಟು ಉಲ್ಲಾಸಿಸುವದು" (ಯೆಶಾ. 35:1,2).

ನನ್ನ ಜೀವಿತ ಅರಣ್ಯರೋದನದಂತಾಗಿದೆ, ನನ್ನ ಕುಟುಂಬ ಒಡೆದು ಹೋಗಿದೆ, ನನ್ನ ಕುಟುಂಬ ಜೀವಿತದಲ್ಲಿ ಸಂತೋಷ ಸಮಾಧಾನಗಳಿಲ್ಲ. ಸಾಲದ ಸಮಸ್ಯೆ ಅಧಿಕವಾಗಿದೆ ಎಂದು ಚಿಂತಿಸುತ್ತಿರುವಿರಾ? ಯಾವದೋ ಒಂದು ಮರುಭೂಮಿಯಲ್ಲಿ ಮಾರ್ಗ ತಿಳಿಯದೆ ಸಿಕ್ಕಿಕೊಂಡಿರುವಿರಾ? ಕರ್ತನು ಒಂದು ವಾಗ್ದಾನವನ್ನು ಕೊಡುವನು. "ಅರಣ್ಯವೂ ಮರುಭೂಮಿಯೂ ಆನಂದಿಸುವವು. ಒಣನೆಲವು ಹರ್ಷಿಸಿ ತಾವರೆಯಂತೆ ಕಳಕಳಿಸುವದು. ಅದು ಸಮೃದ್ಧಿಯಾಗಿ ಹೂಬಿಟ್ಟು ಉತ್ಸಾಹಧ್ವನಿ ಮಾಡುವಷ್ಟು ಉಲ್ಲಾಸಿಸುವದು. ಲೆಬನೋನಿನ ಮಹಿಮೆಯೂ, ಕರ್ಮೆಲಿನ ಮತ್ತು ಶಾರೋನಿನ ವೈಭವವೂ ಅದಕ್ಕೆ ದೊರೆಯುವವು. ಇವೆಲ್ಲಾ ಯೆಹೋವನ ಮಹಿಮೆಯನ್ನೂ, ನಮ್ಮ ದೇವರ ವೈಭವವನ್ನೂ ಕಾಣುವವು" (ಯೆಶಾ. 35:1,2).

ಈ ವಾಗ್ದಾನದಲ್ಲಿ ಏಳು ಆಶೀರ್ವಾದಗಳು ಕೊಡಲ್ಪಟ್ಟಿರುವದು. 1. ಅರಣ್ಯವೂ, ಮರುಭೂಮಿಯೂ ಆನಂದಿಸುವವು. 2. ನಿಮ್ಮ ಆತ್ಮ ನೂತನ ಹರ್ಷದಿಂದ ಕಳೆಕೊಳ್ಳುವದು. 3. ಸಮೃದ್ಧಿಯಾದ ದಿನಗಳನ್ನು ಕರ್ತನು ನಿಮಗೆ ನೀಡುವನು. 4. ನಿಮ್ಮ ಆಂತರ್ಯ ಉತ್ಸಾಹಧ್ವನಿಗೈಯುವಷ್ಟು ಉಲ್ಲಾಸವನ್ನು ನೀಡುವನು. 5. ನೀವು ಸಂತೋಷದಿಂದ ಹಾಡಿ ಕರ್ತನನ್ನು ಆರಾಧಿಸುವಂತೆ ಸ್ತುತಿಯ ಅಭಿಷೇಕವನ್ನು ಅನುಗ್ರಹಿಸುವನು. 7. ಕರ್ಮೆಲ್ ಶಾರೋನಿನ ವೈಭವ ಅಲಂಕಾರವನ್ನು ಕರ್ತನು ನಿಮಗೆ ನೀಡುವನು. ನೀವು ಕರ್ತನ ಮಹಿಮೆಯನ್ನೂ, ಮಹತ್ವವನ್ನೂ ಕಾಣುವಿರಿ. ಇಸ್ರಾಯೇಲ್ಯರು ಕರ್ತನಿಗೆ ಅವಿಧೇಯರಾಗಿ ವಿಗ್ರಹಾರಾಧನೆಗೆ ಒಳಗಾಗಿ ಕರ್ತನಿಗೆ ಕೋಪವೆಬ್ಬಿಸಿದಾಗ ಕರ್ತನು ಅವರನ್ನು ಅಶ್ಶೂರ್ಯರ ಕೈಗೆ ಒಪ್ಪಿಸಿಕೊಡಲು ಅಶ್ಶೂರ್ಯರು ಅವರನ್ನು ಸೆರೆ ಒಯ್ದರು. ಮಾತ್ರವಲ್ಲ, ಇಸ್ರಾಯೇಲ್ ದೇಶ ಬರಡು ಭೂಮಿಯಾಗಿ ಮಾರ್ಪಟ್ಟಿತು. ಅವರು ಸೆರೆಯಲ್ಲಿ ಗೋಳಾಡಿ ಕರ್ತನನ್ನು ಬೇಡಿಕೊಂಡಾಗ ಕರ್ತನು ಮನಮರುಗಿ ಅವರನ್ನು ಸೆರೆಯಿಂದ ಬಿಡಿಸಿದನು.

ದೇವಜನರೇ, ನಿಮ್ಮ ಅರಣ್ಯದ ಮರುಭೂಮಿಯ ಜೀವಿತ ಮಾರ್ಪಡಬೇಕಿದ್ದರೆ, ದೇವರ ಪ್ರಸನ್ನತೆಯೊಳಗೆ ಬನ್ನಿರಿ. ಕರ್ತನೊಂದಿಗೆ ನಿಮ್ಮನ್ನು ಸಂಧಾನ ಪಡಿಸಿಕೊಂಡು ಮೊದಲಿನ ಪ್ರೀತಿಗೆ ಹಿಂದಿರುಗಿರಿ. ಕರ್ತನ ವಾಗ್ದಾನಗಳನ್ನು ನಂಬಿ ಆತನಿಗೆ ಮುಖ್ಯತ್ವ ನೀಡಿರಿ.

*ನೆನಪಿಗೆ : ....ಮೂಕನ ನಾಲಿಗೆಯು ಹರ್ಷಧ್ವನಿಗೈಯುವದು. ಅರಣ್ಯದಲ್ಲಿ ಒರತೆಗಳು ಒಡೆಯುವವು. ಒಣನೆಲದಲ್ಲಿ ನದಿಗಳು ಹುಟ್ಟಿ ಹರಿಯುವವು (ಯೆಶಾ. 35:6).*



ಮೇ 6

## ಅರಣ್ಯದಲ್ಲಿ ಶಬ್ದ!

ಬೆಳಿಗ್ಗೆ : 1 ಅರಸು 21,22
ಸಂಜೆ : ಲೂಕ. 23:26–56

"ಅರಣ್ಯದಲ್ಲಿ ಕೂಗುವವನ ಶಬ್ದವದೆ ಎಂಬುದಾಗಿ ಪ್ರವಾದಿಯಾದ ಯೆಶಾಯನಿಂದ ಸೂಚಿತನಾದವನು ಇವನೇ" (ಮತ್ತಾ. 3:3).

ಈ ಪ್ರಪಂಚದಲ್ಲಿ ಅನೇಕ ರೀತಿಯ ಶಬ್ದಗಳು ಉಂಟು. ಕೆಲವು ಶಬ್ದಗಳು ಸಂತೋಷವನ್ನು ನೀಡುವದು. ಕೆಲವು ಶಬ್ದಗಳು ಸಂಕಟ ಉಂಟುಮಾಡುವದು. ಭಯ ಉಂಟಾಗುವ ಶಬ್ದಗಳೂ ಉಂಟು. ಮನುಷ್ಯರ ಪಕ್ಷಿ ಸಂಕುಲಗಳ ಮೃಗಜೀವಿಗಳ ಶಬ್ದಗಳೂ ಉಂಟು. ಆದರೆ ತಂದೆ ದೇವರ ಶಬ್ದ ಸಮುದ್ರಘೋಶದಂತೆಯೂ, ಸಿಡಿಲಿನ ಶಬ್ದದಂತೆಯೂ ಇರುವದು. ಕುಮಾರನಾದ ಯೇಸುಕ್ರಿಸ್ತನ ಶಬ್ದ ಸ್ನೇಹಿತರೊಂದಿಗೆ ಮಾತಾಡುವ ಶಬ್ದದಂತೆ ಪ್ರೀತಿ ಕನಿಕರ ಉಳ್ಳದ್ದಾಗಿರುವದು. ಪವಿತ್ರಾತ್ಮನ ಶಬ್ದ ಮೆಲುಧ್ವನಿಯಿಂದ ನಮ್ಮ ಆತ್ಮದಲ್ಲಿ ನಿನಾದಿಸುತ್ತದೆ.

ಸ್ನಾನಿಕನಾದ ಯೋಹಾನನ ಧ್ವನಿಯು "ಅರಣ್ಯದಲ್ಲಿ ಕೂಗುವವನ ಶಬ್ದ" ಎಂದು ಕರೆಯಲ್ಪಡುವದು. ಆತನು ಚಿಕ್ಕ ಪ್ರಾಯದಿಂದಲೇ ಯೂದಾಯದ ಅರಣ್ಯದಲ್ಲಿ ಇದ್ದನು. ಅವನು ಎಲೀಯನಂತೆ ಒಂಟೆಯ ಕೂದಲಿನ ಹೊದಿಕೆಯನ್ನು ಧರಿಸಿ, ಸೊಂಟಕ್ಕೆ ತೊಗಲಿನ ನಡುಕಟ್ಟನ್ನು ಧರಿಸಿದ್ದನು (ಮತ್ತಾ. 3:4, 2 ಅರಸು. 1:8). ಅರಣ್ಯದೊಳಗಿಂದ ಬಂದ ಅವನ ಶಬ್ದವೇನು? "ದೇವರ ಕಡೆಗೆ ತಿರುಗಿಕೊಳ್ಳಿರಿ, ದೇವರ ರಾಜ್ಯ ಸಮೀಪಿಸಿತು" ಎಂಬುದೇ. ಯೇಸುಕ್ರಿಸ್ತನು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಹೊಂದಲು ಮುಂದೆ ಬಂದದ್ದು ಮಾತ್ರವಲ್ಲ, ದೇವರ ಕಡೆಗೆ ತಿರುಗಿಕೊಳ್ಳಿರಿ. ದೇವರ ರಾಜ್ಯ ಸಮೀಪಿಸಿತು ಎಂದೇ ಸಾರಿ ಹೇಳಲು ಪ್ರಾರಂಭಿಸಿದನು (ಮತ್ತಾ. 4:17). ಅರಣ್ಯದಿಂದ ಬರುವ ಶಬ್ದಕ್ಕೆ ನೀವು ಕಿವಿಗೊಡುವಿರಾದರೆ. ಕರ್ತನು ನಿಮಗೆ ರಕ್ಷಣೆಯನ್ನು ನೀಡುವನು. ನಿಮ್ಮ ಹೆಸರು ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಡುವದು. ದೇವರ ಮಕ್ಕಳೆಂದು ಕರೆಯಲ್ಪಡುವಿರಿ. ನಿತ್ಯಜೀವವನ್ನು ಮಹಿಮೆಯಾದ ಪರಲೋಕ ರಾಜ್ಯವನ್ನು ಪಡೆಯುವಿರಿ. ಉತ್ಸಾಹ ಧ್ವನಿಯನ್ನು ಕೇಳಿದ ಜನರು ಧನ್ಯರು" (ಕೀರ್ತ. 89:15).

ದೇವಮಕ್ಕಳೇ, ಕ್ರಿಸ್ತಯೇಸುವಿನ ರಕ್ತವು ಕನಿಕರದಿಂದ ನಿಮ್ಮನ್ನು ಕೂಗುತ್ತಿರುವದು. ನೀವು ಆತನ ಶಬ್ದಕ್ಕೆ ಕಿವಿಗೊಡುವಂತೆ ನಿಮ್ಮ ಕಿವಿಗಳು ಸದಾ ತೆರೆದಿರಲಿ.

*ನೆನಪಿಗೆ : ಯೆಹೋವನ ಮಹಿಮೆಯು ಗೋಚರವಾಗುವದು. ಎಲ್ಲಾ ಮನುಷ್ಯರೂ ಒಟ್ಟಿಗೆ ಅದನ್ನು ಕಾಣುವರು. "ಯೆಹೋವನ ಬಾಯೇ ಇದನ್ನು ನುಡಿದಿದೆ" ಎಂದು ಒಬ್ಬನು ಕೂಗುತ್ತಾನೆ (ಯೆಶಾ. 40:5),*

## ಮೇ 7 ಸೈತಾನನನ್ನು ಜಯಿಸುವ ಸ್ಥಳ!

ಬೆಳಿಗ್ಗೆ : 2 ಅರಸು 1,2,3
ಸಂಜೆ : ಲೂಕ. 24:1–35

"ಆಗ ಸೈತಾನನಿಂದ ಶೋಧಿಸಲ್ಪಡುವದಕ್ಕಾಗಿ ಆತ್ಮನು ಯೇಸುವನ್ನು ಅಡವಿಗೆ ಒಯ್ದನು" (ಮತ್ತಾ. 4:1).

ಅರಣ್ಯವೂ ಮರುಭೂಮಿಯೂ ಆನಂದಿಸುವವು. ಒಣನೆಲವು ಹರ್ಷಿಸಿ ತಾವರೆಯಂತೆ ನಳನಳಿಸುವವು ಎಂದು ಕರ್ತನು ವಾಗ್ದಾನಿಸಿರುವನು. ಆ ಮಾತನ್ನು ನೆರವೇರಿಸಲು ಮೊದಲನೆಯದಾಗಿ ಅರಣ್ಯದಿಂದ ಒಂದು ಶಬ್ದವು ಕೇಳಿಸುವಂತೆ ಮಾಡುವನು. ಎರಡನೆಯದಾಗಿ, ಅರಣ್ಯದ ಅನುಭವಗಳನ್ನು ಕೊಟ್ಟು ಶೋಧನೆಯನ್ನು ಜಯಿಸುವ ದೈವೀಕ ಬಲದಿಂದ ತುಂಬಿಸುವನು. ಯೇಸುಕ್ರಿಸ್ತನ ಸೇವೆಯು ಪ್ರಾರಂಭವಾಗುವಾಗ ಮೊದಲನೆಯದಾಗಿ ಆತನು ಅರಣ್ಯ ಪ್ರದೇಶಕ್ಕೆ ಹೋದನು. ತಾನಾಗಿ ಹೋಗಲಿಲ್ಲ, ದೇವರಾತ್ಮನಿಂದ ನಡೆಸಲ್ಪಟ್ಟು, ದೇವರ ಚಿತ್ತದಂತೆ ಹೋದನು.

ಯೇಸುಕ್ರಿಸ್ತನಿಗೆ ಅರಣ್ಯದಲ್ಲಿ ಮೂರು ಮುಖ್ಯವಾದ ಅನುಭವಗಳು ಕಾದಿದ್ದವು. 1. ಶತ್ರುವಿನ ಮೇಲೆ ಜಯಗಳಿಸಿದನು. 2. ಅರಣ್ಯದಲ್ಲಿ ತಂದೆ ದೇವರೊಂದಿಗೆ ಆಳವಾದ ಅನ್ಯೋನ್ಯತೆಯನ್ನು ಪಡೆಯುವ ಸಂದರ್ಭಗಳು ದೊರೆತವು. 3. ದೇವರಾತ್ಮನ ಬಲ ಆತನನ್ನು ತುಂಬಿತು. ಆತ್ಮನ ವರಗಳನ್ನು, ಮಹಿಮೆಯನ್ನು ಅರಣ್ಯದಲ್ಲಿ ಪಡೆದುಕೊಂಡನು. ನಿಮ್ಮ ಜೀವಿತದಲ್ಲಿ ಅರಣ್ಯ ಜೀವಿತದಂಥ ಸನ್ನಿವೇಶ, ಸಂದರ್ಭಗಳು ಬರುವಾಗ ಕರ್ತನೊಂದಿಗೆ ಆಳವಾದ ಅನ್ಯೋನ್ಯತೆಯನ್ನು ಬಯಸಿ ಪಡೆದುಕೊಳ್ಳಿರಿ. ಒಬ್ಬ ಭಕ್ತರ ಸೆರೆವಾಸದ ಅನುಭವಗಳು ಹೊರನೋಟಕ್ಕೆ ಬಹಳ ಕಷ್ಟಕರವಾಗಿ ಇತ್ತು. ಆದರೆ ಆತನೋ, "ನಾನು ದೇವರೊಂದಿಗೆ ಬೆಳದಿಂಗಳ ಆನಂದವನ್ನು ಅನುಭವಿಸುತ್ತಿದ್ದೆ" ಎಂದು ಹೇಳುತ್ತಾರೆ. ಬಲಹೀನತೆಯಲ್ಲಿ ಬಲವನ್ನು ಕಂಡುಕೊಳ್ಳುವ ಸ್ಥಳ ಕಷ್ಟ ಸಂಕಟಗಳ ಜೀವಿತವೇ ಆಗಿದೆ. ಕರ್ತನು ನಿಮ್ಮನ್ನು ಪ್ರೇರಿಸುವದಾದರೆ ದೇವರೊಂದಿಗೆ ಏಕಾಂತವಾಗಿದ್ದು ಉಪವಾಸ ಮಾಡಿ ಪ್ರಾರ್ಥಿಸುವಂತೆ ಏಕಾಂತ ಸ್ಥಳವನ್ನು ಆರಿಸಿಕೊಳ್ಳಿರಿ. ಏಳು ದಿನಗಳೋ, ಇಪ್ಪತ್ತೊಂದು ದಿನಗಳೋ, ನಾಲ್ವತ್ತು ದಿನಗಳೋ ಕರ್ತನ ಸಮ್ಮುಖದಲ್ಲಿ ಕಾದಿದ್ದು ಪ್ರಾರ್ಥಿಸಿರಿ.

ದೇವಮಕ್ಕಳೇ, ಅರಣ್ಯದಂಥ ಈ ಪ್ರಪಂಚದಲ್ಲಿ ಆತ್ಮದಾಪ್ತನಾದ ಯೇಸುವನ್ನು ಆಶ್ರಯಿಸಿರಿ. ಆಗ ಸೈತಾನನ ಸಕಲ ಶೋಧನೆಗಳನ್ನು ಜಯಿಸುವ ಶಕ್ತಿಯನ್ನು ನಿಮಗೆ ಆತನು ನೀಡುವನು. ನಿಮ್ಮ ಜೀವಿತವು ಮಹಿಮೆಯಿಂದ ಕೂಡಿದ್ದಾಗಿರುವದು.

*ನೆನಪಿಗೆ : ಉನ್ನತ ಲೋಕದಿಂದ ದಿವ್ಯಾತ್ಮಧಾರೆಯು ನಮ್ಮ ಮೇಲೆ ಸುರಿಸಲ್ಪಡುವದು; ಆಗ ಅರಣ್ಯವು ತೋಟವಾಗುವದು (ಯೆಶಾ. 32:15).*



## ಮೇ 8 ಅರಣ್ಯದಲ್ಲಿ ಆಹಾರ!

ಬೆಳಿಗ್ಗೆ : 2 ಅರಸು 4,5,6
ಸಂಜೆ : ಲೂಕ. 24:36–53

"ಇದು ಅಡವಿ, ಈಗ ಹೊತ್ತಾಯಿತು. ಈ ಗುಂಪಿಗೆ ಅಪ್ಪಣೆ ಕೊಡು; ಅವರು ಹಳ್ಳಿ ಪಳ್ಳಿಗಳಿಗೆ ಹೋಗಿ ಆಹಾರ ಪದಾರ್ಥಗಳನ್ನು ಕೊಂಡುಕೊಳ್ಳಲಿ ಅಂದರು" (ಮತ್ತಾ. 14:15).

ಹಳೆಯ ಒಡಂಬಡಿಕೆಯ ಕಾಲದಲ್ಲಿ ಇಸ್ರಾಯೇಲ್ಯರನ್ನು ದೇವರು ಐಗುಪ್ತದಿಂದ ಹೊರಡಿಸಿ, ಅರಣ್ಯದಲ್ಲಿ ನಡೆಸಿಕೊಂಡು ಬಂದಾಗ, ಅವರಿಗೆ ಆಹಾರವನ್ನೂ, ನೀರನ್ನೂ ಕೊಡಬೇಕಾದ ಹೊಣೆಯನ್ನು ಆತನು ತಾನೇ ಹೊತ್ತುಕೊಂಡನು. ದಾಸರಾಗಿದ್ದ ಅವರನ್ನು ಘೇಂಡಾಮೃಗದಂಥ ಬಲಶಾಲಿಗಳನ್ನಾಗಿ ಮಾರ್ಪಡಿಸುವಂತೆ ದೇವದೂತರ ಆಹಾರವಾದ ಮನ್ನವನ್ನು ಕೊಟ್ಟು ಅದ್ಭುತವಾಗಿ ಪೋಷಿಸಿದನು. ಇದರಿಂದ ಅವರು ಬಲಗೊಂಡು, ಕಾನಾನಿನಲ್ಲಿದ್ದ ಏಳು ಜನಾಂಗಗಳನ್ನೂ, ಮೂವತ್ತೊಂದು ರಾಜರನ್ನು ಯುದ್ಧದಲ್ಲಿ ಜಯಿಸಿದರು.

ಹೊಸ ಒಡಂಬಡಿಕೆಗೆ ಬರುವಾಗ, ಯೇಸುಕ್ರಿಸ್ತನ ಬೋಧನೆಯನ್ನು ಆಲಿಸಲು ಜನರು ಗುಂಪುಗುಂಪಾಗಿ ಆತನನ್ನು ಹಿಂಬಾಲಿಸಿದರು. ಅವರನ್ನು ಅರಣ್ಯಕ್ಕೆ ಒಯ್ದು ಅಲ್ಲಿ ಮೂರು ದಿನಗಳು ಹಗಲೂ ಇರುಳೂ ಬೋಧಿಸಿದನು. ನಂತರ ಅವರನ್ನು ಹಿಂದಕ್ಕೆ ಕಳುಹಿಸಬೇಕೆಂದು ಶಿಷ್ಯರು ಹೇಳಿದಾಗ, ಯೇಸುವಿಗೆ ಅವರನ್ನು ಹಸಿವಿನಿಂದ ಕಳುಹಿಸಿಬಿಡಲು ಮನಸ್ಸು ಒಪ್ಪಲಿಲ್ಲ. 5 ರೊಟ್ಟಿ 2 ಮೀನುಗಳಿಂದ ಅಲ್ಲಿಯೇ ಅವರಿಗೆ ಒಂದು ಭೋಜನವನ್ನು ಏರ್ಪಡಿಸಿ ತೃಪ್ತಿಯಾಗುವಷ್ಟು ಉಣಬಡಿಸಿದನು. ಅವರು ತಿಂದು ಬಿಟ್ಟ ರೊಟ್ಟಿಯ ತುಂಡುಗಳನ್ನು ಕೂಡಿಸಲಾಗಿ ಹನ್ನೆರಡು ಬುಟ್ಟಿಗಳು ತುಂಬಿದವು (ಮತ್ತಾ. 14:20). ಹೌದು ನಮ್ಮ ದೇವರು ಶತ್ರುಗಳ ಮುಂದೆ ಔತಣವನ್ನು ನಮಗಾಗಿ ಏರ್ಪಡಿಸುವ ದೇವರು (ಕೀರ್ತ. 23:5). ದಾವೀದ ರಾಜನ ಅನುಭವವೂ ಇದೇ ಆಗಿದೆ.

ದೇವಜನರೇ, ಮನ್ನವೆಂದು ಹೇಳುವಾಗ, ಅದು ಸತ್ಯವೇದ ವಾಕ್ಯಕ್ಕೂ ಕರ್ತನ ದೇಹಕ್ಕೂ ಗುರುತಾಗಿದೆ. ಪವಿತ್ರ ಭೋಜನ ಸಂಸ್ಕಾರದಲ್ಲಿ ಭಾಗವಹಿಸುವಾಗೆಲ್ಲಾ ಕರ್ತನ ದೇಹವನ್ನು ಸ್ವೀಕರಿಸುವೆವು. ಅದು ಪರಲೋಕದಿಂದ ಇಳಿದುಬಂದ ಮನ್ನ. ಸತ್ಯವೇದ ವಾಕ್ಯವನ್ನು ಓದುವಾಗೆಲ್ಲಾ ಕರ್ತನು ತಾನೇ, ನಿಮ್ಮ ಆತ್ಮ ಪ್ರಾಣ ಶರೀರಗಳನ್ನು ಪೋಷಿಸುತ್ತಾನೆ. ಹೌದು ಪ್ರಿಯರೇ, ಆತನ ವಾಕ್ಯಗಳು, ಆತ್ಮವೂ ಜೀವವೂ ಆಗಿರುವದು.

*ನೆನಪಿಗೆ : ನಾಲ್ವತ್ತು ವರುಷ ಅವರನ್ನು ಅರಣ್ಯದಲ್ಲಿ ಸಾಕುತ್ತಾ ಇದ್ದಿ; ಅವರಿಗೆ ಯಾವ ಕೊರತೆಯೂ ಇರಲಿಲ್ಲ. ಅವರ ಬಟ್ಟೆಗಳು ಜೀರ್ಣವಾಗಲಿಲ್ಲ, ಕಾಲುಗಳು ಬಾತುಹೋಗಲಿಲ್ಲ. (ನೆಹೆ. 9:21).*

ಮೇ 9

## ಅಡವಿಯಲ್ಲಿ ಮಹಿಮೆ!

ಬೆಳಿಗ್ಗೆ : 2 ಅರಸು 7,8,9
ಸಂಜೆ : ಯೋಹಾನ 1:1–34

"ಅವರು ಅರಣ್ಯದ ಕಡೆಗೆ ನೋಡಲಾಗಿ ಮೇಘದಲ್ಲಿ ಯೆಹೋವನ ತೇಜಸ್ಸು ಅವರಿಗೆ ಕಾಣಿಸಿತು" (ವಿಮೋ. 16:10).

ಅರಣ್ಯವೂ, ಮರುಭೂಮಿಯೂ ಆನಂದಿಸುವವು, ಸಮೃದ್ಧಿಯಾಗಿ ಹೂ ಬಿಡುವದು. ಲೆಬನೋನಿನ ಮಹಿಮೆಯೂ, ಕರ್ಮೆಲಿನ ಮತ್ತು ಶಾರೋನಿನ ವೈಭವವು ಅದಕ್ಕೆ ದೊರೆಯುವದು; ಇವೆಲ್ಲಾ ಯೆಹೋವನ ಮಹಿಮೆಯನ್ನು ನಮ್ಮ ದೇವರ ವೈಭವವನ್ನೂ ಕಾಣುವವು ಎಂದು ಪ್ರವಾದಿಯಾದ ಯೆಶಾಯನು ಪ್ರವಾದಿಸುತ್ತಾನೆ (ಯೆಶಾ. 35:2). ಹೌದು. ಅಡವಿಯಲ್ಲೇ ದೇವರ ಮಹಿಮೆಯು ಪ್ರಕಟವಾಗುವದು.

ನಾವು ಆರಾಧಿಸುವ ದೇವರು ಎಂಥವನಾಗಿರುವನು? ದಾವೀದನು ಹೇಳುತ್ತಾನೆ – "ನೀನು ಸರ್ವೋತ್ಕೃಷ್ಟನು; ಪ್ರಭಾವ ಮಹತ್ವಗಳಿಂದ ಭೂಷಿತನಾಗಿದ್ದೀ. ಬೆಳಕನ್ನು ವಸ್ತ್ರದಂತೆ ಹೊದ್ದುಕೊಂಡಿದ್ದೀ. ಆಕಾಶವನ್ನು ಗುಡಾರದಂತೆ ಎತ್ತಿಹರಡಿದ್ದೀ" ಎಂದು ಆದಾಮ ಹವ್ವರನ್ನು ಕರ್ತನು ಸೃಷ್ಟಿಸಿದಾಗ, ತನ್ನ ಮಹಿಮೆಯನ್ನೇ ಅವರಿಗೆ ವಸ್ತ್ರವನ್ನಾಗಿ ಕೊಟ್ಟನು. ದಾವೀದನು ಈ ಕುರಿತು "ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ; ಪ್ರಭಾವವನ್ನೂ, ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟೆ" (ಕೀರ್ತ. 8:5) ಎಂದು ಹೇಳುತ್ತಾನೆ. ಆದರೆ ಸೈತಾನನೋ ನಿಷೇಧಿಸಲ್ಪಟ್ಟ ಹಣ್ಣನ್ನು ತಿನ್ನುವಂತೆ ಪ್ರೇರೇಪಿಸಿ, ದೇವರು ಮನುಷ್ಯನಿಗೆ ಕೊಟ್ಟ ಮಹಿಮೆಯನ್ನು ಕಸಿದುಕೊಂಡು ಹೋದನು. ಆದ್ದರಿಂದ ಅವರು ನಿರ್ವಾಣಿಗಳಾಗಿ ವೃಕ್ಷಗಳೊಳಗೆ ಅವಿತುಕೊಂಡರು. ಏದೇನಿನಲ್ಲಿ ಕಳೆದುಕೊಂಡ ಮಹಿಮೆಯನ್ನು ಅವರಿಂದ ಪುನಃ ಕಾಣಲಾಗಲಿಲ್ಲ. ಅವರಿಗೆ ಆ ಮಹಿಮೆಯನ್ನು ತೋರ್ಪಡಿಸುವದಕ್ಕಾಗಿಯೇ ಕರ್ತನು ಅವರನ್ನು ಐಗುಪ್ತದ ದಾಸತ್ವದಿಂದ ಬಿಡಿಸಿ, ಫರೋಹನ ಭಯಂಕರವಾದ ಹಿಡಿತದಿಂದ ಬಿಡುಗಡೆ ಮಾಡಿ ಕೆಂಪು ಸಮುದ್ರವನ್ನು ದಾಟಿಸಿ ಅರಣ್ಯಕ್ಕೆ ಕರೆತಂದನು. ಇಸ್ರಾಯೇಲ್ಯರು ಅರಣ್ಯದ ಕಡೆಗೆ ನೋಡಿದಾಗ ಮೇಘದಲ್ಲಿ ಯೆಹೋವನ ತೇಜಸ್ಸನ್ನು ಕಂಡರು (ವಿಮೋ. 16:10). ಇಲ್ಲಿ ಮೇಘ ಎಂದು ಹೇಳುವಾಗ ಅದು ಯೇಸುಕ್ರಿಸ್ತನನ್ನು ಸೂಚಿಸುವದು. ನೀತಿಸೂರ್ಯನಾದ ತಂದೆ ದೇವರಿಗೂ ನಮಗೂ ಮಧ್ಯಸ್ತನಾಗಿ ನಿಂತನು. ನಮ್ಮ ಮೇಲೆ ಬರಲಿರುವ ದೈವಕೋಪವನ್ನು ತನ್ನ ಮೇಲೆ ತೆಗೆದುಕೊಂಡು, ಪಾಪನಿವಾರಣ ಯಜ್ಞವಾಗಿ ಕಲ್ವಾರಿಯ ಶಿಲುಬೆಯಲ್ಲಿ ವಧಿಸಲ್ಪಟ್ಟನು.

ದೇವಜನರೇ, ಇಂದು ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವನು. (ಕೊಲೊ. 1:27). ತೇಜೋಮಯವಾದ ಆತ್ಮನಾಗಿರುವಾತನು ನಿಮ್ಮಲ್ಲಿ ನೆಲೆಗೊಂಡಿರುವನು (1 ಪೇತ್ರ. 4:14). ದೇವರ ಸಂಪೂರ್ಣ ಮಹಿಮೆ ನಿಮ್ಮೊಳಗೆ ತಂಗಿರುವದು. ಎಷ್ಟು ದೊಡ್ಡ ಭಾಗ್ಯ.

*ನೆನಪಿಗೆ : ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯ ಉಳ್ಳವರೇ ಆಗುತ್ತೇವೆ. (2 ಕೊರಿಂ. 3:18).*



ಮೇ 10

## ಆರಿಸಿಕೊಂಡನು!

ಬೆಳಿಗ್ಗೆ : 2 ಅರಸು 10,11,12
ಸಂಜೆ : ಯೋಹಾ. 1:35–51

"ನೀವು ನಿಮ್ಮ ದೇವರಾದ ಯೆಹೋವನಿಗೆ ಮೀಸಲಾದ ಜನರಾಗಿದ್ದೀರಲ್ಲವೇ, ಆತನು ಭೂಲೋಕದಲ್ಲಿರುವ ಸಮಸ್ತ ಜನಾಂಗಗಳಲ್ಲಿ ನಿಮ್ಮನ್ನೇ ಸ್ವಕೀಯ ಜನವಾಗುವದಕ್ಕೆ ಆದುಕೊಂಡನು" (ಧರ್ಮೋ. 7:6).

ಕರ್ತನು ಕೆಲವು ಜನರನ್ನು ಆರಿಸಿತೆಗೆದುಕೊಳ್ಳುವನು. ಕೆಲವು ಜನಾಂಗಗಳನ್ನು ಆರಿಸಿಕೊಳ್ಳುವನು. ಕೆಲವು ಪಟ್ಟಣಗಳನ್ನು ಆರಿಸಿಕೊಳ್ಳುವನು. ದೇಶಗಳನ್ನು ಆರಿಸಿಕೊಳ್ಳುವನು. ಆತನು ನಿಮ್ಮನ್ನು ಆರಿಸಿಕೊಂಡಿರುವನು. ನಿಮ್ಮ ಮೂಲಕವಾಗಿ ತನ್ನ ಮಹಿಮೆಯನ್ನು ಪ್ರಕಟಿಸುವನು.

ಅಬ್ರಹಾಮನನ್ನು ತನ್ನ ಸ್ನೇಹಿತನಾಗಿ ಆರಿಸಿಕೊಂಡನು. ಮೋಶೆಯನ್ನು ಇಸ್ರಾಯೇಲ್ ಜನಾಂಗವನ್ನು ಐಗುಪ್ತದಿಂದ ಬಿಡುಗಡೆ ಮಾಡಿ ಕಾನಾನಿಗೆ ಕರೆದುಕೊಂಡು ಹೋಗುವಂತೆ ಆರಿಸಿಕೊಂಡನು (ಕೀರ್ತ. 106:23). ಆರೋನನನ್ನು, ಯಾಜಕನನ್ನಾಗಿ ಆರಿಸಿಕೊಂಡನು (ಕೀರ್ತ.105:26). ದಾವೀದನನ್ನು ದೇವಜನರನ್ನು ಆಳುವಂತೆ ಆರಿಸಿಕೊಂಡನು. (1 ಸಮು.16:13). ಸೌಲನಾಗಿದ್ದ ಪೌಲನನ್ನು ತನ್ನ ಅಪೊಸ್ತಲನಾಗುವಂತೆ ಆರಿಸಿಕೊಂಡನು. "ನನ್ನ ಹೆಸರನ್ನು ತಿಳಿಸುವದಕ್ಕಾಗಿ ನಾನು ಆರಿಸಿಕೊಂಡ ಸಾಧನವಾಗಿದ್ದಾನೆ" (ಅ.ಕೃ. 9:15) ಎಂದು ಕರ್ತನು ಹೇಳಿದನು. ಕರ್ತನು ಯಾವಾಗ ನಮ್ಮನ್ನು ಆರಿಸಿಕೊಂಡನು? ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮೊದಲೇ ಕ್ರಿಸ್ತನಲ್ಲಿ ಆರಿಸಿಕೊಂಡನು (ಎಫೆ. 1:4) ಎಂದು ಸತ್ಯವೇದ ಹೇಳುತ್ತದೆ. ಕೆಲವರನ್ನು ಯೆರೆಮೀಯನಂತೆ ತಾಯಿಯ ಗರ್ಭದಲ್ಲಿಯೇ ಆರಿಸಿಕೊಳ್ಳುವನು (ಯೆರೆ. 1:5). ಆತನು ನಮ್ಮನ್ನು ಹೇಗೆ ಆರಿಸಿಕೊಂಡನು? ಆತನು ತನ್ನ ಪ್ರೀತಿಯಿಂದ ಆರಿಸಿಕೊಂಡನು (ಧರ್ಮೋ.7:8). ಕರ್ತನು ನಿಮ್ಮ ಯೋಗ್ಯತೆಯನ್ನು ನೋಡಿಯೋ ನಿಮ್ಮ ಗುಣವನ್ನು ನೋಡಿಯೋ, ಆರಿಸಿಕೊಳ್ಳಲಿಲ್ಲ. ತನ್ನ ಅನಾದಿ ಸ್ನೇಹದಿಂದ ಆರಿಸಿಕೊಂಡಿರುವನು.

ದೇವಜನರೇ, ನಿಮ್ಮ ಪುಣ್ಯ ಕ್ರಿಯೆಗಳಿಂದಲ್ಲ, ತನ್ನ ಕೃಪೆಯಿಂದಲೇ ನಿಮ್ಮನ್ನು ತನಗೆಂದು ಆರಿಸಿಕೊಂಡಿರುವನು (ರೋಮಾ. 11:5,6). ಆ ಕೃಪೆಯನ್ನು ಎಂದಿಗೂ ತಾತ್ಸಾರ ಮಾಡಬೇಡಿರಿ.

*ನೆನಪಿಗೆ : ಪವಿತ್ರಾತ್ಮನಿಂದ ಪ್ರತಿಷ್ಠಿಸಲ್ಪಟ್ಟವರಾಗಿ ದೇವರಿಗೆ ವಿಧೇಯರಾಗುವದಕ್ಕೂ.... ತಂದೆಯಾದ ದೇವರ ಭವಿಷ್ಯದ್ ಜ್ಞಾನಾನುಸಾರವಾಗಿ ಆಯ್ದುಕೊಳ್ಳಲ್ಪಟ್ಟವರಿಗೆ ಬರೆಯುವದೇನೆಂದರೆ ನಿಮಗೆ ದೇವರ ಕೃಪೆಯೂ, ಶಾಂತಿಯೂ ಹೆಚ್ಚಾಗಿ ದೊರೆಯಲಿ (1 ಪೇತ್ರ. 1:2).*

## ಆಶ್ಚರ್ಯವಾದ ಕರೆ

ಬೆಳಿಗ್ಗೆ : 2 ಅರಸು 13,14
ಸಂಜೆ : ಯೋಹಾ. 2

"ಸಹೋದರರೇ ದೇವರು ನಿಮ್ಮನ್ನು ಕರೆದಾಗ ಎಂಥವರನ್ನು ಕರೆದನೆಂದು ಆಲೋಚಿಸಿರಿ... ದೇವರು ಬುದ್ಧಿಹೀನರನ್ನು ಆರಿಸಿಕೊಂಡಿದ್ದಾನೆ." (1 ಕೊರಿಂ. 1:26,27).

ದೇವರು ಮೋಶೆಯನ್ನು ಆರಿಸಿಕೊಂಡಾಗ, ತನ್ನಲ್ಲಿದ್ದ ಬಲಹೀನತೆಯನ್ನು ವಿವರಿಸಿ, "ಸ್ವಾಮಿ ನಾನು ವಾಕ್ಚಾತುರ್ಯವಿಲ್ಲದವನು. ನನ್ನ ಮಾತೂ ನಾಲಿಗೆಯೂ ಮಂದವಾಗಿದೆ" (ವಿಮೋ. 4:10) ಅಂದನು. ಆದರೆ, ಕರ್ತನು ಮೋಶೆಯ ಮೂಲಕ ಫರೋಹನನ ದಾಸತ್ವದಿಂದಲೂ, ಐಗುಪ್ತದ ಸೆರೆಯಿಂದಲೂ ಇಸ್ರಾಯೇಲ್ಯರನ್ನು ಬಿಡುಗಡೆಗೊಳಿಸಿದನು. ಯೆರೆಮೀಯನನ್ನು ದೇವರು ಕರೆದಾಗ, ಅವನು "ಅಯ್ಯೋ, ದೇವರೇ ನಾನು ಮಾತು ಬಲ್ಲವನಲ್ಲ ಬಾಲಕನು" (ಯೆರೆ. 1:6) ಎಂದು ಹೇಳಿದನು. ಆದರೂ, ಕರ್ತನು ತನ್ನ ಮಾತುಗಳನ್ನು ಯೆರೆಮೀಯನ ಬಾಯಲ್ಲಿ ಇಟ್ಟು ಪ್ರವಾದಿಯನ್ನಾಗಿ ಬಲವಾಗಿ ಉಪಯೋಗಿಸಿದನು.

ಕರ್ತನು ಪೇತ್ರನನ್ನು ಕರೆದಾಗ ಅವನು ಮೀನು ಹಿಡಿಯುತ್ತಿದ್ದನು. ಅವನು ಸ್ವಾಮಿ ನಾನು ಪಾಪಾತ್ಮನು. ನನ್ನನ್ನು ಬಿಟ್ಟುಹೋಗಬೇಕು ಅಂದನು (ಲೂಕ. 5:8). ಆದರೆ ಕರ್ತನು ಪೇತ್ರನನ್ನು ತನ್ನ ಶಿಷ್ಯನನ್ನಾಗಿಸಿ, ಆತ್ಮೀಕ ಬಲವನ್ನು ನೀಡಿ ಬಹು ದೊಡ್ಡ ಅಪೊಸ್ತಲನನ್ನಾಗಿ ಮಾಡಿದನು. ಜಾನ್‌ವೆಸ್ಲಿ ಎಂಬ ಬೋಧಕರು ಕುಳ್ಳನಾಗಿ ಇತರರು ಪರಿಹಾಸ್ಯ ಮಾಡುವ ಸ್ಥಿತಿಯಲ್ಲಿದ್ದರು. ಆದರೆ ಕರ್ತನೋ ಆತನನ್ನು ಅಗ್ನಿಜ್ವಾಲೆಯನ್ನಾಗಿಸಿ ಯೂರೋಪ್ ಖಂಡದಲ್ಲೆಲ್ಲಾ ಮಹಿಮೆಯಾಗಿ ಉಪಯೋಗಿಸಿದನು. ಪ್ರಪಂಚವನ್ನೇ ಅಲುಗಿಸಿದ ಭಕ್ತನಾದ ಡಿ.ಎಲ್. ಮೂಡಿ ಎಂಬ ಭಕ್ತನು ವಿದ್ಯೆ ಇಲ್ಲದವನು. ಆತನು ಮಾತನಾಡುವ ಆಂಗ್ಲಭಾಷೆಯನ್ನು ಕೇಳಿದ ಅನೇಕರು ಗೇಲಿ ಮಾಡಿದ್ದುಂಟು. ಆದರೆ ಆತನ ಸೇವೆಯ ಮೂಲಕ ಆಶೀರ್ವದಿಸಲ್ಪಟ್ಟ ಜನರು ಲಕ್ಷಗಟ್ಟಲೆ. ಇಂದಿಗೂ ಚರಿತ್ರೆಯಲ್ಲಿ ಆತನ ಹೆಸರು ರಾರಾಜಿಸುತ್ತಿರುವದು. ಕೊರಿಯ ದೇಶವನ್ನು ಅಲ್ಲಾಡಿಸಿದ ಭಕ್ತನಾದ ಪಾಲ್ ಯಾಂಗಿ ಚೋ ಒಂದು ಕಾಲದಲ್ಲಿ ಬಡತನದ ದೆಸೆಯಿಂದ ಕ್ಷಯರೋಗ ಪೀಡಿತರಾಗಿದ್ದು ಮರಣಕ್ಕೆ ಸ್ವಲ್ಪವೇ ಅಂತರದಲ್ಲಿದ್ದರು. ಆದರೆ ಇಂದು ಪ್ರಸಿದ್ಧವಾದ ದೇವ ಸೇವಕರಲ್ಲಿ ಒಬ್ಬರಾಗಿ ಕರ್ತನು ಅವರನ್ನು ಉಪಯೋಗಿಸುತ್ತಿರುವನು.

ದೇವಮಕ್ಕಳೇ, ನಿಮಗೂ ಶರೀರದಲ್ಲಿ ಬಲಹೀನತೆ ಇರಬಹುದು. ಸರಿಯಾದ ವಿದ್ಯೆ ಇಲ್ಲದಿರಬಹುದು. ಆತ್ಮೀಕ ಜೀವಿತದಲ್ಲಿ ಮೇಲೆ ಏರಲು ತಡೆಗಳಿರಬಹುದು. ಆದರೂ, ಬೇಸರಗೊಳ್ಳದಿರಿ. ಸೋತುಹೋಗಬೇಡಿ. ಜ್ಞಾನಿಗಳನ್ನು ನಾಚಿಕೆ ಪಡಿಸುವದಕ್ಕಾಗಿಯೇ ನಿಮ್ಮನ್ನು ಕರ್ತನು ಆರಿಸಿಕೊಂಡಿರುವನು. ಬಾಲವಾಗಿ ಅಲ್ಲ, ತಲೆಯಾಗಿ ನಿಲ್ಲಿಸುವನು. ದೃಢಗೊಳ್ಳಿರಿ. ಕರ್ತನು ನಿಮ್ಮನ್ನು ಉಪಯೋಗಿಸುವನು.

*ನೆನಪಿಗೆ : ಯಾರನ್ನು ಮೊದಲು ನೇಮಿಸಿದನೋ ಅವರನ್ನು ಕರೆದನು. ಯಾರನ್ನು ಕರೆದನೋ ಅವರನ್ನು ನೀತಿವಂತರೆಂದು ನಿರ್ಣಯಿಸಿದನು. ಯಾರನ್ನು ನೀತಿವಂತರೆಂದು ನಿರ್ಣಯಿಸಿದನೋ ಅವರನ್ನು ಮಹಿಮೆ ಪದವಿಗೆ ಸೇರಿಸಿದನು (ರೋಮಾ. 8:30).*





## ಬಲಹೀನರಾ?

ಬೆಳಿಗ್ಗೆ : 2 ಅರಸು 15,16
ಸಂಜೆ : ಯೋಹಾ. 3:1-21

"ದೇವರು ಜ್ಞಾನಿಗಳನ್ನು ನಾಚಿಕೆ ಪಡಿಸುವದಕ್ಕಾಗಿ ಈ ಲೋಕದ ಬುದ್ಧಿಹೀನರನ್ನು ಆರಿಸಿಕೊಂಡಿದ್ದಾನೆ" (1 ಕೊರಿಂ. 1:27).

ಈ ಪ್ರಪಂಚವು ದೊಡ್ಡ ಕಾರ್ಯಗಳನ್ನು ಸಾಧಿಸಲು ಬಲಶಾಲಿಗಳನ್ನು ಹುಡುಕುವದು. ಆದರೆ ಕರ್ತನಾದರೋ ಬಲಹೀನರನ್ನು ಹುಡುಕುವನು. ಅಪೊ. ಪೌಲನು ಬಲಹೀನನೂ ಅಲ್ಪನೂ ಆಗಿದ್ದೇನೆ ಅಂದನು. ಅವನು ತನ್ನನ್ನು ಕುರಿತು ಪುನಃ ಪುನಃ ನಾನು ಬಲಹೀನನಾಗಿದ್ದೆನು" ಎಂದು ಬರೆಯುತ್ತಾನೆ. (2 ಕೊರಿಂ. 12:5, 13:3).

ಅಪೊ ಪೌಲನಿಗೆ ಅವನ ಶರೀರದಲ್ಲಿ ಒಂದು ಬಲಹೀನತೆ ಇತ್ತು. ಅದು ಆತನನ್ನು ಚುಚ್ಚುವ ಸೈತಾನನ ಮುಳ್ಳಾಗಿ ಇತ್ತು. ಕೆಲವರು ಹೇಳುತ್ತಾರೆ ಅವನು ಕಣ್ಣಿನ ತೊಂದರೆಯಿಂದ ಬಾಧೆ ಪಡುತ್ತಿದ್ದನೆಂದು. ಇನ್ನು ಕೆಲವರು ಅವನ ಕಣ್ಣುಗಳಿಂದ ಸದಾ ನೀರು ಸೋರುತ್ತಾ ಇತ್ತು, ಸೊಳ್ಳೆಗಳು ಮುತ್ತುತ್ತಿದ್ದವು ಎಂದೂ ಹೇಳುವರು. ಆದರೆ ಕರ್ತನೋ ಅವನ ಬಲಹೀನತೆಯಲ್ಲಿ ತನ್ನ ಬಲವನ್ನು ಪೂರ್ಣವಾಗಿ ಪ್ರಕಟಿಸಿದನು (2 ಕೊರಿಂ. 12:9). ಇಂದಿಗೂ ಆತನು ಬರೆದಿರುವ 14 ಪತ್ರಿಕೆಗಳು ಕೋಟಿಗಟ್ಟಲೆ ಜನರಿಗೆ ಪ್ರಯೋಜನಕರವಾಗಿದೆ. ದೇವರು ಸೋತವನಿಗೆ ತ್ರಾಣವನ್ನು ಅನುಗ್ರಹಿಸಿ ನಿರ್ಬಲನಿಗೆ ಬಹು ಬಲವನ್ನು ದಯಪಾಲಿಸುತ್ತಾನೆ (ಯೆಶಾ. 40:29). ಮಾತ್ರವಲ್ಲ ಪವಿತ್ರಾತ್ಮನು ಉನ್ನತ ಬಲವನ್ನು ದಯಪಾಲಿಸುವನು. ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಇಲ್ಲೇ ಕಾದುಕೊಂಡಿರ್ರಿ ಎಂದು ಕರ್ತನ ವಾಗ್ದಾನವಾಗಿದೆ (ಲೂಕ. 24:49). ಇಂದು ಆ ಬಲವನ್ನು ಹೊಂದಲು ಕರ್ತನ ಸಾನಿಧ್ಯದಲ್ಲಿ ಕಾದಿರ್ರಿ. ನಿಶ್ಚಯವಾಗಿ ನೀಡುವನು. ಸ್ಮಿತ್‌ವಿಗಲ್ಸ್ ವರ್ತ್‌ರವರು 19ನೇ ಶತಮಾನದಲ್ಲಿದ್ದ ಭಕ್ತರು ತಮ್ಮ ಸೇವೆಯ ಅವಧಿಯಲ್ಲಿ 23 ಜನರನ್ನು ಮರಣದಿಂದ ಎಬ್ಬಿಸಿದವರು. ಅವರ ಶರೀರದಲ್ಲಿ ಒಂದು ಬಲಹೀನತೆ ಇತ್ತು. ಅವರ ಮೂತ್ರಪಿಂಡದಲ್ಲಿ ಬಹಳ ಕಲ್ಲುಗಳಿದ್ದವು. ಅವರು ಪ್ರಾರ್ಥಿಸಿದಾಗ 63 ಕಲ್ಲುಗಳು ಹೊರಗೆ ಬಿದ್ದವು ಎಂದು ಅವರ ಚರಿತ್ರೆಯಲ್ಲಿ ಓದುತ್ತೇವೆ.

ದೇವಮಕ್ಕಳೇ, ನಿಮ್ಮಲ್ಲಿ ಬಲಹೀನತೆಗಳಿರುವಾಗ ಭಯಪಡಬೇಡಿ ಕರ್ತನ ಬಳಿ ಪ್ರಾರ್ಥಿಸಿ. ಆತನು ನಿಮಗೆ ಬಲ ನೀಡುವನು. ಆತನು ನಮ್ಮ ಬಲಹೀನತೆಗಳನ್ನೆಲ್ಲಾ ಹೊತ್ತನಲ್ಲವೇ? ನೀವು ಯಾಕೆ ಇನ್ನೂ ಹೊರುತ್ತಿದ್ದೀರಿ. ನಿಮ್ಮ ಬಲಹೀನತೆಗಳನ್ನು ಆತನಿಗೆ ಒಪ್ಪಿಸಿರಿ.

*ನೆನಪಿಗೆ : ಪರಾಕ್ರಮದಿಂದಲ್ಲ, ಬಲದಿಂದಲ್ಲ ನನ್ನ ಆತ್ಮದಿಂದಲೇ ಎಂಬುದು ಸೇನಾಧೀಶ್ವರನಾದ ಯೆಹೋವನ ನುಡಿ (ಜೆಕ. 4:6)*

ಮೇ 13

## ಅಲ್ಪವಾಗಿ ಎಣಿಸಿರುವರೋ!

ಬೆಳಿಗ್ಗೆ : 2 ಅರಸು 17, 18
ಸಂಜೆ : ಯೋಹಾ.3:22–36

"ದೇವರು ಈ ಲೋಕದ ಕುಲಹೀನರನ್ನೂ ಅಸಡ್ಡೆಯಾದವರನ್ನೂ ಆರಿಸಿಕೊಂಡದ್ದಲ್ಲದೆ, ಗಣ್ಯರನ್ನು ಇಲ್ಲದಂತೆ ಮಾಡುವದಕ್ಕಾಗಿ ಗಣನೆಗೆ ಬಾರದವರನ್ನು ಆರಿಸಿಕೊಂಡಿದ್ದಾನೆ." (1 ಕೊರಿಂ. 1:28).

ದೇವರು ಜ್ಞಾನಿಗಳ ಶತ್ರುವೆಂದೋ, ಬಲಶಾಲಿಗಳ ಶತ್ರುವೆಂದೋ, ಐಶ್ವರ್ಯವಂತರಿಗೆ ಶತ್ರುವೆಂದೋ ನೀವು ಭಾವಿಸಬಾರದು. ಬುದ್ಧಿ ಇಲ್ಲದವರು ತಮ್ಮ ಶಾರೀರಿಕ ಬಲವನ್ನು ಜಜ್ಜಿ ಕರ್ತನ ಜ್ಞಾನದ ಮೇಲೆ ಕರ್ತನ ಬಲದ ಮೇಲೆ ಆತುಕೊಳ್ಳುವರು. ಆದ್ದರಿಂದಲೇ ಅವರನ್ನು ಕರ್ತನು ಉಪಯೋಗಿಸುವನು. ಆದರೆ ಅಧಿಕವಾದ ಬುದ್ಧಿ, ವಿದ್ಯೆ ಇರುವವರೋ ತಮ್ಮ ಸಾಮರ್ಥ್ಯದ ಮೇಲೆ ಭರವಸೆ ಇಟ್ಟು ಹೆಚ್ಚಳಪಡುವರು.

ಲಾಬಾನನಿಗೆ ಇಬ್ಬರು ಹೆಣ್ಣು ಮಕ್ಕಳಿದ್ದರು. ಒಬ್ಬಳು ಲೇಯಳು, ಇನ್ನೊಬ್ಬಳು ರಾಹೇಲಳು. ರಾಹೇಲಳು ಸೌಂದರ್ಯವತಿ, ಲೇಯಳಾದರೋ ನೋಡಲು ಚೆನ್ನಾಗಿರಲಿಲ್ಲ. ಆಕೆಯ ಕಣ್ಣುಗಳು ಕಾಂತಿಹೀನವಾಗಿದ್ದವು. ಆದರೆ ಕರ್ತನು ಯಾರ ಪಕ್ಷ ನಿಂತನು! ಅಲ್ಪವಾಗಿ ಎಣಿಸಲ್ಪಟ್ಟ ಲೇಯಳ ಪಕ್ಷದಲ್ಲಿಯೇ ನಿಂತನು. ಅವಳಿಗೆ ಆರು ಮಕ್ಕಳ ಭಾಗ್ಯವನ್ನು ಕರುಣಿಸಿದನು. ರಾಹೇಲಳ ಗರ್ಭವನ್ನೋ, ಕರ್ತನು ದೀರ್ಘಕಾಲ ಮುಚ್ಚಿಹಾಕಿದ್ದನು. ನಮ್ಮ ಕರ್ತನಾದ ಯೇಸುಕ್ರಿಸ್ತನು ಲೇಯಳ ವಂಶದಲ್ಲಿ ಯೆಹೂದ ಗೋತ್ರದಲ್ಲಿ ಜನಿಸಿದನು. ದಾವೀದನೂ ಅವನ ತಂದೆಯ ಮನೆಯಲ್ಲಿ ಅಲ್ಪವಾಗಿ ಎಣಿಸಲ್ಪಟ್ಟನು. ಸಮುವೇಲನು ಇಷಯನ ಕುಮಾರರಲ್ಲಿ ಒಬ್ಬನನ್ನು ಅಭಿಷೇಕಿಸಲು ಬಂದಾಗ, ಇಷಯನು ಮೊದಲು ದಾವೀದನ ಹೊರತು ಉಳಿದ ಎಲ್ಲಾ ಕುಮಾರರನ್ನು ಬರಮಾಡಿದನು. ಆದರೆ, ಕರ್ತನೋ ತನ್ನ ಸ್ವಾಸ್ತ್ಯವಾದ ಇಸ್ರಾಯೇಲನ್ನು ಬಿಡುಗಡೆ ಮಾಡುವದಕ್ಕಾಗಿ ದಾವೀದನ ವಂಶವನ್ನು ಆರಿಸಿಕೊಂಡನು. ಯೇಸುಕ್ರಿಸ್ತನನ್ನು ಅಂದು ಯೆಹೂದ್ಯರು ಅಲ್ಪವಾಗಿ ಎಣಿಸಿದರು. ಬಡಗಿಯ ಮಗನು, ಸುಂಕದವರ ಸ್ನೇಹಿತನು, ದೆವ್ವಗಳ ಮೂಲಕ ಅದ್ಭುತಗಳನ್ನು ಮಾಡುವವನು ಎಂದೆಲ್ಲಾ ಪರಿಹಾಸ್ಯ ಮಾಡಿದರು. ಶಿಲುಬೆಯ ಮೇಲೆ ತೂಗುತ್ತಿರುವಾಗಲೂ ಪರಿಹಾಸ್ಯ ಮಾಡುವದನ್ನು ಬಿಡಲಿಲ್ಲ. ಆದರೆ, ದೇವರಾದರೋ ಆತನ ನಾಮವನ್ನು ಎಲ್ಲಾ ನಾಮಗಳಿಗಿಂತ ಮೇಲಾದ ನಾಮವೆಂದು ಪರಿಗಣಿಸಿ ಅತ್ಯುನ್ನತ ಸ್ಥಾನಕ್ಕೆ ಏರಿಸಿ ತನ್ನ ಬಲಗಡೆ ಕುಳಿತುಕೊಳ್ಳುವ ಸ್ಥಾನವನ್ನು ನೀಡಿದನು.

ದೇವಮಕ್ಕಳೇ, ಇಂದು ನೀವು ಬಲಹೀನತೆಯಿಂದ ವ್ಯಾಧಿಗೆ ಒಳಗಾದ ಸ್ಥಿತಿಯಲ್ಲಿ ಇರಬಹುದು. ಕರ್ತನು ನಿಮ್ಮನ್ನು ಆರಿಸಿಕೊಂಡಿರುವನು ಎಂಬ ವಿಶ್ವಾಸ ಅರಿಕೆ ಮಾಡಿರಿ. ನಿಶ್ಚಯವಾಗಿ ನಿಮ್ಮ ಬಲಹೀನತೆಯಲ್ಲಿ ಆತನ ಬಲ ಪೂರ್ಣವಾಗಿ ಪ್ರಕಟವಾಗುವದು.

*ನೆನಪಿಗೆ : ಆದುದರಿಂದ ಕ್ರಿಸ್ತನ ನಿಮಿತ್ತ ನನಗೆ ನಿರ್ಬಲಾವಸ್ಥೆಯೂ ತಿರಸ್ಕಾರವೂ, ಕೊರತೆಯೂ, ಹಿಂಸೆಯೂ, ಇಕ್ಕಟ್ಟೂ ಸಂಭವಿಸಿದಾಗ ಸಂತುಷ್ಟನಾಗಿದ್ದೇನೆ. ನಾನು ನಿರ್ಬಲವಾಗಿರುವಾಗಲೇ ಬಲವುಳ್ಳವನಾಗಿದ್ದೇನೆ (2 ಕೊರಿಂ. 12:10).*



ಮೇ 14

## ತಪ್ಪಿಸುವನು!

ಬೆಳಿಗ್ಗೆ : 2 ಅರಸು 19,20,21
ಸಂಜೆ : ಯೋಹಾ. 4:1–30

"ನಿನ್ನನ್ನು ಬೇಟೆಗಾರನ ಬಲೆಯಿಂದಲೂ, ಮರಣಕರ ವ್ಯಾಧಿಯಿಂದಲೂ ತಪ್ಪಿಸುವವನು ಆತನೇ. ಆತನು ನಿನ್ನನ್ನು ತನ್ನ ರೆಕ್ಕೆಗಳಿಂದ ಹೊದಗಿಸುವನು" (ಕೀರ್ತ. 91:3,4).

ಕರ್ತನು ನಿಮ್ಮನ್ನು ಎಷ್ಟರಮಟ್ಟಿಗೆ ಪ್ರೀತಿಸುತ್ತಾನೆ. ಎಂಬುದನ್ನು ಮೇಲಿನ ವಾಗ್ದಾನ ವಚನದ ಮೂಲಕ ವ್ಯಕ್ತವಾಗುತ್ತದೆ. ನಿಮ್ಮ ಶತ್ರುಗಳು ತಂತ್ರಗಳನ್ನು ರೂಪಿಸುವಾಗ ನೀವು ಅವುಗಳಿಗೆ ಸಿಕ್ಕಿಬೀಳದಂತೆ ಕರ್ತನು ನಿಮ್ಮನ್ನು ಪಾರುಮಾಡುವನು. ಮಾತ್ರವಲ್ಲ, ಆತನು ತನ್ನ ರೆಕ್ಕೆಗಳಿಂದ ಹೊದಗಿಸಿ ಆದರಣೆ ನೀಡುವನು.

ನಿಮ್ಮ ವಿರೋಧಿಯಾದ ಸೈತಾನನು, ನಿಮ್ಮ ಆತ್ಮ ಪ್ರಾಣ, ಶರೀರಗಳನ್ನು ತಾಕಲು ಹಲವು ರೀತಿಯ ತಂತ್ರಗಳನ್ನು ರೂಪಿಸುವನು. ದಾವೀದ ರಾಜನು ತನಗೆ ವಿರೋಧವಾಗಿ ರೂಪಿಸಿದ ಹಲವು ತಂತ್ರಗಳ ಕುರಿತು ಕೀರ್ತನೆ ಪುಸ್ತಕದಲ್ಲಿ ಬರೆಯುತ್ತಾನೆ. ಮರಣದ ಪಾಶಗಳು, ಆತ್ಮವನ್ನು ನಾಶಗೊಳಿಸುವ ತಂತ್ರಗಳು, ಬಲೆಗಳು ಉಂಟು. ದಾವೀದನಿಗೆ ವಿರೋಧವಾಗಿ ಅರಸನಾದ ಸೌಲನು ಹಲವು ರೀತಿಯ ತಂತ್ರಗಳನ್ನು ರೂಪಿಸಿದನು. ತನ್ನ ಮಗಳಾದ ಮೀಕಲಳು ದಾವೀದನನ್ನು ಪ್ರೀತಿಸುವಳೆಂದು ಅರಿತು ಆ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು ತನ್ನ ಶತ್ರುಗಳಾದ ನೂರು ಮಂದಿ ಫಿಲಿಷ್ಟಿಯ ಸೈನಿಕರನ್ನು ಕೊಂದು ಅವರ ಮುಂದೊಗಲನ್ನು ತಂದು ಕೊಡುವದಾದರೆ ತನ್ನ ಮಗಳನ್ನು ಮದುವೆ ಮಾಡಿಕೊಡುವದಾಗಿ ಸೌಲನು ದಾವೀದನಿಗೆ ಹೇಳಿಕಳುಹಿಸಿ ಬಲಿಷ್ಟರಾದ ಫಿಲಿಷ್ಟಿಯರ ಮೇಲೆ ಯುದ್ಧಕ್ಕೆ ಹೋಗುವಂತೆ ಪ್ರೇರೇಪಿಸಿದನು. ಆದರೆ ದಾವೀದನ ಹಿಂದೆ ಕರ್ತನಿದ್ದನೆಂಬ ಸತ್ಯ ಸೌಲನು ಅರಿಯದಾದನು. ಈ ತಂತ್ರವನ್ನು ರೂಪಿಸಲು ಕಾರಣವೇನು? ದಾವೀದನ ಕಾರ್ಯದ ಕುರಿತು ಸೌಲನಿಗಿದ್ದ ಮತ್ಸರವೇ ಆಗಿತ್ತು. ಇದರಿಂದಾಗಿ ಸೌಲನು ದಾವೀದನು ಹೋದಲ್ಲೆಲ್ಲಾ ಬೆನ್ನಟ್ಟಿ ಬೇಟೆ ನಾಯಿಯಂತೆ ಬೇಟೆಯಾಡಿದನು. ಆದರೆ ದಾವೀದನು ನಂಬಿದ್ದ ಕರ್ತನೋ ಎಲ್ಲಾ ವಿಪತ್ತುಗಳಿಂದ ಅವನನ್ನು ತಪ್ಪಿಸಿ ರಕ್ಷಿಸಿದನು.

ದೇವಜನರೇ, ನಿಮಗೆ ವಿರೋಧವಾಗಿ ರೂಪಿಸುವ ಎಲ್ಲಾ ತಂತ್ರಗಳಿಂದ ನಿಮ್ಮನ್ನು ಬಿಡಿಸಲು ಕರ್ತನು ಶಕ್ತನಾಗಿರುವನು. ಆತನು ನಿಮ್ಮ ಪಕ್ಷದಲ್ಲಿ ನಿಲ್ಲುವನು. ತನ್ನ ಅಮೂಲ್ಯವಾದ ರಕ್ತವನ್ನು ಸುರಿಸಿ, ಸಕಲ ತಂತ್ರಗಳಿಗೂ ಬಲೆಗಳಿಗೂ ತಪ್ಪಿಸಿ ನಿಮ್ಮನ್ನು ರಕ್ಷಿಸುವನು. ನೀವು ಮಾಡಬೇಕಾದದ್ದು ಸದಾ ಆತನಲ್ಲೇ ನಂಬಿಕೆ ಇಟ್ಟು, ಆತನನ್ನೇ ಆಶ್ರಯಿಸಬೇಕು ಅಷ್ಟೇ.

*ನೆನಪಿಗೆ : ನಮ್ಮ ಜೀವವು ಬೇಟೆಗಾರನ ಬಲೆಯಿಂದ ತಪ್ಪಿಸಿಕೊಂಡ ಪಕ್ಷಿಯಂತಿದೆ. ಬಲೆಯು ಹರಿದು ಹೋಯಿತು. ನಾವು ತಪ್ಪಿಸಿಕೊಂಡೆವು (ಕೀರ್ತ. 124:7).*

ಮೇ 15

## ಇಚ್ಛೆ ಎಂಬ ಪಾಶ!

ಬೆಳಿಗ್ಗೆ : 2 ಅರಸು 22,23
ಸಂಜೆ : ಯೋಹಾ. 4:31–54

“ಅವನು ತನ್ನ ಪ್ರಾಣಾಪಾಯವನ್ನು ತಿಳಿಯದೆ ಬಾಣವು ತನ್ನ ಕಾಳಿಜವನ್ನು ತಿವಿಯುವ ಕಡೆಗೆ ತಟ್ಟನೆ ಅವಳ ಹಿಂದೆ ಹೋಗುತ್ತಾನೆ” (ಜ್ಞಾನೋ. 7:23).

ಜ್ಞಾನೋ. 5,6 ಮತ್ತು 7ನೇ ಅಧ್ಯಾಯಗಳು, ಪರಸ್ತ್ರೀ ಜಾರಸ್ತ್ರೀಯಿಂದ ಉದ್ಭವಿಸುವ ತೊಡಕುಗಳ ಕುರಿತು ಉಪದೇಶಿಸುತ್ತದೆ. 7ನೇ ಅಧ್ಯಾಯ ಪೂರ್ತಿಯಾಗಿ ಈ ಕುರಿತಾಗಿಯೇ ಬರೆಯಲ್ಪಟ್ಟಿದೆ. ಅಲ್ಪ ಬುದ್ಧಿಯುಳ್ಳ ಅನೇಕ ಯುವಕರಲ್ಲಿ ಜ್ಞಾನಹೀನನಾದ ಒಬ್ಬನನ್ನು ಗಮನಿಸಿದೆನು. ಅವನು ಸಂಜೆಯ ಮೊಬ್ಬಿನಲ್ಲಿ ವ್ಯಭಿಚಾರದ ಚಿಂತನೆಯಲ್ಲಿ ಹೋಗುತ್ತಿದ್ದನು. ಅಲ್ಲಿ ಒಬ್ಬ ವೇಶ್ಯೆ ಒಂದು ಜೇಡವು ತನ್ನ ಸುತ್ತಲೂ ಬಲೆಯನ್ನು ನೆಯ್ದು ಬಲೆಯ ಮಧ್ಯದಲ್ಲಿ ಕುಳಿತು ಒಂದು ಹುಳು ಅದರೊಳಗೆ ಬಂದ ಕೂಡಲೆ ಹಿಡಿದು ನುಂಗುವಂತೆ ತನ್ನನ್ನು ಶೃಂಗರಿಸಿಕೊಂಡು ಕುಳಿತಿದ್ದಳು ಎಂದು ಜ್ಞಾನೋ. 7:27 ಹೇಳುತ್ತದೆ. ಅವಳ ಹಿಂದೆ ಹೋಗುವವನು ಪಾತಾಳದ ಮೃತ್ಯುವಿನ ಅಂತಃಪುರಕ್ಕೆ ಇಳಿದು ಹೋಗುವನು ಎಂದು.

ಆದ್ದರಿಂದಲೇ ಸತ್ಯವೇದ ಈ ರೀತಿಯಾಗಿ ಎಚ್ಚರಿಸುತ್ತದೆ– “ನಿನ್ನ ಹೃದಯವು ಅವಳ ಬೆಡಗನ್ನು ಮೋಹಿಸದಿರಲಿ; ಅವಳು ತನ್ನ ಕಣ್ಣು ರೆಪ್ಪೆಗಳಿಂದ ನಿನ್ನನ್ನು ವಶಪಡಿಸಿಕೊಂಡಾಳು. ನೋಡಿಕೋ (ಜ್ಞಾನೋ. 6:25). ನನ್ನ ಉಪದೇಶವನ್ನು ಕಣ್ಣುಗುಡ್ಡಿನಂತೆ ಪಾಲಿಸು ನನ್ನ ಆಜ್ಞೆಗಳನ್ನು ಕೈಕೊಂಡು ಬಾಳು” (ಜ್ಞಾನೋ. 7:2). “ನಿನ್ನ ಹೃದಯವು ಅವಳ ನಡತೆಯ ಕಡೆಗೆ ತಿರುಗದಿರಲಿ. ತಪ್ಪಿಹೋಗಿ ಅವಳ ಮಾರ್ಗದಲ್ಲಿ ನಡೆಯಬೇಡ. ಅವಳಿಂದ ಗಾಯಪಟ್ಟು ಬಿದ್ದವರು ಬಹುಮಂದಿ” (ಜ್ಞಾನೋ. 7:25,26) ಎಂದು ಅನೇಕರು ತಮ್ಮ ಕಣ್ಣುಗಳಿಗೆ ಕಾವಲಿಡದೆ ಟಿ.ವಿ. ಮುಂದೆ ಕುಳಿತು ಅಭಾಸವಾದ ಚಿತ್ರಗಳನ್ನು, ಸೀರಿಯಲ್‌ಗಳನ್ನು ನೋಡುತ್ತಿರುವರು. ಸೈತಾನನು ಅವರನ್ನು ಕಣ್ಣಿನ ಇಚ್ಛೆಗಳಿಗೆ ದಾಸರನ್ನಾಗಿಸುವನು. ಅನೇಕರು ಇಂಟರ್‌ನೆಟ್‌ಗಳಲ್ಲಿ ಅಭಾಸವಾದ ಚಿತ್ರಗಳನ್ನು ವೀಕ್ಷಿಸಿ ಇಚ್ಛೆಗಳಿಗೆ ದಾಸರಾಗಿರುವರು. ಇಂಥಹ ಇಚ್ಛೆಗಳಲ್ಲಿ ಬಿದ್ದು ಪರಿಶುದ್ಧತೆಯನ್ನು ಕಳೆದುಕೊಂಡು ಪ್ರಾರ್ಥಿಸಲಾಗದೆ, ಮನಸ್ಸಾಕ್ಷಿಯಲ್ಲಿ ಬೆಂದು ಸುಳ್ಳುಗಾರರಾಗಿ ತಡವರಿಸುತ್ತಿರುವರು. ಯೇಸುಕ್ರಿಸ್ತನು ಹೇಳುತ್ತಾನೆ. ಒಬ್ಬ ಸ್ತ್ರೀಯನ್ನು ಇಚ್ಛೆಯ ಕಣ್ಣುಗಳಿಂದ ನೋಡಿದವನು ತನ್ನ ಆಂತರ್ಯದಲ್ಲಿ ಅವಳೊಂದಿಗೆ ವ್ಯಭಿಚಾರ ಮಾಡಿದವನಾಗಿದ್ದಾನೆ ಎಂದು (ಮತ್ತಾ. 5:28).

ದೇವಮಕ್ಕಳೇ, ಈ ಪ್ರಪಂಚದಲ್ಲಿ ನಾವು ನಡೆದು ಹೋಗುವದು ಒಂದೇ ಸಾರಿ ಎಂಬುದನ್ನು ಅರಿತು ಜ್ಞಾನದಿಂದ ಇಚ್ಛಾನಿಗ್ರಹದಿಂದ ನಡೆದುಕೊಳ್ಳಿರಿ. ದೇವರ ಆಲಯವಾಗಿರುವ ನಿಮ್ಮ ಶರೀರವನ್ನು ಅಶುದ್ಧಪಡಿಸದಿರಿ.

*ನೆನಪಿಗೆ : ಮನುಷ್ಯನ ಮಾರ್ಗಗಳು ಯೆಹೋವನಿಗೆ ಕಾಣುತ್ತಲೇ ಇವೆ. ಆತನು ಮನುಷ್ಯನ ನಡತೆಯನ್ನೆಲ್ಲಾ ಪರೀಕ್ಷಿಸುವವನಾಗಿದ್ದಾನೆ (ಜ್ಞಾನೋ. 5:21).*



ಮೇ 16

## ವ್ಯರ್ಥ ಮಾತುಗಳು!

ಬೆಳಿಗ್ಗೆ : 2 ಅರಸು 24,25
ಸಂಜೆ : ಯೋಹಾ. 5:1–18

“ಜ್ಞಾನಹೀನನಿಗೆ ಬಾಯಿ ನಾಶ; ತುಟಿಗಳು ಪಾಶ” (ಜ್ಞಾನೋ. 18:7).

ಅನೇಕರು ವಟವಟ ಎಂದು ವ್ಯರ್ಥವಾದ ಮಾತುಗಳನ್ನಾಡಿ ಕೊನೆಯಲ್ಲಿ ಹಲವು ರೀತಿಯ ಪಾಶಗಳಲ್ಲಿ ಸಿಕ್ಕಿಕೊಳ್ಳುವರು. ವಾಚಾಳಿಗೆ ಪಾಪ ತಪ್ಪದು (ಜ್ಞಾನೋ. 10:19) ಮತ್ತು ದುಷ್ಟನು ತುಟಿಗಳ ದೋಷದಿಂದ ಬೋನಿಗೆ ಬೀಳುವನು (ಜ್ಞಾನೋ. 12:13) ಎಂದು ಸತ್ಯವೇದ ಹೇಳುತ್ತದೆ. ಯಾವಾಗಲೂ ನಿಧಾನಿಸಿ ಮಾತನಾಡಿರಿ, ಪ್ರಾರ್ಥನಾ ಪೂರ್ವಕವಾಗಿ ಮಾತನಾಡಿರಿ, ನಿರ್ದಿಷ್ಟವಾಗಿ ಮಾತನಾಡಿರಿ, ಸತ್ಯದಿಂದ ಮಾತನಾಡಿರಿ, ಲೋಕದವರೊಂದಿಗೆ ಮಾತು ಕಡಿಮೆ ಮಾಡಿ, ಕರ್ತನೊಂದಿಗೆ ಮಾತನಾಡಿರಿ.

ಇಂದು ಯಾರ ಕೈಗಳಲ್ಲಿ ನೋಡಿದರೂ ಮೊಬೈಲ್ ಫೋನ್ ಬಂದುಬಿಟ್ಟಿದೆ. ನಡೆದು ಹೋಗುವಾಗಲೂ ಮಾತಾಡುವರು, ವಾಹನ ಚಾಲನೆ ಮಾಡುವಾಗಲೂ ಮಾತಾಡುವರು, ಮುಂದೆ ಏನು ಬರುತ್ತಿದೆ ಎಂದು ಗಮನಿಸದೆ ಮಾತಿನಲ್ಲಿ ನಿರತರಾಗಿರುತ್ತಾರೆ. ಇದರಿಂದ ಅನೇಕ ವಿಪತ್ತುಗಳು ಸಂಭವಿಸುವವು. ಇಂದಿನ ಆಧುನಿಕ ಉಪಕರಣಗಳು ಮನುಷ್ಯನ ಅವಶ್ಯಕತೆಗಾಗಿಯೇ ಇರುವದೆಂಬುದು ಸತ್ಯವೇ. ಆದರೆ ಇಂದಿನ ಪೀಳಿಗೆ ಅವಶ್ಯ, ಅನಾವಶ್ಯಗಳ ನಡುವಿನ ಅರ್ಥವನ್ನು ಅರಿತುಕೊಳ್ಳಬೇಕು. ಇಂದಿನ ಆಧುನಿಕ ಯುಗದಲ್ಲಿ ಟಿ.ವಿ., ಮೊಬೈಲ್, ಇಂಟರ್‌ನೆಟ್, ಫೇಸ್‌ಬುಕ್, ವಾಟ್ಸ್ ಆಫ್ ಎಲ್ಲವೂ ಅವಶ್ಯವೇ. ಆದರೆ ಅವುಗಳ ಬಳಕೆಯ ಉದ್ದೇಶ ಜೀವನದ ಕಟ್ಟುವಿಕೆಗೆ ಪೂರಕವಾಗಿ ಇರಬೇಕೇ ಹೊರತು, ಹಾಳು ಮಾಡಿಕೊಳ್ಳುವದಕ್ಕಲ್ಲ ಎಂಬ ಕಟುಸತ್ಯವನ್ನು ಪ್ರತಿಯೊಬ್ಬರು ಅರಿತಿರಬೇಕು. ವ್ಯರ್ಥ ಮಾತುಗಳ ಮೂಲಕ ಅನೇಕ ಯೌವನಸ್ಥರು ಇಂದು ಈ ಆಧುನಿಕ ತಂತ್ರಜ್ಞಾನದ ಮೂಲಕ ಬೇಡದ ಸಂಬಂಧಗಳಲ್ಲಿ ಸಿಲುಕಿ, ಸಮಯವನ್ನು ವ್ಯರ್ಥಮಾಡಿಕೊಳ್ಳುವದಲ್ಲ, ದೇವರು ಅನುಗ್ರಹಿಸಿರುವ ಅಮೂಲ್ಯವಾದ ತಮ್ಮ ಜೀವಿತಗಳನ್ನೇ ನಾಶನಕ್ಕೆ ಒಳಪಡಿಸುತ್ತಿರುವರು. ದಾವೀದ ರಾಜನು ಕರ್ತನ ಬಳಿ ನನ್ನ ಬಾಯಿಗೆ ಕಾವಲಿರಿಸು ಎಂದು ಬೇಡುತ್ತಾನೆ. ಯೇಸುಕ್ರಿಸ್ತನು ಯಾವಾಗಲೂ ಪರಿಶುದ್ಧವಾದ ಮಾತುಗಳನ್ನೇ ಆಡಿದನು. ನಮ್ಮ ಜೀವಿತಕ್ಕೆ ಪ್ರಯೋಜನವಾದ ಬೋಧನೆಗಳನ್ನೇ ಮಾಡಿದನು. ಒಮ್ಮೆಯಾದರೂ ತಪ್ಪು ಮಾತಾಡಿ ದಯಮಾಡಿ ಕ್ಷಮಿಸಿ ನನ್ನ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ ಎಂದು ಹೇಳಲಿಲ್ಲ. ನಿಧಾನವಾಗಿ ತೂಗಿ ಮಾತನಾಡಿದನು. ಖಂಡಿತವಾಗಿ ಮಾತನಾಡಿದನು. ವ್ಯರ್ಥವಾದ ಮಾತುಗಳು ಆತನ ಬಾಯಿಂದ ಬರಲೇ ಇಲ್ಲ.

ದೇವಜನರೇ, ನಿಮ್ಮ ಬಾಯಿಂದ ಹೊರಡುವ ಮಾತುಗಳ ಕುರಿತು ಎಚ್ಚರಿಕೆಯಾಗಿರಿ. ನಿಮ್ಮ ಮಾತು ನಿಮಗೇ ಉರುಲಾಗದಿರಲಿ.

*ನೆನಪಿಗೆ : ಬಾಯಿ ದುಡುಕಬೇಡ, ದೇವರ ಮುಂದೆ ಮಾತನಾಡಲು ನಿನ್ನ ಹೃದಯದಲ್ಲಿ ಆತುರಪಡದಿರು; ದೇವರು ಆಕಾಶದಲ್ಲಿದ್ದಾನಲ್ಲವೆ, ನೀನು ಭೂಮಿಯಲ್ಲಿದ್ದೀ, ಆದಕಾರಣ ನಿನ್ನ ಮಾತುಗಳು ಕೊಂಚವಾಗಿರಲಿ (ಪ್ರಸಂಗಿ 5:2).*

## ಮೇ 17 ಐಶ್ವರ್ಯವೆಂಬ ಪಾಶ!

ಬೆಳಿಗ್ಗೆ : 1 ಪೂ.ವೃ. 1,2,3
ಸಂಜೆ : ಯೋಹಾ. 5:20–47

"ಐಶ್ವರ್ಯವಂತರಾಗಬೇಕೆಂದು ಮನಸ್ಸು ಮಾಡುವವರು ದುಷ್ಪ್ರೇರಣೆಯೆಂಬ ಉರ್ಲಿನಲ್ಲಿ ಸಿಕ್ಕಿಕೊಂಡು ಬುದ್ಧಿ ವಿರುದ್ಧವಾಗಿಯೂ ಹಾನಿಕರವಾಗಿಯೂ ಇರುವ ಅನೇಕ ಆಶೆಗಳಲ್ಲಿ ಬೀಳುತ್ತಾರೆ. (1 ತಿಮೊ. 6:9).

ಹಣವನ್ನು ಸೈತಾನನು ಪಾಶವಾಗಿ ಇಟ್ಟಿರುವನು. ಮನುಷ್ಯನ ಹೃದಯದಲ್ಲಿ ಹಣದಾಶೆಯನ್ನು ಬಿತ್ತಿ ನಾಶನಕ್ಕೆ ಗುರಿ ಮಾಡುವನು. ಈ ಭೂಮಿಯಲ್ಲಿ ಜನಿಸಿದ ಪ್ರತಿಯೊಬ್ಬನಿಗೂ ಹಣ ಅಗತ್ಯವೇ. ಆದರೆ ಅದನ್ನು ಗಳಿಸಲು ಅಡ್ಡದಾರಿಯನ್ನು ಹಿಡಿಯಬಾರದು. ಈ ಕುರಿತು ಎಚ್ಚರಿಕೆಯಾಗಿರಬೇಕು. ಐಶ್ವರ್ಯವಂತನು ಪರಲೋಕ ರಾಜ್ಯವನ್ನು ಪ್ರವೇಶಿಸುವದಕ್ಕಿಂತ ಒಂಟೆಯು ಸೂಜಿಯ ಕಣ್ಣಿನಲ್ಲಿ ತೂರುವದು ಸುಲಭ ಎಂದು ಸತ್ಯವೇದ ಎಚ್ಚರಿಸುತ್ತದೆ.

ಹಣದಾಶೆ ನ್ಯಾಯದ ತಕ್ಕಡಿಯನ್ನು ಏರುಪೇರು ಮಾಡುವದು. ಇಸ್ಕರಿಯೋತ ಯೂದನು ಮೂವತ್ತು ರೂಪಾಯಿ ಬೆಳ್ಳಿ ನಾಣ್ಯಗಳಿಗೆ ಆಶೆಪಟ್ಟು ತನ್ನ ಪರಮ ಗುರುವಾದ ಯೇಸುಕ್ರಿಸ್ತನನ್ನು ಯೆಹೂದ್ಯರಿಗೆ ಹಿಡಿದುಕೊಟ್ಟನು. ಆದರೆ ಅವನ ಅಂತರಾತ್ಮ ಅವನನ್ನು ಬಾಧಿಸಿ, ಉರ್ಲು ಹಾಕಿಕೊಂಡು ಸತ್ತನೆಂದು ಸತ್ಯವೇದದಲ್ಲಿ ಓದುತ್ತೇವೆ. ನಾನು ಕೆಲಸ ಮಾಡುತ್ತಿದ್ದ ವರಮಾನ ಇಲಾಖೆಯಲ್ಲಿ ಒಬ್ಬ ಕ್ರೈಸ್ತ ಅಧಿಕಾರಿ ಬಹಳವಾಗಿ ಲಂಚವನ್ನು ಸ್ವೀಕರಿಸುತ್ತಿದ್ದನು. ಆದರೆ ಒಂದು ದಿನ ಹಿಡಿಯಲ್ಪಟ್ಟು ಸಹಿಸಲಾಗದ ಅವಮಾನವನ್ನು ನಿಂದೆಯನ್ನು ಅನುಭವಿಸಿದನು. ಇತರರಿಗೆ ಕ್ರಿಸ್ತನನ್ನು ಪರಿಚಯಿಸಿ ಉತ್ತಮವಾದ ಜೀವಿತವನ್ನು ಜೀವಿಸಬೇಕಾದ ಆತನು ಅಂಧಕಾರದಲ್ಲಿ ಸಿಕ್ಕಿಕೊಂಡನು. ಒಂದು ದಿನ ಆತನಿದ್ದ ಸ್ಥಳದ ಸಮೀಪದಲ್ಲಿ ಸುವಾರ್ತಾ ಕೂಟದಲ್ಲಿ ಪ್ರಸಂಗಿಸಲು ನಾನು ಹೋದಾಗ, ಆತನ ಮನೆಗೆ ಹೋದೆನು. ಅಲ್ಲಿ 25 ವರ್ಷ ವಯಸ್ಸಿನ ಮಗನು ಹುಚ್ಚನಾಗಿ ಒಂದು ಕೊಠಡಿಯಲ್ಲಿ ಬಂಧಿಸಲ್ಪಟ್ಟಿದ್ದನು. ಎಂಥ ಪರಿತಾಪಕರವಾದ ಸಂಗತಿ. ಇದು ಶಾಪವಲ್ಲದೆ ಮತ್ತೇನು? ಇಂದು ಅನೇಕ ಯೌವನಸ್ಥ ಮಕ್ಕಳು ಹೆಚ್ಚಿನ ಹಣ ಸಂಪಾದನೆಗಾಗಿ ದೂರ ದೇಶಗಳಿಗೆ ಹೋಗಿ ಸಂಬಂಧಗಳಲ್ಲಿ ಪ್ರೀತಿ ವಿಶ್ವಾಸಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಹಣದಾಶೆ ಎಲ್ಲಾ ಬಾಂಧವ್ಯಗಳನ್ನು ಮುರಿದು ಹಾಕಿ ಜನರನ್ನು ಸ್ವಾರ್ಥಪರರನ್ನಾಗಿಸುತ್ತಿದೆ.

ದೇವಮಕ್ಕಳೇ, "ಕರ್ತನ ಆಶೀರ್ವಾದವು ಭಾಗ್ಯದಾಯಕವು, ಅದು ವ್ಯವಸನವನ್ನು ಸೇರಿಸದು" (ಜ್ಞಾನೋ. 10:22). ಆತನಿಗೆ ಆತನ ವಾಕ್ಯಗಳಿಗೆ ವಿಧೇಯರಾಗಿ ನಡೆದುಕೊಳ್ಳುವಾಗ, ಕರ್ತನು ನಿಶ್ಚಯವಾಗಿ ಆಶೀರ್ವದಿಸುವನು. ಮೊದಲು ಪರಲೋಕ ರಾಜ್ಯಕ್ಕಾಗಿ ತವಕಪಡಿರಿ. ಅದರೊಂದಿಗೆ ಎಲ್ಲವೂ ದೊರೆಯುವದು ಎಂಬುದು ಕರ್ತನ ವಾಗ್ದಾನ.

*ನೆನಪಿಗೆ : ಮೋಸದ ತಕ್ಕಡಿ ಯೆಹೋವನಿಗೆ ಅಸಹ್ಯ. ನ್ಯಾಯದ ತೂಕ ಆತನಿಗೆ ಸಂತೋಷ (ಜ್ಞಾನೋ. 11:1,2)*



## ಮೇ 18 ಗುರಾಣಿಯಾದಾತನು!

ಬೆಳಿಗ್ಗೆ : 1 ಪೂ.ವೃ. 4,5,6
ಸಂಜೆ : ಯೋಹಾ. 6:1–21

"ಅಬ್ರಹಾಮನೇ ಭಯಪಡಬೇಡ, ನಾನು ನಿನಗೆ ಗುರಾಣಿಯಾಗಿದ್ದೇನೆ" (ಆದಿ. 15:1).

ಸೆರೆ ಒಯ್ಯಲ್ಪಟ್ಟ ಲೋಟನನ್ನು ಬಿಡಿಸಲು ಅಬ್ರಹಾಮನು ತನ್ನ ಮನೆಯಲ್ಲೇ ಹುಟ್ಟಿ ಬೆಳೆದ 318 ಮಂದಿಯನ್ನು ಕರೆದುಕೊಂಡು ಹೋಗಿ ಯುದ್ಧ ಮಾಡಿ ಬಿಡಿಸಿಕೊಂಡು ಬಂದನು. ಒಂದು ವೇಳೆ ಶತ್ರುಗಳು ಮುಯ್ಯಿ ತೀರಿಸಲು ತನ್ನ ಮೇಲೆ ಯುದ್ಧಕ್ಕೆ ಬರಬಹುದೆಂಬ ಭೀತಿ ಅವನನ್ನು ಕಾಡುತ್ತಿತ್ತು. ಆಗ ಯೆಹೋವನು ಅವನಿಗೆ ದರ್ಶನ ನೀಡಿ, "ಅಬ್ರಹಾಮನೇ ಭಯಪಡಬೇಡ ನಾನು ನಿನಗೆ ಗುರಾಣಿಯಾಗಿದ್ದೇನೆ" ಎಂದು ಅಭಯ ಹಸ್ತ ನೀಡಿದನು. ಕರ್ತನ ಮಾತುಗಳು ಅಬ್ರಹಾಮನನ್ನು ಎಷ್ಟಾಗಿ ಸಂತೈಸಿರಬಹುದಲ್ಲವೇ!

ದೇವರು ಅಬ್ರಹಾಮನಿಗೆ ಈ ವಾಗ್ದಾನ ಮಾಡಿದಾಗ, ಅವನ ವಯಸ್ಸು ಎಂಬತ್ತು ವರುಷವಾಗಿರಬಹುದು. ವಯಸ್ಸಾದ ಕಾಲದಲ್ಲಿ ಕರ್ತನ ಈ ಒಂದು ವಾಗ್ದಾನ ಗುರಾಣಿಯಾಗಿಯೇ ಅವನಿಗೆ ಕಂಡಿತು. ಹೌದು ಕರ್ತನು, ಬಲಹೀನರನ್ನು ಬಲಶಾಲಿಗಳಾಗಿ ಮಾರ್ಪಡಿಸುವನು. ಆದ್ದರಿಂದಲೇ ಅಪೊ. ಪೌಲನು "ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" (ಫಿಲಿ. 4:13) ಎಂದು ಹೇಳುತ್ತಾನೆ. ಒಬ್ಬ ವೀರನು ಎಷ್ಟೇ ಬಲಶಾಲಿಯಾಗಿದ್ದರೂ ಅವನಿಗೆ ಗುರಾಣಿ ಅಗತ್ಯವಾದದ್ದು. ಆದರೆ ಕರ್ತನ ಸಹಾಯವಿಲ್ಲದಾಗ ಆ ಗುರಾಣಿಯೂ ಪ್ರಯೋಜನಕ್ಕೆ ಬರುವದಿಲ್ಲ. ಅವನನ್ನು ಕಾಪಾಡಲು ಅದಕ್ಕೆ ಬಲ ಸಾಲದು. 2 ಸಮು. 1:21ರಲ್ಲಿ "ಅಲ್ಲಿ ಪರಾಕ್ರಮಶಾಲಿಗಳ ಗುರಾಣಿಗಳು ಬಿದ್ದಿವೆ" ಎಂದು ಓದುತ್ತೇವೆ. "ಕರ್ತನು ಮನೆ ಕಟ್ಟದಿದ್ದರೆ ಅದನ್ನು ಕಟ್ಟುವವನ ಪ್ರಯಾಸ ವ್ಯರ್ಥ. ಕರ್ತನು ಪಟ್ಟಣವನ್ನು ಕಾಯದಿದ್ದರೆ ಕಾವಲುಗಾರರು ಅದನ್ನು ಕಾಯುವದು ವ್ಯರ್ಥ" ಎಂದು ಸತ್ಯವೇದ ಹೇಳುತ್ತದೆ (ಕೀರ್ತ. 127:1,2). ಫಿಲಿಷ್ಟಿಯ ವೀರನಾದ ಗೊಲ್ಯಾತನ ಶಿರಸ್ತ್ರಾಣವು ತಾಮ್ರದ್ದು. ತಾಮ್ರದ ಗುರಾಣಿಯನ್ನು ಅವನ ಸೇವಕ ಹಿಡಿದುಕೊಂಡು ಅವನ ಮುಂದೆ ಹೋಗುತ್ತಿದ್ದನೆಂದು 1 ಸಮು. 17:5–7ರಲ್ಲಿ ಓದುತ್ತೇವೆ. ದಾವೀದನು ಅವನ ಹಣೆಗೆ ಗುರಿ ಇಟ್ಟು ಒಂದು ಕವಣೆ ಕಲ್ಲನ್ನು ಬೀಸಲು ಅದು ಗೊಲ್ಯಾತನ ಹಣೆಯನ್ನು ಹೊಕ್ಕಲು ಅವನು ಬೇರು ಕಡಿದ ಮರದಂತೆ ನೆಲಕ್ಕೆ ಬಿದ್ದನು ಎಂದು 1 ಸಮುವೇಲ 17:49,50ರಲ್ಲಿ ಓದುತ್ತೇವೆ.

ದೇವಮಕ್ಕಳೇ, ಕರ್ತನೇ ನಿಮಗೆ ಗುರಾಣಿಯೂ, ಬಲವೂ ಆಗಿರುವನು. ಯಾವ ಶತ್ರುವೂ ನಿಮ್ಮನ್ನು ಸೋಲಿಸಲಾರನು. ಪರಾತ್ಪರನ ಮರೆ ಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು (ಕೀರ್ತ. 91:1).

*ನೆನಪಿಗೆ : "ಯೆಹೋವನಾದರೋ ಭಯಂಕರ ಶೂರನಾಗಿ ನನ್ನ ಸಂಗಡ ಇದ್ದಾನೆ. ಆದದರಿಂದ ನನ್ನ ಹಿಂಸಕರು ಗೆಲ್ಲದೆ ಮುಗ್ಗರಿಸುವರು; ತಮ್ಮ ಇಷ್ಟಾರ್ಥವು ನೆರವೇರದ ಕಾರಣ ದೊಡ್ಡ ನಾಚಿಕೆಗೆ ಈಡಾಗುವದು" (ಯೆರೆ. 20:11).*

ಮೇ 19

## ಕಾಯುವ ಡಾಲೂ!

ಬೆಳಿಗ್ಗೆ : 1 ಪೂ.ವೃ. 7,8,9
ಸಂಜೆ : ಯೋಹಾ. 6:22–51

"ಇಸ್ರಾಯೇಲ್ಯರೇ, ನೀವು ಎಷ್ಟೋ ಧನ್ಯರು; ನಿಮ್ಮಷ್ಟು ಭಾಗ್ಯವಂತರು ಯಾರಿದ್ದಾರೆ? ನೀವು ಯೆಹೋವನ ಅನುಗ್ರಹದಿಂದ ಜಯವನ್ನು ಹೊಂದಿದವರು. ಆತನೇ ನಿಮ್ಮನ್ನು ಕಾಯುವ ಡಾಲೂ, ನಿಮ್ಮ ಗೌರವವನ್ನು ಕಾಪಾಡುವ ಕತ್ತಿಯೂ ಆಗಿದ್ದಾನೆ" (ಧರ್ಮೋ. 33:29).

ಕರ್ತನು ನಿಮ್ಮನ್ನು ಕಾಯುವ ಡಾಲು ಅಥವಾ ಗುರಾಣಿ ಮಾತ್ರವಲ್ಲ, ನಿಮ್ಮನ್ನು ಕಾಪಾಡುವ ಕತ್ತಿಯೂ ಆಗಿರುವನು. ಅಂಥಹ ಪರಾತ್ಪರನ ಆಶ್ರಯದಲ್ಲಿ ನೀವು ಇರುವಾಗ, ಯಾವ ಕೇಡೂ ನಿನಗೆ ಸಂಭವಿಸದು; ಉಪದ್ರವವು ನಿನ್ನ ಗುಡಾರದ ಸಮೀಪಕ್ಕೂ ಬಾರದು (ಕೀರ್ತ. 91:10).

ಐಗುಪ್ತದಿಂದ ಹೊರಟ ಇಸ್ರಾಯೇಲ್ಯರಿಗೆ ಕರ್ತನು ದೊಡ್ಡ ಖಡ್ಗದಂಥಹ, ಮೇಘಸ್ತಂಭ ಅಗ್ನಿಸ್ತಂಭಗಳನ್ನು ಇಸ್ರಾಯೇಲ್ ಸೈನ್ಯದ ಮುಂದೆ ನಿಲ್ಲಿಸಿದನು. ಇಸ್ರಾಯೇಲ್ಯರು ಕೆಂಪು ಸಮುದ್ರವನ್ನು ದಾಟಿ ಹೋಗುವಾಗ, ಅವರ ಮುಂಭಾಗದಲ್ಲಿ ದೇವದೂತರು ಮೇಘಸ್ತಂಭ ಅಗ್ನಿ ಸ್ತಂಭಗಳಾಗಿ ನಡೆದುಹೋಗುತ್ತಿದ್ದರು. ಕೆಂಪು ಸಮುದ್ರದ ಮಧ್ಯಭಾಗದಲ್ಲಿ ನಡೆದು ಹೋಗುತ್ತಿದ್ದ ಇಸ್ರಾಯೇಲ್ಯರನ್ನು ಫರೋಹನ ಸೈನ್ಯ ಅಟ್ಟಿಸಿಕೊಂಡು ಬಂದಾಗ, ಇಸ್ರಾಯೇಲ್ಯರ ಮುಂಭಾಗದಲ್ಲಿ ಹೋಗುತ್ತಿದ್ದ ಮೇಘಸ್ತಂಭ ಹಾಗೂ ಅಗ್ನಿಸ್ತಂಭಗಳು ಇಸ್ರಾಯೇಲ್ಯರೂ, ಫರೋಹನ ಸೈನ್ಯವೂ ಒಂದಕ್ಕೊಂದು ಸೇರದಂತೆ ಇಸ್ರಾಯೇಲ್ಯರ ಹಿಂಭಾಗಕ್ಕೆ ಬಂದು ನಿಂತವು. ಮೇಘಸ್ತಂಭವು ಫರೋಹನ ಸೈನ್ಯಕ್ಕೆ ಮೋಡವೂ ಅಂಧಕಾರವೂ ಆಗಿತ್ತು. ಇಸ್ರಾಯೇಲ್ಯರಿಗೋ, ಅಗ್ನಿಸ್ತಂಭವು ಬೆಳಕು ನೀಡಿತು (ವಿಮೋ. 14:19,20). ಆ ದೂತನು ತಾನೇ ನಿಮಗೆ ಗುರಾಣಿಯಾಗಿರಲಿ. ಪ್ರಪಂಚದ ಎರಡನೇ ಮಹಾ ಯುದ್ಧದಲ್ಲಿ ಒಬ್ಬ ಯುದ್ಧವೀರನು ಯುದ್ಧಕ್ಕೆ ಹೊರಡುವ ಮೊದಲು "ಕರ್ತನೇ ನನಗೆ ಗುರಾಣಿಯಾಗಿದ್ದಾನೆ" ಎಂದು ಹೇಳಿ ಪ್ರಾರ್ಥಿಸಿ ಹೊರಟನು. ಅಂದು ಅವನು ನಿರೀಕ್ಷಿಸದ ರೀತಿಯಲ್ಲಿ ಎಲ್ಲಿಂದಲೋ ಒಂದು ಗುಂಡು ಅವನನ್ನು ತಾಕಿ ಬಿದ್ದುಬಿಟ್ಟನು. ಆದರೆ, ಆ ಗುಂಡಿನಿಂದ ಯಾವ ಅಪಾಯವೂ ಆಗಲಿಲ್ಲ. ಕಾರಣ ಅವನ ಜೇಬಿನಲ್ಲಿದ್ದ ಒಂದು ಚಿಕ್ಕ ಸತ್ಯವೇದ ಪುಸ್ತಕಕ್ಕೆ ತಾಕಿ ಅದರಲ್ಲಿ ಸಿಕ್ಕಿಕೊಂಡಿತ್ತು. ಅಂದು ಅವನಿಗೆ ಸತ್ಯವೇದ ಗುರಾಣಿಯಾಗಿ ಕಾಪಾಡಿತು. "ಯೆಹೋವನೇ ನೀನು ನನ್ನನ್ನು ಕಾಯುವ ಗುರಾಣಿ" ಎಂದು ಹೇಳಿ ಕರ್ತನನ್ನು ಸ್ತುತಿಸಿದನು.

ದೇವಜನರೇ, ನೀವೂ ನಿಮ್ಮ ಕುಟುಂಬದವರೂ ರಕ್ಷಣೆಯ ನಾವೆಯಲ್ಲಿ ಇರುವಿರಾ? ಕ್ರಿಸ್ತನ ರಕ್ತದ ಕೋಟೆಯೊಳಗೆ ಇರುವಿರಾ? ಹಾಗಿದ್ದಲ್ಲಿ, ಸೈತಾನನೂ, ಯಾವ ಮಾಟ ಮಂತ್ರವೂ ನಿಮ್ಮನ್ನೂ, ನಿಮ್ಮ ಕುಟುಂಬವನ್ನೂ ತಾಕಲು ಸಾಧ್ಯವೇ ಇಲ್ಲ.

*ನೆನಪಿಗೆ : ಆತನು ನಿನ್ನನ್ನು, ತನ್ನ ರೆಕ್ಕೆಗಳಿಂದ ಹೊದಗಿಸುವನು. ಆತನ ಪಕ್ಕಗಳ ಮರೆಯನ್ನು ಆಶ್ರಯಿಸಿಕೊಳ್ಳುವಿ. ಆತನ ಸತ್ಯತೆಯೇ ನಿನಗೆ ಖೇಢ್ಯವೂ, ಗುರಾಣಿಯೂ ಆಗಿದೆ. (ಕೀರ್ತ.91:4).*



ಮೇ 20

## ನಂಬಿಕೆಯೆಂಬ ಗುರಾಣಿ!

ಬೆಳಿಗ್ಗೆ : 1 ಪೂ.ವೃ. 10,11,12
ಸಂಜೆ : ಯೋಹಾ. 6:52–71

"ನಂಬಿಕೆಯೆಂಬ ಗುರಾಣಿಯನ್ನು ಹಿಡಿದುಕೊಳ್ಳಿರಿ. ಆಗ ಕೆಡುಕನ ಅಗ್ನಿ ಬಾಣಗಳನ್ನೆಲ್ಲಾ ಆರಿಸುವದಕ್ಕೆ ಶಕ್ತರಾಗುವಿರಿ" (ಎಫೆ. 6:16).

ಸತ್ಯವೇದದಲ್ಲಿ ಯೆಹೋವನೆಂಬ ಬಲ ಪರಾಕ್ರಮಗಳಿಂದ ಕೂಡಿದ ಗುರಾಣಿ (ಆದಿ.15:1), ರಕ್ಷಣೆಯೆಂಬ ಗುರಾಣಿ (ಕೀರ್ತ. 18:35), ಸತ್ಯವೆಂಬ ಗುರಾಣಿ (ಕೀರ್ತ. 91:4), ನಂಬಿಕೆಯೆಂಬ ಗುರಾಣಿ (ಎಫೆ. 6:16). ಹೀಗೆ ಅನೇಕ ರೀತಿಯ ಗುರಾಣಿಗಳ ಕುರಿತಾಗಿ ಓದುತ್ತೇವೆ.

ನೀವು ರಕ್ಷಿಸಲ್ಪಡುವಾಗ, ನಿಮ್ಮ ಕಣ್ಣಿಗೆ ಕಾಣದಂಥ ಒಂದು ಯುದ್ಧರಂಗದಲ್ಲಿ ನಿಲ್ಲುವಿರಿ. ಪ್ರಪಂಚ, ಶರೀರ, ಸೈತಾನ ಇವು ನಿಮಗೆ ವಿರೋಧವಾಗಿ ಬಂದು ನಿಲ್ಲುವವು. ಎಫೆಸ. 6:12ರಲ್ಲಿ ಹೀಗೆ ಬರೆಯಲ್ಪಟ್ಟಿದೆ. "ನಾವು ಹೋರಾಡುವದು ಮನುಷ್ಯ ಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ, ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶ ಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ" ಎಂದು. ಆದ್ದರಿಂದ, ದೇವರು ದಯಪಾಲಿಸುವ ಸರ್ವಾಯುಧಗಳನ್ನು ತೆಗೆದುಕೊಳ್ಳಿರಿ (ಎಫೆ. 6:13). ಅಪೊ. ಪೌಲನು ಕೊರಿಂಥ ಸಭೆಗೆ ಹೀಗೆ ಬರೆಯುತ್ತಾನೆ "ನಾವು ಉಪಯೋಗಿಸುವ ಆಯುಧಗಳು ಲೋಕ ಸಂಬಂಧವಾದ ಆಯುಧಗಳಲ್ಲ; ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿ ಹಾಕುವಂಥವುಗಳಾಗಿವೆ (2 ಕೊರಿಂ. 10:4) ಎಂದು ನಿಮಗೆ ಬರುವ ಎಲ್ಲಾ ಹೋರಾಟಗಳಲ್ಲಿ ನೀವು ರಕ್ಷಿಸಲ್ಪಟ್ಟು, ಜಯವನ್ನು ಪಡೆದುಕೊಳ್ಳಿರಿ. ಕ್ರಿಸ್ತನೆಂಬ ರಕ್ಷಕನನ್ನು ನಿಮ್ಮ ನಂಬಿಕೆಯ ಗುರಾಣಿಯಾಗಿ ಉಪಯೋಗಿಸಿರಿ. "ನಾನು ನಂಬಿರುವಾತನನ್ನು ಬಲ್ಲೆನು. ಆತನು ನನ್ನ ವಶದಲ್ಲಿಟ್ಟಿರುವದನ್ನು ಆತನು ಆ ದಿನಕ್ಕಾಗಿ ಕಾಪಾಡುವದಕ್ಕೆ ಶಕ್ತನಾಗಿದ್ದಾನೆಂದು ದೃಢವಾಗಿ ನಂಬಿದ್ದೇನೆ" (2 ತಿಮೊ. 1:12) ಎಂದು ಹೇಳಿರಿ. ಲೋಕವನ್ನು ಜಯಿಸುವಂಥದು ನಮ್ಮ ನಂಬಿಕೆಯೇ (1 ಯೋಹಾ. 5:4).

ದೇವಜನರೇ, ಕಲ್ವಾರಿ ಶಿಲುಬೆಯು ಬಹು ದೊಡ್ಡ ಆಯುಧವಾಗಿ ನಿಮ್ಮೊಳಗೆ ಕಾಣಲ್ಪಡಲಿ. ನಿಮಗಾಗಿ ತನ್ನ ಪ್ರಾಣವನ್ನು ನೀಡಿದ ಯೇಸುಕ್ರಿಸ್ತನು ಸೈತಾನನ ತಲೆಯನ್ನು ಜಜ್ಜಿದ್ದು ಮಾತ್ರವಲ್ಲ, ಸೈತಾನನು ನಿಮ್ಮ ಮೇಲೆ ಶಾಪವೆಂಬ ಬಾಣ, ಬಲಹೀನತೆಯೆಂಬ ಬಾಣ, ಮನಃ ಸೋಲುವಿಕೆ ಎಂಬ ಬಾಣ, ಹೀಗೆ ಅವನು ಎಸೆಯುವ ಸಕಲ ಅಗ್ನಿ ಅಸ್ತ್ರಗಳನ್ನು ಮುರಿದುಹಾಕಲು ಆತನು ಶಕ್ತನಾಗಿರುವನು. ಆತನು ಸಕಲ ಮಾನವ ಕುಲದ ಪಾಪಗಳನ್ನೂ, ಶಾಪಗಳನ್ನೂ ಶಿಲುಬೆಯಲ್ಲಿ ತನ್ನ ಮೇಲೆ ತೆಗೆದುಕೊಂಡು ಬಿಡುಗಡೆ ನೀಡಿರುವನು.

*ನೆನಪಿಗೆ : ಆತನು ನನ್ನ ಆಶ್ರಯಗಿರಿಯಾಗಿರುವ ದೇವರೂ, ನನ್ನ ಗುರಾಣಿಯೂ, ನನ್ನ ರಕ್ಷಣೆಯ ಕೊಂಬೂ, ನನ್ನ ದುರ್ಗವೂ, ನನ್ನ ಶರಣನೂ, ಬಲಾತ್ಕಾರಿಯಿಂದ ನನ್ನನ್ನು ರಕ್ಷಿಸುವವನೂ ಆಗಿದ್ದಾನೆ (2 ಸಮು. 22:3).*

ಮೇ 21

## ವಿಜ್ಞಾಪನಾ ಪ್ರಾರ್ಥನೆ!

ಬೆಳಿಗ್ಗೆ : 1 ಪೂ.ವೃ. 13,14,15
ಸಂಜೆ : ಯೋಹಾ. 7:1–24

"ನಾನಾದರೋ ನಿಮಗೋಸ್ಕರವಾಗಿ ಯೆಹೋವನನ್ನು ಪ್ರಾರ್ಥಿಸುತ್ತಾ ಆತನ ಉತ್ತಮ ನೀತಿಮಾರ್ಗವನ್ನು ನಿಮಗೆ ತೋರಿಸಿಕೊಡುವದನ್ನು ಬಿಡುವದೇ ಇಲ್ಲ; ಬಿಟ್ಟರೆ ಆತನ ದೃಷ್ಟಿಯಲ್ಲಿ ಪಾಪಿಯಾಗಿರುವೆನು" (1 ಸಮು. 12:23).

ಪ್ರಾರ್ಥಿಸದೆ ಇರುವದು ಬಹಳ ದೊಡ್ಡ ಪಾಪವಾಗಿದೆ. ಪ್ರಾರ್ಥಿಸದವನ ಜೀವಿತದಲ್ಲಿ ಅವನಿಗೆ ತಿಳಿಯದಂತೆಯೇ ಪಾಪವು ನುಸುಳಿ, ಕೊನೆಯಲ್ಲಿ ಅವನು ತಪ್ಪಿತಸ್ಥನಾಗುವನು, ಅವನ ಮುಂದಿನ ಸ್ಥಿತಿ ಪರಿತಾಪಕರವಾಗಿರುವದು. ಪ್ರಾರ್ಥಿಸದೆ ಇರುವವನು, ಸೈತಾನನು ಪ್ರವೇಶಿಸಲು ತನ್ನ ಬಾಗಿಲನ್ನು ತೆರೆದಿಡುವನು.

ಪ್ರಾರ್ಥನಾ ವೀರನಾದ ಪ್ರವಾದಿಯಾದ ಸಮುವೇಲನು ಸತ್ಯವೇದದಲ್ಲಿ ಒಂದು ಮುಖ್ಯವಾದ ಸ್ಥಳವನ್ನು ಗಳಿಸಿರುವನು. ಒಂದು ಕಡೆ ಆತನು ಕರ್ತನ ಪ್ರವಾದಿಯಾಗಿಯೂ, ಮತ್ತೊಂದೆಡೆ ಇಸ್ರಾಯೇಲ್ಯರ ನ್ಯಾಯಾಧಿಪತಿಯಾಗಿಯೂ ಇದ್ದನು. ಕರ್ತನು ನೇಮಿಸಿದ ಹನ್ನೆರಡು ಮಂದಿ ನ್ಯಾಯಾಧಿಪತಿಗಳಲ್ಲಿ ಆತನು. ಕೊನೆಯವನಾದರೂ, ಬಹು ಮುಖ್ಯವಾದವನು, ಆತನು ಸೌಲನನ್ನು, ದಾವೀದನನ್ನೂ, ಅರಸರನ್ನಾಗಿ ಅಭಿಷೇಕಿಸಿದನು. ಅವರಿಬ್ಬರೂ ನಾಲ್ವತ್ತು ವರ್ಷಗಳು ರಾಜ್ಯವಾಳಿದರು. ಸಮುವೇಲ ಎಂಬ ಪದಕ್ಕೆ "ದೇವರ ಬಳಿ ಬೇಡಿ ಪಡೆದುಕೊಂಡವನು" ಎಂದು ಅರ್ಥ. ಬಂಜೆಯಾಗಿದ್ದ ಹನ್ನಳು, ಮನನೊಂದು ಕರ್ತನ ಆಲಯಕ್ಕೆ ಬಂದು ಪ್ರಾರ್ಥಿಸಿದಳು. ತನಗೆ ಒಂದು ಗಂಡು ಮಗುವನ್ನು ಕೊಟ್ಟರೆ, ಅವನನ್ನು ಕರ್ತನಿಗೆಂದೇ ಒಪ್ಪಿಸಿಕೊಡುವುದಾಗಿ ಹರಕೆ ಹೊತ್ತಳು. ಕರ್ತನು ಅವಳ ವಿಜ್ಞಾಪನೆಯನ್ನು ಲಾಲಿಸಿ ಅವಳಿಗೆ ಗರ್ಭವನ್ನು ಆಶೀರ್ವದಿಸಿದನು. ಮಾತ್ರವಲ್ಲ, ಇನ್ನೂ ಐದು ಮಕ್ಕಳನ್ನು ದಯಪಾಲಿಸಿದನು. ಅವಳು ತನ್ನ ಹರಕೆಯಂತೆ ಸಮುವೇಲನನ್ನು ಕರ್ತನ ಸೇವೆಗೆಂದು ಒಪ್ಪಿಸಿಕೊಟ್ಟಳು. ಅವಳು ಅಂದು ಪ್ರಾರ್ಥಿಸದೆ ಇದ್ದಿದ್ದರೆ ಚರಿತ್ರೆಯು ಒಬ್ಬ ದೊಡ್ಡ ಪ್ರವಾದಿಯನ್ನು ಕಳೆದುಕೊಳ್ಳುತ್ತಿತ್ತು.

ದೇವಜನರೇ, ನಿಮ್ಮ ಒಂದೊಂದು ಅಗತ್ಯತೆಗಳ ಕುರಿತಾಗಿ ಸ್ತೋತ್ರದೊಂದಿಗೂ, ಪ್ರಾರ್ಥನೆಯೊಂದಿಗೆ ಕರ್ತನಿಗೆ ತಿಳಿಯಪಡಿಸಿರಿ. ದಿನಕ್ಕೆ ಒಂದು ಗಂಟೆಯಾದರೂ ಪ್ರಾರ್ಥಿಸಿರಿ. ಕ್ರೈಸ್ತ ಜೀವಿತದಲ್ಲಿ ಒಬ್ಬರಿಗೋಸ್ಕರ ಒಬ್ಬರು ಪ್ರಾರ್ಥಿಸುವದು ಅಗತ್ಯವಾದದ್ದು. ನಿಮ್ಮ ಕುಟುಂಬದವರಿಗಾಗಿ ಮಕ್ಕಳಿಗಾಗಿ ಸಭೆಗಳಿಗಾಗಿ ದೇಶಕ್ಕಾಗಿ ಗೋಳಾಡಿ ಪ್ರಾರ್ಥಿಸಿರಿ. "ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಲಿ; ಹೀಗೆ ಕ್ರಿಸ್ತನ ನಿಯಮವನ್ನು ನೆರವೇರಿಸಿರಿ" (ಗಲಾ.6:2). ಎಂದು ಸತ್ಯವೇದ ಹೇಳುತ್ತದೆ.

*ನೆನಪಿಗೆ : ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥಿಸಬೇಕೆಂಬುದಕ್ಕೆ ಆತನು ಅವರಿಗೆ ಒಂದು ಸಾಮ್ಯವನ್ನು ಹೇಳಿದನು (ಲೂಕ. 18:1).*



ಮೇ 22

## ಮಹಿಮಾಸನ!

ಬೆಳಿಗ್ಗೆ : 1 ಪೂ.ವೃ. 16,17,18
ಸಂಜೆ : ಯೋಹಾ. 7:25–52

"ಆತನು ದೀನನನ್ನು ಧೂಳಿನಿಂದ ಎತ್ತಿ ದರಿದ್ರನನ್ನು ತಿಪ್ಪೆಯಿಂದ ಎಬ್ಬಿಸಿ ಪ್ರಭುಗಳೊಂದಿಗೆ ಕುಳ್ಳಿರಿಸಿ ಅವನಿಗೆ ಮಹಿಮಾಸನವನ್ನು ಬಾಧ್ಯತೆಯಾಗಿ ಅನುಗ್ರಹಿಸುವವನಾಗಿದ್ದಾನೆ" (1 ಸಮು.2:8).

ಮಣ್ಣಿನಿಂದ ಸೃಷ್ಟಿಸಲ್ಪಟ್ಟ ಮನುಷ್ಯನಿಗಾಗಿ ಕೃಪಾಪೂರ್ಣನಾದ ದೇವರು, ತನ್ನ ಒಬ್ಬನೇ ಮಗನನ್ನು ಈ ಪ್ರಪಂಚಕ್ಕೆ ಕಳುಹಿಸಿ, ತನ್ನ ರಕ್ತವನ್ನೆಲ್ಲಾ ಚೆಲ್ಲಿ, ಪಾಪ, ಶಾಪ, ರೋಗಗಳಿಂದ ಬಿಡುಗಡೆ ಕೊಟ್ಟಿರುವನು. ಸೃಷ್ಟಿಯಲ್ಲಿ ದೇವದೂತರಿಗಿಂತಲೂ ಸ್ವಲ್ಪ ಕಡಿಮೆಯಾಗಿದ್ದರೂ ಪ್ರಭಾವವನ್ನೂ, ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟಿರುವನು (ಕೀರ್ತ. 8:5). ಪ್ರಭುಗಳೊಂದಿಗೆ ಕುಳ್ಳಿರಿಸಿ, ಅವನಿಗೆ ಮಹಿಮಾಸನವನ್ನು ಬಾಧ್ಯತೆಯಾಗಿ ಅನುಗ್ರಹಿಸಿರುವನು (1 ಸಮು. 2:8). ಅದನ್ನು ಅಂಗೀಕರಿಸಲು ನಂಬಿಕೆಯ ಹೃದಯ ನಿಮಗೆ ಬೇಕು. ನೀವು ನಿಮ್ಮನ್ನು ಯಾವಾಗಲೂ ಕರ್ತನ ಮುಂದೆ ತಗ್ಗಿಸಿಕೊಂಡು "ದೇವರೇ, ನನ್ನ ಪ್ರತಿಯೊಂದು ಏಳಿಗೆಗೂ ನಿನ್ನ ದಯೆ ಕರುಣೆಗಳೇ ಕಾರಣ" ಎಂದು ಅರಿಕೆ ಮಾಡಿರಿ. ಹಾಗೆ ಮಾಡುವಾಗ ಕರ್ತನು ಸಂತೋಷಪಡುವನು.

ದೇವರು ಅಬ್ರಹಾಮನನ್ನು ಅಭಿವೃದ್ಧಿಗೊಳಿಸಿದಾಗ, ಅವನೋ ದೇವರ ಮುಂದೆ ತನ್ನನ್ನು ತಗ್ಗಿಸಿಕೊಂಡು ತನ್ನನ್ನು ಕಸಕ್ಕೂ, ಧೂಳಿಗೆ ಸಮಾನನೆಂದು ತಗ್ಗಿಸಿಕೊಂಡನು (ಆದಿ. 18:27). ಯಾಕೋಬನು ತನ್ನನ್ನು ಇದುವರೆಗೂ ನಡೆಸಿದ ದೇವರ ಪ್ರೀತಿಗೆ ತಾನು ಅಪಾತ್ರನೆಂದು ಹೇಳಿದನು (ಆದಿ. 32:10). ದಾವೀದನು "ಯೆಹೋವನ ಮಹೋಪಕಾರಗಳಿಗೆ ಬದಲೇನು ಮಾಡಲಿ?" (ಕೀರ್ತ. 116:12) ಅಂದನು. ಅಪೊ. ಪೌಲನು, "ಪಾಪಿಗಳಲ್ಲಿ ನಾನು ದೊಡ್ಡ ಪಾಪಿ" (1 ತಿಮೊ. 1:15) ಎಂದು ಹೇಳಿದನು. ಇವರೆಲ್ಲರಿಗಿಂತ ನಮ್ಮ ರಕ್ಷಕನಾದ ಯೇಸುಕ್ರಿಸ್ತನು ಅಧಿಕವಾಗಿ ತನ್ನನ್ನು ತಗ್ಗಿಸಿಕೊಂಡನು. ಪರಲೋಕದ ಸಿಂಹಾಸನವನ್ನು ತ್ಯಜಿಸಿ ದಾಸನ ರೂಪ ಧರಿಸಿ ಈ ಭೂಮಿಗೆ ಇಳಿದುಬಂದನು (ಫಿಲಿ. 2:6–8). ಅವಮಾನ, ನಿಂದನೆಗಳಿಗೆ ತನ್ನನ್ನು ಒಪ್ಪಿಸಿಕೊಟ್ಟನು. ಹೊಡೆಯುವವರಿಗೆ ಬೆನ್ನು ಕೊಟ್ಟನು. ಕೂದಲು ಕೀಳುವವರಿಗೆ ಗಡ್ಡವನ್ನು ಒಡ್ಡಿದನು. ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಮರಿಯಂತೆ ಬಾಯಿ ತೆರೆಯಲೇ ಇಲ್ಲ (ಯೆಶಾ.50:6, 53:7). ಆದ್ದರಿಂದ ತಂದೆ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದನು (ಫಿಲಿ. 2:9).

ದೇವಜನರೇ, ಕ್ರಿಸ್ತನು ಇಂದಿಗೂ ತಂದೆ ದೇವರ ಬಲಪಾರ್ಶ್ವದಲ್ಲಿ ಕುಳಿತು ನಿಮಗಾಗಿ ಬಿನ್ನಹಗಳನ್ನು ಮಾಡುತ್ತಿರುವನು.

*ನೆನಪಗೆ : ನಾನಾದರೋ ಕುಗ್ಗಿದವನೂ ದಿಕ್ಕಿಲ್ಲದವನೂ ಆಗಿದ್ದೇನೆ; ಕರ್ತನೇ ನನ್ನ ಹಿತಚಿಂತಕನು. ನನ್ನ ದೇವರೇ, ನೀನೇ ನನಗೆ ಸಹಾಯಕನೂ, ರಕ್ಷಕನೂ ಆಗಿದ್ದೀ; ತಡ ಮಾಡಬೇಡ (ಕೀರ್ತ. 40:17).*

ಮೇ 23

## ಜ್ಞಾಪಕದಲ್ಲಿಟ್ಟಿರುವನು!

ಬೆಳಿಗ್ಗೆ : 1 ಪೂ.ವೃ. 19,20,21
ಸಂಜೆ : ಯೋಹಾ. 8:1–29

"ಮನುಷ್ಯನು ಎಷ್ಟು ಮಾತ್ರದವನು. ಅವನನ್ನು ನೀನು ಯಾಕೆ ನೆನಸಬೇಕು? ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು? (ಕೀರ್ತ. 8:4).

ನಿಮ್ಮನ್ನು ಜ್ಞಾಪಕದಲ್ಲಿ ಇಟ್ಟುಕೊಂಡು, ನಿಮಗಾಗಿ ಎಲ್ಲವನ್ನೂ ಮಾಡಿ ಮುಗಿಸುವ ಕರ್ತನಿಗೆ ಸ್ತೋತ್ರ ಸಲ್ಲಿಸಿರಿ. ಅಂಗೈಗಳಲ್ಲಿ ನಿಮ್ಮನ್ನು ಚಿತ್ರಿಸಿಕೊಂಡು ಮಗನೇ, ಮಗಳೇ, ನಿನ್ನನ್ನು ನಾನು ಮರೆಯುವದಿಲ್ಲ ಎಂದು ಪ್ರೀತಿಯಿಂದ ಹೇಳುವ ಕರ್ತನನ್ನು ಸ್ತುತಿಸಿರಿ. ನಿಮ್ಮನ್ನು ಕಡೆಯವರೆಗೂ, ಕೈ ಹಿಡಿದು ಎಡವದಂತೆ ಕಾಯಲು ಶಕ್ತನಾದಾತನನ್ನು ಸ್ತುತಿಸಿರಿ.

ಕರ್ತನು ನಿಮ್ಮನ್ನು ತನ್ನ ನೆನಪಿನಲ್ಲಿ ಇಟ್ಟುಕೊಂಡಿರುವದರಿಂದ, ನಿಮಗೆ ಪಾಪ ಕ್ಷಮಾಪಣೆಯನ್ನೂ, ರಕ್ಷಣೆಯನ್ನೂ ನೀಡುವನು. ಪವಿತ್ರಾತ್ಮನ ಬಲವನ್ನೂ, ಅಗ್ನಿ ಅಭಿಷೇಕವನ್ನೂ ನೀಡುವನು. ಸೈತಾನನನ್ನು ಜಯಿಸಲು ಯುದ್ಧಾಯುಧಗಳನ್ನು ನೀಡುವನು. ದೆವ್ವಗಳನ್ನು ಓಡಿಸಲು, ವ್ಯಾಧಿಗಳನ್ನು ಗುಣಪಡಿಸಲು ಬಲವನ್ನು, ಆತ್ಮನ ವರಗಳನ್ನು ನೀಡುವನು. ದೇವರನ್ನು ಆತ್ಮದಿಂದಲೂ, ಸತ್ಯದಿಂದಲೂ ಆರಾಧಿಸುವಂತೆ ಆನಂದ ತೈಲ ಅಭಿಷೇಕವನ್ನು ನೀಡುವನು. ಕಣ್ಣೀರಿನೊಂದಿಗೆ ಗೋಳಾಡಿ ಪ್ರಾರ್ಥಿಸಲು ಪ್ರಾರ್ಥನಾತ್ಮವನ್ನೂ, ವಿಜ್ಞಾಪನಾತ್ಮವನ್ನೂ ನೀಡುವನು. ನಿಮ್ಮನ್ನು ಶ್ರೇಷ್ಠರೆಂದು ಎಣಿಸಿರುವದರಿಂದ ಕ್ರಿಸ್ತನು. ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರ ಭೂತನಾಗಿರುವನು (ಕೊಲಸ್ಸೆ 1:27). ಕ್ರಿಸ್ತನ ಬರುವಿಕೆಯಲ್ಲಿ ನಿಮ್ಮನ್ನು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ನಡೆಸಿ ರೂಪಾಂತರಗೊಳಿಸುವದಕ್ಕಾಗಿಯೇ (2 ಕೊರಿಂ. 3:18) ಪವಿತ್ರಾತ್ಮನು ನಿಮ್ಮೊಳಗೆ ನೆಲೆಸಿರುವನು (1 ಪೇತ್ರ. 4:14). ಆತನು ನಿಮ್ಮನ್ನು ಕ್ರಿಸ್ತನಿಗೆ ಸುಕ್ಕು ಕಳಂಕವಿಲ್ಲದ ಮದುವಣಗಿತ್ತಿಯಾಗಿ ಸಿದ್ಧಪಡಿಸುವನು. ಒಂದು ನಿಮಿಷ ನಿಮ್ಮ ಕಣ್ಣುಗಳನ್ನು ಪರಲೋಕದ ಸಿಂಹಾಸನದ ಕಡೆಗೆ ಎತ್ತಿರಿ! ಒಂದು ಕಡೆ ತಂದೆ ದೇವರು ಗಂಭೀರವಾಗಿ ಸಿಂಹಾಸನದಲ್ಲಿ ಕುಳಿತಿರುವನು. ಆತನ ಬಲಗಡೆ, ಜಯವೀರನಾದ ಕ್ರಿಸ್ತನು ಕುಳಿತಿರುವನು. ಆತನ ಪಕ್ಕದಲ್ಲಿ ಕುಳಿತಿರಲು ನಿಮ್ಮನ್ನು ಕರೆದಿರುವನು (ಪ್ರಕ. 3:21).

ದೇವಜನರೇ, ಈ ಪ್ರಪಂಚದಲ್ಲಿ ನೀವು ಅನ್ಯರೂ, ಪರದೇಶಿಗಳಾಗಿ ಜೀವಿಸಿದರೂ ನೀವು ಪರಲೋಕಕ್ಕೆ ಬಾಧ್ಯರು. ನಿಮಗಾಗಿ ಕರ್ತನು ಮಹಿಮಾ ಸಿಂಹಾಸನವನ್ನು ಸಿದ್ಧಪಡಿಸಿರುವನು. ಈಗಿನ ಕಷ್ಟ ಸಂಕಟಗಳು ಅಲ್ಪವಾದವುಗಳು. ಮುಂದೆ ಪ್ರತ್ಯಕ್ಷವಾಗುವ ಮಹಾ ಪದವಿಗೆ ಸಾಟಿಯಾದವುಗಳಲ್ಲ (ರೋಮಾ. 8:18). ಈ ಭಾಗ್ಯವನ್ನು ತಂದ ಕರ್ತನನ್ನು ಕೃತಜ್ಞತೆಯಿಂದ ಸ್ತುತಿಸಿ ಕೊಂಡಾಡಿರಿ, ಆರಾಧಿಸಿರಿ.

*ನೆನಪಿಗೆ : "ಅವರನ್ನು ನಮ್ಮ ದೇವರಿಗೋಸ್ಕರ ರಾಜ್ಯವನ್ನಾಗಿಯೂ, ಯಜಕರನ್ನಾಗಿಯೂ ಮಾಡಿದಿ. ಅವರು ಭೂಮಿಯ ಮೇಲೆ ಆಳುವರು" ಎಂದು ಹೇಳಿದರು (ಪ್ರಕ. 5:10).*



ಮೇ 24

## ದೇವ ಪ್ರಸನ್ನತೆ!

ಬೆಳಿಗ್ಗೆ : 1 ಪೂ.ವೃ. 22,23,24
ಸಂಜೆ : ಯೋಹಾ. 8:30–59

"ನಿನ್ನ ಜೀವಮಾನದಲ್ಲೆಲ್ಲಾ ಒಬ್ಬನೂ ನಿನ್ನ ಮುಂದೆ ನಿಲ್ಲನು; ನಾನು ಮೋಶೆಯ ಸಂಗಡ ಇದ್ದ ಹಾಗೆ ನಿನ್ನ ಸಂಗಡಲೂ ಇರುವೆನು. ನಿನ್ನನ್ನು ಕೈ ಬಿಡುವದಿಲ್ಲ ತೊರೆಯುವದಿಲ್ಲ, ಸ್ಥಿರಚಿತ್ತನಾಗಿರು, ಧೈರ್ಯದಿಂದಿರು" (ಯೆಹೋಶುವ 1:5,6).

ಒಬ್ಬ ರಾಜಕುಮಾರನ ಸುತ್ತಲೂ ಸೈನಿಕರು ಯಾವ ರೀತಿಯಲ್ಲಿ ನಿಂತು ರಕ್ಷಣೆ ನೀಡುವರೋ, ಅದೇ ರೀತಿಯಲ್ಲಿ ರಾಜಾಧಿರಾಜ ಕರ್ತಾಧಿಕರ್ತನ ಮಕ್ಕಳಾಗಿರುವ ನಿಮ್ಮೊಬ್ಬೊಬ್ಬರನ್ನೂ ರಕ್ಷಿಸಲು ಕರ್ತನು ತನ್ನ ದೇವ ಪ್ರಸನ್ನತೆಯನ್ನೂ ಕೊಟ್ಟಿರುವನು. "ನೀವು ಹಾಡಿ ಕೊಂಡಾಡಿ ಸ್ತುತಿಸುವಾಗ, ದೇವ ಪ್ರಸನ್ನತೆಯನ್ನೂ ದೇವ ಸಮ್ಮುಖವನ್ನೂ, ದೇವ ಮಹಿಮೆಯನ್ನೂ ನಿಶ್ಚಯವಾಗಿ ಗ್ರಹಿಸುವಿರಿ. ನಿಮ್ಮ ವಿರೋಧಿಗಳೆಲ್ಲರೂ ಎದುರು ನಿಲ್ಲುವದಕ್ಕೂ, ಎದುರು ಮಾತಾಡುವದಕ್ಕೂ ಆಗದಂಥ ಬಾಯನ್ನೂ, ಬುದ್ಧಿಯನ್ನೂ ನಾನೇ ನಿಮಗೆ ಕೊಡುತ್ತೇನೆ" (ಲೂಕ. 21:15) ಎಂಬುದು ಕರ್ತನ ವಾಗ್ದಾನವಾಗಿದೆ.

ಒಮ್ಮೆ ನಾನು ಆಂಧ್ರದಲ್ಲಿ ದೇವಸೇವೆಗೆ ಹೋಗಿದ್ದಾಗ, ನನ್ನನ್ನು ನೋಡಲೆಂದು ಒಬ್ಬರು ಬಂದರು. ದೂರದಲ್ಲಿ ಬರುವಾಗಲೇ ಅವರ ಆಕಾರವು, ಮೀಸೆಯು ದೊಡ್ಡ ರೌಡಿಯಂತೆ ಕಂಡರೂ ನಾನು ಅವರನ್ನು ನೋಡಿ ಹತ್ತಿರ ಹೋದಾಗ ಹಾಗೆಯೇ ದೊಪ್ಪೆಂದು ಕೆಳಗೆ ಬಿದ್ದುಬಿಟ್ಟರು. ಅವರ ಕೈ ಹಿಡಿದು ಎತ್ತಿ ನಿಲ್ಲಿಸಿದೆನು. ಅವರು "ನಿಮ್ಮ ಸುತ್ತಲೂ ದೇವ ಪ್ರಸನ್ನತೆ ಇರುವದು. ನನ್ನಿಂದ ಹತ್ತಿರ ಬರಲಾಗಲಿಲ್ಲ. ನನಗಾಗಿ ಪ್ರಾರ್ಥಿಸಿರಿ" ಅಂದರು. ಹೌದು ನೀವು ರಾಜಾಧಿರಾಜನ ಮಕ್ಕಳಾಗಿರುವದಾದರೆ ರಾಜಮುದ್ರೆ ನಿಮ್ಮ ಮೇಲೆ ಇರುವದು. ದೇವ ಪ್ರಸನ್ನತೆ ನಿಮ್ಮನ್ನು ಆವರಿಸಿಕೊಳ್ಳುವದು. ಯೇಸುಕ್ರಿಸ್ತನು ಹೇಳಿದನು. "ನನ್ನನ್ನು ಕಳುಹಿಸಿಕೊಟ್ಟಾತನು ನನ್ನ ಸಂಗಡ ಇದ್ದಾನೆ, ನಾನು ಆತನಿಗೆ ಮೆಚ್ಚಿಕೆಯಾದದ್ದನ್ನು ಯಾವಾಗಲೂ ಮಾಡುವದರಿಂದ ಆತನು ನನ್ನನ್ನು ಒಂಟಿಗನಾಗಿ ಬಿಡಲಿಲ್ಲ" ಎಂದು (ಯೋಹಾ. 8:29). ಅದುವೇ ತಂದೆ ದೇವರ ಪ್ರಸನ್ನತೆ. ಮೋಶೆ ಯಾವಾಗಲೂ ದೇವ ಸಮ್ಮುಖಕ್ಕಾಗಿ, ದೇವ ಪ್ರಸನ್ನತೆಗಾಗಿ ಬಯಸಿದನು. ಅರಣ್ಯದಿಂದ ಕಾನಾನಿಗೆ ಹೋಗುವ ಮಾರ್ಗದಲ್ಲಿ ಅವನ ಪ್ರಾರ್ಥನೆ ಏನಾಗಿತ್ತು! ನೀನೇ ನಮ್ಮ ಸಂಗಡ ಬಾರದೆ ಹೋದರೆ ನಮ್ಮನ್ನು ಇಲ್ಲಿಂದ ಹೋಗ ಗೊಡಿಸಬಾರದು ಅಂದನು. ಆಗ ಕರ್ತನು "ನಾನೇ ನಿಮ್ಮ ಜೊತೆಯಲ್ಲಿ ಬಂದು ನಿಮಗೆ ವಿಶ್ರಾಂತಿಯನ್ನು ದಯಪಾಲಿಸುವೆನು" ಅಂದನು (ವಿಮೋ. 33:14,15).

ದೇವಜನರೇ, ಯಾವಾಗಲೂ ದೇವ ಪ್ರಸನ್ನತೆಯನ್ನು ಬಯಸಿ, ನಿಮ್ಮ ಹತ್ತಿರ ಇಟ್ಟುಕೊಳ್ಳಿರಿ. ಯಾವಾಗಲೂ ಕರ್ತನಿಗೆ ಮೆಚ್ಚಿಗೆಯಾಗಿ ನಡೆದು ಆತನನ್ನು ಮಹಿಮೆ ಪಡಿಸಿ ಸ್ತುತಿಸುತ್ತಲೇ ಇರಿ. ಆತನ ಪ್ರಸನ್ನತೆಗೆ ಸಮನಾದದ್ದು ಈ ಲೋಕದಲ್ಲಿ ಯಾವದೂ ಇಲ್ಲ.

*ನೆನಪಿಗೆ : ನೀನು ನನಗೆ ಜೀವಮಾರ್ಗವನ್ನು ತಿಳಿಯಪಡಿಸುವಿ. ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ; ನಿನ್ನ ಬಲಗೈಯಲ್ಲಿ ಶಾಶ್ವತ ಭಾಗ್ಯವಿದೆ" (ಕೀರ್ತ. 16:11).*

ಮೇ 25

# ದೊರೆತನ ಮಾಡಿರಿ!

ಬೆಳಿಗ್ಗೆ : 1 ಪೂ.ವೃ. 25,26,27
ಸಂಜೆ : ಯೋಹಾ. 9:1–23

"ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ, ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನ ಮಾಡಿರಿ ಎಂದು ದೇವರು ಅವರನ್ನು ಆಶೀರ್ವದಿಸಿದನು" (ಆದಿ.1:28).

ದೇವರು ಮನುಷ್ಯನನ್ನು ಸೃಷ್ಟಿಸಿದ ಕೂಡಲೆ, ಮಾಡಿದ ಮೊದಲನೆಯ ಕಾರ್ಯ, ಅವನನ್ನು ಮನಸಾರೆ ಆಶೀರ್ವದಿಸಿದ್ದು. ಮೂರು ಸಂಗತಿಗಳ ಮೇಲೆ ಮನುಷ್ಯನಿಗೆ ಅಧಿಕಾರವನ್ನು ಆಳ್ವಿಕೆಯನ್ನು ಕೊಟ್ಟನು. 1. ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ, 2. ಆಕಾಶದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ, 3. ಸಮುದ್ರದ ಮೀನುಗಳ ಮೇಲೆಯೂ ದೊರೆತನ ಮಾಡಿರಿ ಎಂದು ಹೇಳಿದನು (ಆದಿ. 1:28).

ನೀವು ಬೇರೆಯವುಗಳ ಮೇಲೆ ದೊರೆತನ ನಡೆಸುವ ಮೊದಲು, ಮೊದಲನೆಯದಾಗಿ ನಿಮ್ಮನ್ನು ನೀವು ಆಳುವದಕ್ಕೆ ತಿಳಿದಿರಬೇಕು. ಆತ್ಮವನ್ನು ಸ್ವಾಧೀನ ಮಾಡಿಕೊಳ್ಳದವನು ಗೋಡೆ ಬಿದ್ದ ಹಾಳೂರಿಗೆ ಸಮಾನ (ಜ್ಞಾನೋ. 25:28) ಎಂದು ಸತ್ಯವೇದ ಹೇಳುತ್ತದೆ. ಅಪೊ.ಪೌಲನು ಹೇಳುತ್ತಾನೆ, ಇತರರನ್ನು ಹೋರಾಟಕ್ಕೆ ಕರೆದ ಮೇಲೆ ನಾನೇ ಅಯೋಗ್ಯನೆನಿಸಿಕೊಂಡೇನೋ ಎಂಬ ಭಯದಿಂದ ನನ್ನ ಮೈಯನ್ನು ನಿಯಂತ್ರಿಸಿ ಸ್ವಾಧೀನ ಪಡಿಸಿಕೊಳ್ಳುತ್ತೇನೆ (1 ಕೊರಿಂ.9:27) ಎಂದು. ಮೊದಲು ನಿಮ್ಮನ್ನೂ, ನಂತರ ಕುಟುಂಬವನ್ನು ಕರ್ತನ ಆಳ್ವಿಕೆಯೊಳಗೆ ಕರೆತನ್ನಿರಿ. ಯಾವಾಗ ನೀವು ಪಾಪದಿಂದ ಬಿಡುಗಡೆ ಹೊಂದಿದಿರೋ, ಸೈತಾನನ ದಾಸತ್ವದಿಂದ ಕರ್ತನು ನಿಮ್ಮನ್ನು ಬಿಡುಗಡೆ ಮಾಡಿರುವನೋ, ಅದರ ನಂತರ ಎಂದಿಗೂ ಶರೀರಕ್ಕಾಗಲಿ, ಸೈತಾನನಿಗಾಗಲಿ, ದಾಸರಾಗಬೇಡಿರಿ. ನೀವು ಕ್ರಿಸ್ತನೊಡನೆ ದೊರೆತನ ಮಾಡಲು ಹುಟ್ಟಿದವರು ಎಂಬ ತಿಳುವಳಿಕೆಯಿಂದ ಎಲ್ಲವನ್ನೂ ಸ್ವಾಧೀನ ಪಡಿಸಿಕೊಂಡು, ದೊರೆತನ ಮಾಡಿರಿ. ನೀವು ತಿರುಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನು ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ ತಂದೆಯೇ ಎಂದು ಕೂಗುತ್ತೇವೆ (ರೋಮಾ. 8:15) ಎಂದು ಅಪೊ. ಪೌಲನು ಬರೆಯುತ್ತಾನೆ.

ದೇವಜನರೇ, ಹಳೆಯ ಒಡಂಬಡಿಕೆಯ ಕಾಲದಲ್ಲಿ ಆಳ್ವಿಕೆ ನಡೆಸಲು ರಾಜತ್ವದ ಅಭಿಷೇಕವನ್ನು ಕರ್ತನು ಕೊಟ್ಟನು. ದಾವೀದನನ್ನು ದೇವರು ಅಭಿಷೇಕಿಸಿದಾಗ, ಅವನು ಕುಟುಂಬದಲ್ಲಿ ಅಲ್ಪನಾಗಿ ಎಣಿಸಲ್ಪಟ್ಟು, ಅಡವಿಯಲ್ಲಿ ಕುರಿಗಳನ್ನು ಮೇಯಿಸುತ್ತಿದ್ದನು. ಆದರೆ ಇತರ ಎಲ್ಲಾ ಸಹೋದರರಿಗಿಂತಲೂ ಅವನು ಶ್ರೇಷ್ಠನೆಂದು ಎಣಿಸಲ್ಪಡಲು, ಅವನ ಮೇಲಿದ್ದ ಅಭಿಷೇಕವೇ ಕಾರಣ. ಈ ಅಭಿಷೇಕ ನಿಮ್ಮನ್ನು ಎಲ್ಲಾ ಜನರಿಗಿಂತ ಮೇಲಾಗಿ ಎತ್ತಲ್ಪಡುವದು.

*ನೆನಪಿಗೆ : ದೇವರೇ ನಿನ್ನ ಸಿಂಹಾಸನವು ಯುಗಯುಗಾಂತರಗಳಲ್ಲಿಯೂ ಇರುವದು. ನಿನ್ನ ರಾಜದಂಡವು ನ್ಯಾಯ ಸ್ಥಾಪಕವಾದದ್ದೇ" (ಕೀರ್ತ. 45:6).*



ಮೇ 26

# ಆಸನ ಪ್ರಾರ್ಥನೆ!

ಬೆಳಿಗ್ಗೆ : 1 ಪೂ.ವೃ. 28,29
ಸಂಜೆ : ಯೋಹಾ. 9:24–41

"ಯೆಹೋವನೇ, ಬಲಿಷ್ಠನು, ಬಲಹೀನನ ಮೇಲೆ ಬೀಳುವಲ್ಲಿ. ನಿನ್ನ ಹೊರತು ರಕ್ಷಕನಿಲ್ಲ. ನಮ್ಮ ದೇವರಾದ ಯೆಹೋವನೇ ನಮ್ಮನ್ನು ರಕ್ಷಿಸು" (2 ಪೂ.ವೃ. 14:11).

ಆಸನು ಯೆಹೂದ್ಯರಲ್ಲಿ ಆರನೇ ಅರಸನು. ಇವನು ಕರ್ತನನ್ನು ಪ್ರೀತಿಸಿ, ಆತನನ್ನು ಹುಡುಕಲು ಪ್ರಾರಂಭಿಸಿದನು. ಇದರಿಂದ ಹತ್ತು ವರ್ಷಗಳು ಆ ದೇಶದಲ್ಲಿ ಸಮಾಧಾನ ನೆಲೆಸಿತ್ತು. ಶತ್ರುಗಳ ಭಯವಿಲ್ಲದೆ, ನಿರ್ಭಯವಾಗಿತ್ತು. ಆದರೆ ಹತ್ತು ವರುಷಗಳ ನಂತರ ಕೂಷ್ಯನಾದ ಜೆರಹನು ಹತ್ತು ಲಕ್ಷ ಸೈನ್ಯವನ್ನೂ, ಮುನ್ನೂರು ರಥಗಳನ್ನೂ ತೆಗೆದುಕೊಂಡು ಇಸ್ರಾಯೇಲ್ಯರ ವಿರುದ್ಧವಾಗಿ ಯುದ್ಧಕ್ಕೆ ಬಂದನು. ಇದರಿಂದ ಆಸನು ಭಯಗೊಂಡು ತನ್ನಲ್ಲಿದ್ದ ಚಿಕ್ಕ ಸೈನ್ಯದಿಂದ ಅಷ್ಟು ದೊಡ್ಡ ಸೈನ್ಯವನ್ನು ಹೇಗೆ ಎದುರಿಸುವದೆಂದು ತಿಳಿಯದೆ ಗಲಿಬಿಲಿಗೊಂಡನು. ಆಗ ಅವನು ದೇವರ ಸಮ್ಮುಖದಲ್ಲಿ ಕುಳಿತು "ಯೆಹೋವನೇ, ಬಲಿಷ್ಠನು, ಬಲಹೀನನ ಮೇಲೆ ಬೀಳುವಲ್ಲಿ ನಿನ್ನ ಹೊರತು ರಕ್ಷಕನಿಲ್ಲ. ನಮ್ಮ ದೇವರಾದ ಯೆಹೋವನೇ ನಮ್ಮನ್ನು ರಕ್ಷಿಸು" ಎಂದು ಆಸಕ್ತಿಯಿಂದ ಮೊರೆಯಿಟ್ಟನು. ಕರ್ತನು ಅವನ ಮೊರೆಯನ್ನು ಲಾಲಿಸಿ ಇಸ್ರಾಯೇಲ್ಯರಿಗೆ ಜಯವನ್ನು ಅನುಗ್ರಹಿಸಿದನು.

ನವಂಬರ್ ತಿಂಗಳು 29ನೇ ತಾರೀಖು ಎರಡು ಸಾವಿರ ವರ್ಷದಲ್ಲಿ ನಾನು ಮಾಲ್ಡೀವಿನಲ್ಲಿ ಸೇವೆಗೆ ಹೋಗಿದ್ದೆನು. ಒಂದು ದಿನ ರಾತ್ರಿ ಭಯಂಕರವಾದ ಶತ್ರು ನನ್ನೊಂದಿಗೆ ಹೋರಾಡಿದನು. ನಾನು ಜಯಗಳಿಸಿದೆ. ಆದಾಗ್ಯೂ, ಬೆಳಿಗ್ಗೆ ಎದ್ದಾಗ, ನನ್ನ ಕೈಕಾಲುಗಳು ಸ್ವಾಧೀನದಲ್ಲಿರಲಿಲ್ಲ. ಪಾರ್ಶ್ವವಾಯು ಹೊಡೆಯಿತೆಂಬುದನ್ನು ಅರಿತೆನು. ಆದರೆ ಕರ್ತನಾದರೋ ನನ್ನ ಪಕ್ಷದಲ್ಲಿದ್ದು ನನ್ನನ್ನು ಸುರಕ್ಷಿತವಾಗಿ ಭಾರತ ದೇಶಕ್ಕೆ ಹಿಂದಿರುಗುವಂತೆ ಸಹಾಯ ಮಾಡಿದನು. ನನ್ನನ್ನು ಗುಣಪಡಿಸುವದು ವೈದ್ಯರಿಗೆ ಸುಲಭವಾದ ಕಾರ್ಯವಾಗಿ ಇರದಿದ್ದರೂ, ಕರ್ತನಿಗೋ ಅದು ಸುಲಭವಾದ ಕಾರ್ಯವಾಗಿತ್ತು. ಆತನೇ ನಿಮ್ಮ ವ್ಯಾಧಿಗಳನ್ನು, ಬಲಹೀನತೆಗಳನ್ನು ಅದ್ಭುತವಾಗಿ ಗುಣಪಡಿಸುವನು.

ದೇವಜನರೇ, ನಿಮಗೆ ವಿರೋಧಿಗಳು ಎಷ್ಟೇ ಇದ್ದರೂ, ಕರ್ತನು ನಿಮ್ಮ ಪಕ್ಷದಲ್ಲಿ ಇರುವನು. ಎಷ್ಟೇ ಬೆಟ್ಟದಂಥ ಸಮಸ್ಯೆಗಳು ಬಂದರೂ, ಎಷ್ಟೇ ದುಷ್ಟ ಜನರು ನಿಮ್ಮ ಸುತ್ತಲೂ ಇದ್ದರೂ ನೀವು ಅಧೈರ್ಯ ಪಡಬೇಕಾಗಿಲ್ಲ. ಸಮಸ್ಯೆಗಳನ್ನು ಬಗೆಹರಿಸುವದು ಕರ್ತನಿಗೆ ಸುಲಭಸಾಧ್ಯ. ಆದ್ದರಿಂದಲೇ ದಾವೀದನು ಹೇಳುತ್ತಾನೆ "ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ. ಆತನು ಇಕ್ಕಟ್ಟಿನಲ್ಲಿ ನಮಗೆ ವಿಶೇಷ ಸಹಾಯಕನು. ಆದುದರಿಂದ ಭೂಮಿಯು ಮಾರ್ಪಟ್ಟರೂ ಬೆಟ್ಟಗಳು ಸಮುದ್ರದಲ್ಲಿ ಮುಳುಗಿಹೋದರೂ ನಮಗೇನೂ ಭಯವಿಲ್ಲ" (ಕೀರ್ತ. 46:1,2).

*ನೆನಪಿಗೆ : ನೀವು ಕರ್ತನನ್ನು ಹೊಂದಿಕೊಂಡಿರುವ ತನಕ ಆತನೂ ನಿಮ್ಮೊಂದಿಗಿರುವನು. ನೀವು ಆತನನ್ನು ಹುಡುಕಿದರೆ ನಿಮಗೆ ಸಿಕ್ಕುವನು; ಆತನನ್ನು ಬಿಟ್ಟರೆ ಆತನೂ ನಿಮ್ಮನ್ನು ಬಿಟ್ಟುಬಿಡುವನು. (2 ಪೂ.ವೃ. 15:2).*

ಮೇ 27

## ಪ್ರಾರ್ಥಿಸಿರಿ!

ಬೆಳಿಗ್ಗೆ : 2 ಪೂ.ವೃ. 1,2,3
ಸಂಜೆ : ಯೋಹಾ. 10:1–21

"ನನ್ನ ಪ್ರಜೆಗಳು ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟನಡತೆಯನ್ನು ಬಿಟ್ಟು ತಿರುಗಿಕೊಂಡು ನನ್ನನ್ನು ಪ್ರಾರ್ಥಿಸಿ ನನ್ನ ದರ್ಶನವನ್ನು ಬಯಸುವದಾದರೆ ನಾನು ಪರಲೋಕದಿಂದ ಲಾಲಿಸಿ ಅವರ ಪಾಪಗಳನ್ನು ಕ್ಷಮಿಸಿ ಅವರ ದೇಶದಲ್ಲಿ ಆರೋಗ್ಯವನ್ನು ದಯಪಾಲಿಸುವೆನು" (2ಪೂ.ವೃ.7:14).

ಅರಸನಾದ ಆಸನು ಶತ್ರುಗಳನ್ನು ಕಂಡು ಭಯಗೊಂಡು ನಿಂತುಬಿಡಲಿಲ್ಲ. ಅವನು ಮಾಡಿದ ಮೊದಲ ಕಾರ್ಯ, ಹೃದಯ ಬಿಚ್ಚಿ ಕರ್ತನ ಬಳಿ ಪ್ರಾರ್ಥಿಸಿದ್ದು. ಇಷ್ಟು ದೊಡ್ಡ ಸೈನ್ಯದೊಡನೆ ಹೋರಾಡಲು ನನಗೆ ಸಾಧ್ಯವಿಲ್ಲ. ಬಲಿಷ್ಠನು ಬಲಹೀನನ ಮೇಲೆ ಬೀಳಲು ನಿನ್ನ ಹೊರತು ರಕ್ಷಕನಿಲ್ಲ. ನಮ್ಮ ದೇವರಾದ ಯೆಹೋವನೇ ನಮ್ಮನ್ನು ರಕ್ಷಿಸು ಎಂದು ಬಲವಾಗಿ ಪ್ರಾರ್ಥಿಸಿದನು.

ಒಮ್ಮೆ ಹಿಜ್ಕೀಯ ರಾಜನಿಗೆ ವಿರೋಧವಾಗಿ ಅಶ್ಶೂರ್ಯದ ಅರಸನಾದ ಸನೆರೀಬನು ದಂಡೆತ್ತಿಬಂದು ಹಿಜ್ಕೀಯನಿಗೆ ಪತ್ರವನ್ನು ಬರೆದು ಕಳುಹಿಸಿದಾಗ, ಹಿಜ್ಕೀಯನ ಆಂತರ್ಯ ಕಳವಳಗೊಂಡಿತು. ಅವನು ಕೂಡಲೇ ದೇವಾಲಯಕ್ಕೆ ಹೋಗಿ ಆ ಪತ್ರವನ್ನು ದೇವರ ಸನ್ನಿಧಿಯಲ್ಲಿ ತೆರೆದಿಟ್ಟು "ಯೆಹೋವನೇ ಕಿವಿಗೊಟ್ಟು ಕೇಳು, ಕಣ್ಣೆಟ್ಟು ನೋಡು" ಎಂದು ಪ್ರಾರ್ಥಿಸಿದನು. ಕರ್ತನು ಆ ಪ್ರಾರ್ಥನೆಯನ್ನು ಕೇಳಿದನು. ಕರ್ತನ ದೂತನು ಹೊರಟು ಬಂದು ಅಶ್ಶೂರ್ಯರ ಪಾಳೆಯದೊಳಗೆ ನುಗ್ಗಿ **1,85,000** ಮಂದಿ ಸೈನಿಕರನ್ನು ಸಂಹರಿಸಿದನು. ಯಾಬೇಚನೆಂಬ ಯೌವನಸ್ಥನ ಜೀವಿತ ಕಷ್ಟ ಸಂಕಟಗಳಿಂದ ತುಂಬಿದ್ದಾಗಿತ್ತು. ಅವನು ಸೋತು ಹೋಗಲಿಲ್ಲ. "ದೇವರೇ, ನೀನು ನನ್ನನ್ನು ವಿಶೇಷವಾಗಿ ಆಶೀರ್ವದಿಸಿ ನನ್ನ ಪ್ರಾಂತ್ಯವನ್ನು ವಿಸ್ತರಿಸಿ ನಿನ್ನ ಹಸ್ತದಿಂದ ನನ್ನನ್ನು ಹಿಡಿದು ಯಾವ ವೇದನೆಯೂ ಉಂಟಾಗದಂತೆ ನನ್ನನ್ನು ರಕ್ಷಿಸಬಾರದೇ ಎಂದು ಮೊರೆಯಿಡಲು ದೇವರು ಅವನ ಮೊರೆಯನ್ನು ಲಾಲಿಸಿದನು" ಎಂದು **1 ಪೂ.ವೃ.4:10** ರಲ್ಲಿ ಓದುತ್ತೇವೆ.

ದೇವಜನರೇ, ಪ್ರಾರ್ಥನೆಯ ಮೇಲೆ ನಂಬಿಕೆ ಇಡಿರಿ. ಕೆಲವು ಸಮಯಗಳಲ್ಲಿ ತಪ್ಪಿತಸ್ಥ ಮನೋಭಾವ ನಿಮ್ಮನ್ನು ಪ್ರಾರ್ಥಿಸದಂತೆ ತಡೆಯಬಹುದು. ಸೈತಾನನೂ ನಿಮ್ಮನ್ನು ಅಧೈರ್ಯಪಡಿಸಿ ಪ್ರಾರ್ಥನೆಯ ಬಗ್ಗೆ ಅಪನಂಬಿಕೆಯನ್ನುಂಟು ಮಾಡಬಹುದು, ಕೆಲವು ಪಾಪಗಳು ನಿಮಗೂ ದೇವರಿಗೂ ನಡುವೆ ನಿಂತು ಬೇರ್ಪಡಿಸಿರಬಹುದು. ಯಾವದೇ ಸ್ಥಿತಿಗತಿಗಳಲ್ಲೂ ನಿಮ್ಮನ್ನು ತಗ್ಗಿಸಿಕೊಂಡು ಪಾಪದರಿಕೆ ಮಾಡಿ, ಕಣ್ಣೀರಿನೊಂದಿಗೆ ಕರ್ತನ ಪಾದಗಳನ್ನು ಹಿಡಿದುಕೊಳ್ಳಿರಿ. ಪಾಪಗಳನ್ನು ಕ್ಷಮಿಸಲು ಆತನು ದಯಾಪರನು, ಪ್ರಾರ್ಥಿಸಲಾಗದಂಥ ಕಠಿಣ ಪರಿಸ್ಥಿತಿ ಇರುವಾಗಲೂ, ನೀವು ಬಲವಾಗಿ ಪ್ರಾರ್ಥಿಸಿಯೇ ತೀರಬೇಕು. ಸೋತುಹೋಗುವಿಕೆಗೆ ಸ್ಥಳ ಕೊಟ್ಟು ಪ್ರಾರ್ಥಿಸುವದನ್ನು ನಿಲ್ಲಿಸದಿರಿ. ಸ್ತುತಿಸುತ್ತಾ ಪ್ರಾರ್ಥಿಸುತ್ತಾಲೇ ಇರುವಾಗ, ಇರುಳು ದೂರ ಸರಿದು ದೇವರ ನಂಬಿಕೆಯ ಬೆಳಕು ನಿಮ್ಮ ಆಂತರ್ಯವನ್ನು ಪ್ರಕಾಶಿಸುವಂತೆ ಮಾಡುವದು. ಆನಂತರ ಪ್ರಾರ್ಥಿಸುವದು ನಿಮಗೆ ಸುಲಭಸಾಧ್ಯ.

*ನೆನಪಿಗೆ : ನಿಮ್ಮನ್ನು ಶುದ್ಧ ಮಾಡಿಕೊಳ್ಳಿರಿ; ಯೆಹೋವನು ನಾಳೆ ನಿಮ್ಮ ಮಧ್ಯದಲ್ಲಿ ಅದ್ಭುತಗಳನ್ನು ನಡಿಸುವನು (ಯೆಹೋ. 3:5).*



ಮೇ 28

## ಸ್ವಾಭಾವಿಕ ಮನುಷ್ಯನು!

ಬೆಳಿಗ್ಗೆ : 2 ಪೂ.ವೃ. 4,5,6
ಸಂಜೆ : ಯೋಹಾ.10:22–42

"ಎಲೀಯನು ನಮ್ಮಂಥ ಸ್ವಭಾವವುಳ್ಳವನಾಗಿದ್ದನು. ಅವನು ಮಳೆ ಬರಬಾರದೆಂದು ಬಹಳವಾಗಿ ಪ್ರಾರ್ಥಿಸಲು ಮೂರು ವರುಷ ಆರು ತಿಂಗಳವರೆಗೂ ಮಳೆಬೀಳಲಿಲ್ಲ" (ಯಾಕೋ.5:17).

'ಎಲೀಯ' ಎಂಬುದು ಉಜ್ಜೀವನದ ಹೆಸರು. ಭಕ್ತಿ, ವೈರಾಗ್ಯದ ಹೆಸರು ಕರ್ತನಿಗಾಗಿ ಹತ್ತಿ ಉರಿಯುವ ಹೆಸರು. ಎಲೀಯನ ಹೆಸರು ನಮ್ಮ ನರನಾಡಿಗಳಲ್ಲಿ ಕರ್ತನಿಗಾಗಿ ಯಾವದಾದರೂ ದೊಡ್ಡ ಕಾರ್ಯಗಳನ್ನು ಮಾಡುವಂತೆ ಉತ್ತೇಜನಗೊಳಿಸುವದು. ಮಾತ್ರವಲ್ಲ ಎಲೀಯನೆಂಬ ಹೆಸರು ಆಸಕ್ತಿಯಿಂದ ಪ್ರಾರ್ಥಿಸುವಂತೆ ಉತ್ಸಾಹಗೊಳಿಸುವದು.

ಅಂದು ಕರ್ಮೆಲ್ ಬೆಟ್ಟದಲ್ಲಿ ದೊಡ್ಡ ಉಜ್ಜೀವನ ಉಂಟಾದದ್ದಕ್ಕೆ ಮುಖ್ಯ ಕಾರಣ, ಎಲೀಯನ ಪ್ರಾರ್ಥನೆಯೇ. ಆಸಕ್ತಿಯಿಂದ ಪ್ರಾರ್ಥಿಸಿದ ಆತನು, ಅಂದು ಇದ್ದ ಬಾಳನ ಎಲ್ಲಾ ಪ್ರವಾದಿಗಳನ್ನು ಸಂಹಾರ ಮಾಡಿದನು. ಆತನ ಆಸಕ್ತಿಯುಳ್ಳ ಪ್ರಾರ್ಥನೆಯ ಮೂಲಕ, ಅದ್ಭುತಗಳ ಮೇಲೆ ಅದ್ಭುತಗಳು ನಡೆದವು. ಸತ್ತವರು ಜೀವದಿಂದ ಎದ್ದರು. ಪ್ರಾರ್ಥಿಸುವವನೇ ಜಯಗಳಿಸುವನು. ತನ್ನ ಪವಿತ್ರತೆಯನ್ನು ಕಾಪಾಡಿಕೊಳ್ಳುವನು. ಪ್ರಾರ್ಥಿಸುವವನನ್ನು ಎದುರಿಸಿ ನಿಲ್ಲಲು ಯಾರಿಂದಲೂ ಸಾಧ್ಯವಿಲ್ಲ. ಪ್ರಾರ್ಥನೆಯಂಥ ಬಲವಾದ ಆಯುಧ ಬೇರೊಂದಿಲ್ಲ. ಎಲೀಯನನ್ನು ಅನೇಕರು ಒಬ್ಬ ಸೂಪರ್‌ಮ್ಯಾನ್ ಆಗಿ ನೋಡುವರು. ಆದರೆ ಸತ್ಯವೇದವು ಆತನು ನಮ್ಮಂಥ ಸ್ವಭಾವವುಳ್ಳ ಮನುಷ್ಯನೆಂದು ಹೇಳುವದು. ನಮಗೆ ಒದಗಿದಂಥ ಕಷ್ಟಗಳು ಅವನಿಗೂ ಬಂದಿರಬಹುದು. ಶೋಧನೆಗಳ ಮೇಲೆ ಶೋಧನೆ ಬಂದಿರಬಹುದು. ಆದರೆ ಆತನು ಆಸಕ್ತಿಯಿಂದ ದೃಢಚಿತ್ತದಿಂದ ಪ್ರಾರ್ಥಿಸುತ್ತಲೇ ಇದ್ದನು. ಅದ್ಭುತಗಳು ನಡೆಯುತ್ತಲೇ ಇದ್ದವು.

ದೇವಜನರೇ, ಯೇಸುಕ್ರಿಸ್ತನು ನಿಮಗೆ ಒಬ್ಬ ಒಳ್ಳೆಯ ಪ್ರಾರ್ಥನಾ ಗೆಳೆಯನಾಗಿರಲಿ. ನಿಮ್ಮ ಪ್ರಾರ್ಥನಾ ಸಮಯಗಳಲ್ಲಿ ನಿಮ್ಮೊಂದಿಗೆ ಮೊಳಕಾಲೂರಿರುವನು ಎಂಬುದನ್ನು ನಂಬಿ. ಗಾಯಗೊಂಡ ಆತನ ಕರವನ್ನು ಹಿಡಿದುಕೊಳ್ಳಿರಿ. ನನ್ನೊಂದಿಗೆ ಒಂದು ಗಂಟೆಯಾದರೂ ಪ್ರಾರ್ಥಿಸಬಾರದಾ? ಎಂದು ಆತನು ನಿಮ್ಮನ್ನು ಕರೆಯುತ್ತಿರುವನು. ಎಲೀಯ, ಎಲೀಷರ ಚರಿತ್ರೆ ನಿಮ್ಮಲ್ಲಿ ಪ್ರಾರ್ಥನಾತ್ಮವನ್ನು ಹತ್ತಿ ಉರಿಸಲಿ. ಅವರು ಆಸಕ್ತಿಯಿಂದ ಎಡಬಿಡದೆ ಪ್ರಾರ್ಥಿಸಿ ತಮ್ಮ ಕಾಲದಲ್ಲಿ ಉಜ್ಜೀವನವನ್ನು ತಂದರು. ವಿಗ್ರಹ ಆರಾಧನೆಯನ್ನು ನಿರ್ಮೂಲ ಮಾಡಿದರು. ಕ್ರಿಸ್ತನ ಬರೋಣದಲ್ಲಿ ನೀವೂ ಎಲೀಯ, ಎಲೀಷರಂತೆ ಅಗ್ನಿರಥಗಳಾಗಿ ಪ್ರಕಾಶಿಸುವಿರಾ?

*ನೆನಪಿಗೆ : ಯೆಹೋವನ ಆಗಮನದ ಭಯಂಕರವಾದ ಮಹಾದಿನವು ಬರುವದಕ್ಕೆ ಮುಂಚೆಯೇ ಪ್ರವಾದಿಯಾದ ಎಲೀಯನನ್ನು ನಿಮ್ಮ ಬಳಿಗೆ ಕಳುಹಿಸುವೆನು (ಮಲಾ. 4:5).*

ಮೇ 29

# ಕರ್ತನ ಮುಂದೆ!

ಬೆಳಿಗ್ಗೆ : 2 ಪೂ.ವೃ. 7,8,9
ಸಂಜೆ : ಯೋಹಾ. 11:1–27

"ನಾನು ಸನ್ನಿಧಿಸೇವೆ ಮಾಡುತ್ತಿರುವ ಇಸ್ರಾಯೇಲ್ ದೇವರಾದ ಯೆಹೋವನಾಣೆ, ನಾನು ಸೂಚಿಸಿದ ಹೊರತು ಇಂದಿನಿಂದ ಕೆಲವು ವರುಷಗಳವರೆಗೆ ಮಳೆಯಾಗಲಿ ಮಂಜಾಗಲಿ ಬೀಳುವದಿಲ್ಲ ಅಂದನು" (1 ಅರಸು. 17:1).

ಎಲೀಯನು ಅಹಾಬನಿಗೆ ತನ್ನನ್ನು ಪರಿಚಯಿಸಿಕೊಳ್ಳುವಾಗ ಕರ್ತನ ಸನ್ನಿಧಿ ಸೇವೆ ಮಾಡುವ ಅಥವಾ ಕರ್ತನ ಮುಂದೆ ನಿಲ್ಲುವ ನಾನು ಎಂಬುದಾಗಿ ಪರಿಚಯ ಪಡಿಸಿಕೊಂಡನು. ಇದಕ್ಕಿಂತ ಮಿಗಿಲಾದ ಭಾಗ್ಯ ಇನ್ನಾವುದುಂಟು! ಫರೋಹನ ಅರಮನೆಯಲ್ಲಿದ್ದ ಮಂತ್ರವಾದಿಗಳು, ದೇವ ಮನುಷ್ಯನಾದ ಮೋಶೆಯನ್ನು ಎದುರಿಸಿ ನಿಲ್ಲಲಾಗಲಿಲ್ಲ. ದಾನಿಯೇಲನು ಕರ್ತನ ಮುಂದೆ ನಿಂತದ್ದರಿಂದ ಬ್ಯಾಬಿಲೋನಿನ ಜ್ಞಾನಿಗಳು ದಾನಿಯೇಲನ ಜ್ಞಾನದ ಮುಂದೆ ನಿಲ್ಲಲಾಗಲಿಲ್ಲ.

ಅಹಾಬ ರಾಜನ ಮುಂದೆ ನಿಂತ ಎಲೀಯನು "ನಾನು ಹೇಳಿದ ಹೊರತು" ಎಂದು ಮೊಳಗಿದನು. ದೇವಸೇವಕರ ಮಾತುಗಳಿಗೆ ಪ್ರಕೃತಿಯು ತಲೆಬಾಗುವದು. ಅವರು ತಮ್ಮ ಮಾತುಗಳನ್ನು ಕರ್ತನು ನಿಶ್ಚಯವಾಗಿ ಘನಪಡಿಸುವನು ಎಂದು ಸ್ಪಷ್ಟವಾಗಿ ಅರಿತಿದ್ದರು. ಅವರ ಮಾತಿನ ಮೇಲೆ ಅವರಿಗೆ ಬಲವಾದ ನಂಬಿಕೆ ಇತ್ತು. ದೇವಮನುಷ್ಯರ ಮಾತಿಗೆ ಶಕ್ತಿ ಉಂಟು. ಯೆಹೋಶುವನ ಮಾತಿಗೆ ವಿಧೇಯರಾಗಿ ಸೂರ್ಯ ಚಂದ್ರರು ಹಾಗೆಯೇ ನಿಂತುಬಿಟ್ಟವು (ಯೆಹೋ. 10:12,13). ಪ್ರಾರ್ಥಿಸುವ ಮನುಷ್ಯನೇ ರಾಜರು ನಿನಗೆ ಸಾಕುತಂದೆಗಳು, ಅವರ ರಾಣಿಯರು ನಿನಗೆ ಸಾಕುತಾಯಿಯರು ಆಗುವರು; ನಿನಗೆ ಸಾಷ್ಟಾಂಗ ಅಡ್ಡಬಿದ್ದು ನಿನ್ನ ಪಾದ ಧೂಳಿಯನ್ನು ನೆಕ್ಕುವರು... ನನ್ನನ್ನು ನಿರೀಕ್ಷಿಸಿಕೊಂಡವರು ಆಶಾಭಂಗಪಡರು (ಯೆಶಾ. 49:23) ಎಂಬುದು ಕರ್ತನ ವಾಗ್ದಾನವಾಗಿರುವದು. ಎಲೀಯನ ಶಿಷ್ಯನಾದ ಎಲೀಷನೂ ಕೂಡ "ನಾನು ಸನ್ನಿಧಿಸೇವೆ ಮಾಡುತ್ತಿರುವ ಸೇನಾಧೀಶ್ವರನಾದ ಯೆಹೋವನಾಣೆ" ಎಂದು ಉಚ್ಚರಿಸುವದನ್ನು 2 ಅರಸು 3:14ರಲ್ಲಿ ಕಾಣುತ್ತೇವೆ. ಪ್ರತಿಯೊಬ್ಬ ದೇವಭಕ್ತರ ಶ್ರೇಷ್ಠತೆ ಅದುವೇ. ಜಕರೀಯನಿಗೆ ದೇವದೂತನಾದ ಗಬ್ರಿಯೇಲನು ಸಂಧಿಸಿದಾಗ "ನಾನು ದೇವರ ಸನ್ನಿಧಿಯಲ್ಲಿ ನಿಲ್ಲುವ ಗಬ್ರಿಯೇಲನು" ಎಂದೇ ತನ್ನನ್ನು ಪರಿಚಯಿಸಿಕೊಂಡನು (ಲೂಕ. 1:19).

ದೇವಮಕ್ಕಳೇ, ಪ್ರತಿದಿನವೂ ದೇವರ ಸನ್ನಿಧಾನದಲ್ಲಿ ನಿಲ್ಲಿರಿ. ಪ್ರಾರ್ಥನಾವೀರನಾದ ಯೇಸುಕ್ರಿಸ್ತನ ಪ್ರಾರ್ಥನಾ ಜೀವಿತ ನಿಮ್ಮನ್ನು ಉತ್ತೇಜನಗೊಳಿಸಲಿ. ಆತನು ಪ್ರತಿದಿನವೂ ಹೊತ್ತಾರೆಯಲ್ಲಿ ತಂದೆ ದೇವರ ಮುಂದೆ ನಿಂತು ಆ ದಿನವನ್ನು ಜಯಭರಿತವಾಗಿ ಮುಗಿಸಲು ದೇವಬಲವನ್ನು ಪಡೆದನು. ಅದರಂತೆ ನೀವು ನಿಮ್ಮ ಜೀವಿತದಲ್ಲಿ ಕರ್ತನಿಗಾಗಿ ಜಯಶಾಲಿಗಳಾಗಿ ನಿಲ್ಲಿರಿ.

*ನೆನಪಿಗೆ : ಮುಂಜಾನೆ ಇನ್ನೂ ಮೊಬ್ಬಿರುವಾಗ ಆತನು ಎದ್ದು ಹೊರಟು ಅಡವಿಯ ಸ್ಥಳಕ್ಕೆ ಹೋಗಿ ದೇವರನ್ನು ಪ್ರಾರ್ಥಿಸುತ್ತಿದ್ದನು (ಮಾರ್ಕ. 1:35).*



ಮೇ 30

# ನೀನು ನನ್ನವನು!

ಬೆಳಿಗ್ಗೆ : 2 ಪೂ.ವೃ. 10,11,12
ಸಂಜೆ : ಯೋಹಾ.11:28–57

"ಭಯಪಡಬೇಡ, ನಾನು ನಿನ್ನನು ವಿಮೋಚಿಸಿದೆನಲ್ಲಾ, ನಿನ್ನ ಹೆಸರು ಹಿಡಿದು ಕರೆದೆನಲ್ಲಾ; ನೀನು ನನ್ನವನೇ" (ಯೆಶಾ. 43:1).

ತಾವು ಹೆತ್ತ ಮಕ್ಕಳನ್ನು ಸಾಕಿ ಸಲಹುವ ಜವಾಬ್ದಾರಿ, ತಂದೆ ತಾಯಿಗಳದು. ಒಬ್ಬ ತಂದೆ ತನ್ನ ಮಕ್ಕಳಿಗಾಗಿ ಸಂಪಾದಿಸಿ ಅವರಿಗೆ ಬೇಕಾದ ಊಟ, ಬಟ್ಟೆ ಕೊಟ್ಟು ವಿದ್ಯೆ ಕೊಟ್ಟು ಅವರ ಜೀವನವನ್ನು ರೂಪಿಸಬೇಕೆಂಬುದಾಗಿ ಬಯಸುತ್ತಾನೆ. ಅದರಂತೆಯೇ ನಮ್ಮನ್ನು ಸೃಷ್ಟಿಸಿದ ಕರ್ತನಿಗೂ ನಮ್ಮ ಮೇಲೆ ಅಕ್ಕರೆ ಜವಾಬ್ದಾರಿ ಉಂಟು. ಕರ್ತನು ನನ್ನನ್ನು ಸೃಷ್ಟಿಸಿರುವನು ಎಂದು ನೆನಸಿ ಭಕ್ತನಾದ ಯೋಬನು ಈ ರೀತಿಯಾಗಿ ಹೇಳುತ್ತಾನೆ. "ನಾನು ದೇವರಾತ್ಮನಿಂದಲೇ ನಿರ್ಮಿತನಾಗಿದ್ದೇನೆ; ನನ್ನ ಜೀವವು ಸರ್ವಶಕ್ತನ ಶ್ವಾಸದಿಂದುಂಟಾಗಿದೆ" ಎಂದು (ಯೋಬ.33:4). ಅಪೊ. ಪೌಲನು ಹೇಳುತ್ತಾನೆ– "ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ಇರುತ್ತೇವೆ" (ಅ.ಕೃ. 17:28) ಎಂದು.

ನಮ್ಮನ್ನು ಎಡಬಿಡದೆ ಗಮನಿಸುತ್ತಿರುವ ಕರ್ತನು, ನಿನ್ನನ್ನು ಸೃಷ್ಟಿಸಿ ರೂಪಿಸಿದವನಾದ "ಯೆಹೋವನಾದ ನಾನು ನಿನ್ನನ್ನು ವಿಮೋಚಿಸಿದ್ದೇನಲ್ಲಾ, ನಿನ್ನ ಹೆಸರು ಹಿಡಿದು ಕರೆದೆನಲ್ಲಾ; ನೀನು ನನ್ನವನೇ" ಎಂದು ಹೇಳುತ್ತಾನೆ (ಯೆಶಾ. 43:1). ನಾವು ಆತನ ಮಾರ್ಗದಲ್ಲಿ ನಡೆಯುತ್ತಿರುವೆವಾ? ಎಂದು ಗಮನಿಸಲು ಆತನಿಗೆ ಒಂದು ಉದ್ದೇಶವುಂಟು. ತನ್ನ ಸಾರೂಪ್ಯದಲ್ಲಿ ಸೃಷ್ಟಿಸಲ್ಪಟ್ಟ ಮಾನವರು ತನ್ನ ಉತ್ತಮವಾದ ಗುಣಾತಿಶಯಗಳನ್ನು ಪಡೆಯಬೇಕೆಂದು ಬಯಸುವಾತನಾಗಿದ್ದಾನೆ. ಅರಸನಾದ ದಾವೀದನು ಹೇಳುತ್ತಾನೆ "ನಾನು ಗುಪ್ತ ಸ್ಥಳದಲ್ಲಿ ಏರ್ಪಡುತ್ತಾ ಭೂಗರ್ಭದಲ್ಲಿ ರಚಿಸಲ್ಪಡುತ್ತಾ ಇದ್ದಾಗ, ನನ್ನ ಅಸ್ತಿಪಂಜರವು ನಿನಗೆ ಮರೆಯಾಗಿದ್ದಿಲ್ಲ. ನಾನು ಇನ್ನು ಕೇವಲ ಪಿಂಡವಾಗಿರುವಾಗ ನಿನ್ನ ಕಣ್ಣುಗಳು ನನ್ನನ್ನು ನೋಡಿದವು. ನನ್ನ ಆಯುಷ್ಕಾಲವು ಪ್ರಾರಂಭವಾಗುವ ಮೊದಲೇ ಅದರ ಎಲ್ಲಾ ದಿನಗಳು ನಿನ್ನ ಪುಸ್ತಕದಲ್ಲಿ ಬರೆಯಲ್ಪಟ್ಟವು" (ಕೀರ್ತ. 139:15,16) ಎಂದು. ಹೌದು ಆತನು ಪ್ರತಿಯೊಬ್ಬರ ಪ್ರಾರಂಭ ಹಾಗೂ ಅಂತ್ಯವನ್ನು ಬಲ್ಲಾತನು. ತಾನು ಸೃಷ್ಟಿಸಿದ ಮನುಷ್ಯನು ಸೈತಾನನಿಂದ ವಂಚಿಸಲ್ಪಟ್ಟು ಪಾಪದಲ್ಲಿ ಬಿದ್ದುಹೋದಾಗ, ಅಂದೇ ಅವನನ್ನು ನಾಶಗೊಳಿಸಬಹುದಾಗಿತ್ತು. ಆದರೆ ಕರ್ತನು ಹಾಗೆ ಮಾಡಲಿಲ್ಲ. ತನ್ನ ಒಬ್ಬನೇ ಮಗನನ್ನು ತಾನು ಸೃಷ್ಟಿಸಿದ ಮಾನವನ ಪಾಪವಿಮೋಚನೆಗಾಗಿ, ಪ್ರಾಯಶ್ಚಿತ್ತ ಯಜ್ಞವಾಗಿ ಕಲ್ವಾರಿ ಶಿಲುಬೆಯಲ್ಲಿ ಅರ್ಪಿಸಿದ್ದರಲ್ಲಿ ಆತನ ಪ್ರೀತಿ ಪ್ರಕಟವಾಗಿದೆ.

ದೇವಜನರೇ, ಇಂದಿಗೂ ಆತನು ಹೆಸರು ಹಿಡಿದು "ಮಗನೇ, ಮಗಳೇ, ನೀನು ನನ್ನವನೇ, ನನ್ನವಳೇ, ಭಯಪಡಬೇಡ" ಎಂದು ಕರೆಯುತ್ತಿರುವನು. ಆತನ ಸ್ವರಕ್ಕೆ ಕಿವಿಗೊಡುವಿರಾ?

*ನೆನಪಿಗೆ : ನಿನ್ನ ಜೀವವನ್ನು ನಾಶದಿಂದ ತಪ್ಪಿಸುವವನೂ ಪ್ರೀತಿ ಕೃಪೆಗಳೆಂಬ ಕಿರೀಟದಿಂದ ನಿನ್ನನ್ನು ಶೃಂಗರಿಸುವವನೂ ಆಗಿದ್ದಾನೆ (ಕೀರ್ತ. 103:4).*